
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಿರತೆ ದಿನ

ಜೈಪುರದ ಝಾಲಾನಾ ಚಿರತೆ ಸಫಾರಿ ಪಾರ್ಕ್‌ನಲ್ಲಿ ‘ಚಂದಾ’ ಹೆಸರಿನ ಚಿರತೆಯು ನೀರು ಕುಡಿದ ದೃಶ್ಯ ‘ಅಂತರರಾಷ್ಟ್ರೀಯ ಚಿರತೆ ದಿನ’ದಂದು (ಮೇ 3) ಕ್ಯಾಮೆರಾ ಕಣ್ಣಿಗೆ ಸೆರೆಯಾಯಿತು



4 DISCIPLINES. 400+ COMBINATIONS. UNLIMITED POSSIBILITIES.

Engineering | Humanities | Management | Sciences

LAST DATE TO REGISTER

08[TH] MAY 2025

NAAC A++ ACCREDITED

CREATE WHAT COMES NEXT

At GITAM, our students don't wait for the future. They build it, test it, and launch it.

TECHNOLOGY EXPLORATION & PRODUCT ENGINEERING (TEPE) CENTRE

A hands-on innovation lab where students move from concept to prototype through a guided process of ideation, design, and development.

VENTURE DEVELOPMENT CENTRE (VDC)

If you have a startup idea, here you'll receive the guidance, mentorship, and resources to take it forward.

MULTIDISCIPLINARY UNIT OF RESEARCH ON TRANSLATIONAL INITIATIVES (MURTI) LABS

A collaborative think tank driving interdisciplinary research that addresses regional, national, and global challenges.

APPLIED EDUCATION: APPLICABLE FOR LIFE

With a curriculum curated with the future in mind, our industry collaborations give students direct access to valuable practical experience.

RECENT HIGHLIGHTS



Virya Autonomous Technologies (Maini Group), Infosys and GITAM have set up a Software-Defined Vehicles Lab where students develop market-ready autonomous vehicles.



Sirena Technologies has established a Research and Development centre for Artificial Intelligence and Robotics at the heart of the Bengaluru campus.


A VIBRANT CAMPUS LIFE

At GITAM, your experience extends to every corner of the campus and beyond.


Strong Alumni Network



Comfortable Student Accommodation



Multi-Sport Facilities



21+ Student Clubs



ACADEMIC COLLABORATIONS

GW | WISCONSIN | UNCW | Coventry University | ELON UNIVERSITY | PennState | BINGHAMTON UNIVERSITY STATE UNIVERSITY OF NEW YORK

Admissions Open | Bengaluru | www.gitam.edu | Call: 8884984000

ಭಾನುವಾರ, ಮೇ 4, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 123 | ಪುಟ 30
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಮಿಂಚಿನ ಅರ್ಧಶತಕ

ಆರ್‌ಸಿಬಿಯ ರೊಮೆರಿಯೊ ಶೆಫರ್ಡ್ ಶನಿವಾರ ಐಪಿಎಲ್‌ನಲ್ಲಿ ಎರಡನೇ ಅತಿವೇಗದ ಅರ್ಧಶತಕ ದಾಖಲಿಸಿದರು. ಕೆ.ಎಲ್.ರಾಹುಲ್, ಪ್ಯಾಟ್ ಕಮಿನ್ಸ್ ಜೊತೆ ಈ ದಾಖಲೆ ಹಂಚಿಕೊಂಡರು. ಅತಿವೇಗದ ಅರ್ಧಶತಕದ ದಾಖಲೆ ಯಶಸ್ವಿ ಜೈಸ್ವಾಲ್ (13) ಹೆಸರಿನಲ್ಲಿದೆ.

ರನ್	ಎಸೆತ	ಬೌಂಡರಿ	ಸಿಕ್ಸರ್
53*	14	4	6

ಕೋಮು ಹಿಂಸೆ ನಿಗ್ರಹಕ್ಕೆ ಪಡೆ

ಕರಾವಳಿ: ಗಲಭೆ ಕಡಿವಾಣಕ್ಕೆ ಸರ್ಕಾರದ ಕ್ರಮ • ಸಹಜ ಸ್ಥಿತಿಯತ್ತ ಜನಜೀವನ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೋಮು ಹಿಂಸಾಚಾರ ನಿಯಂತ್ರಣಕ್ಕಾಗಿ ‘ಕೋಮು ಹಿಂಸೆ ನಿಗ್ರಹ ಕಾರ್ಯಪಡೆ’ ರಚಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸುಹಾಸ್ ಶೆಟ್ಟಿ ಹತ್ಯೆಯ ನಂತರ ಕೆಲವೆಡೆ ಚೂರಿ ಇರಿತ–ದಾಳಿಯಿಂದ ಪ್ರಕ್ಷುಬ್ಧಗೊಂಡಿದ್ದ, ಉಭಯ ಜಿಲ್ಲೆಗಳಲ್ಲಿಯ ಜನಜೀವನ ಶನಿವಾರ ಸಹಜ ಸ್ಥಿತಿಗೆ ಮರಳಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಇಲಾಖೆ ಎಲ್ಲೆಡೆ ಕಟ್ಟೆಚ್ಚರ ವಹಿಸಿದೆ. ನಿಷೇಧಾಜ್ಞೆ ಅವಧಿ ಕಡಿತಗೊಳಿಸಿದ್ದು, ಭಾನುವಾರ (ಮೇ 4) ಬೆಳಿಗ್ಗೆ 6ಕ್ಕೆ ಮುಕ್ತಾಯವಾಗಲಿದೆ.

ಗುಂಪು ಹಲ್ಲೆಯಿಂದ ಕೇರಳದ ಮೊಹಮ್ಮದ್ ಅಶ್ರಫ್ ಹತ್ಯೆ, ಹಿಂದುತ್ವ ಕಾರ್ಯಕರ್ತ–ರೌಡಿ ಶೀಟರ್ ಸುಹಾಸ್ ಶೆಟ್ಟಿ ಕೊಲೆಯ ನಂತರ ಇಲ್ಲಿನ ಕೋಮು ಸೂಕ್ಷ್ಮ ಪರಿಸ್ಥಿತಿಯನ್ನು ಅವಲೋಕಿಸಲು ಗೃಹ ಸಚಿವ ಜಿ.ಪರಮೇಶ್ವರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರು ಹಿರಿಯ ಪೊಲೀಸ್ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿ ಜೊತೆ ಶನಿವಾರ ಇಲ್ಲಿ ಸಭೆ ನಡೆಸಿದರು.

6ನೇ ಪುಟ ನೋಡಿ



ಮಂಗಳೂರಲ್ಲಿ ಗೃಹ ಸಚಿವ ಜಿ.ಪರಮೇಶ್ವರ ನಡೆಸಿದ ಸಭೆಯಲ್ಲಿ ಸಚಿವ ದಿನೇಶ್ ಗುಂಡೂರಾವ್, ಎಡಿಜಿಪಿ ಆರ್.ಹಿತೇಂದ್ರ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಒಂದು ಕಾಲದಲ್ಲಿ ಈ ಜಿಲ್ಲೆಗಳಿಗೆ ಜನ ಸಂತೋಷದಿಂದ ಬರುತ್ತಿದ್ದರು. ಜನ ಮತ್ತೆ ಖುಷಿಯಿಂದ ಈ ಪ್ರದೇಶಕ್ಕೆ ಬರುವ ರೀತಿ ಮಾಡುತ್ತೇವೆ

ಜಿ.ಪರಮೇಶ್ವರ
ಗೃಹ ಸಚಿವ

ಎಂಟು ಆರೋಪಿಗಳ ಬಂಧನ

ಹಿಂದುತ್ವವಾದಿ ಕಾರ್ಯಕರ್ತ, ರೌಡಿ ಶೀಟರ್ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ಎಂಟು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ‘ಎಲ್ಲ ಆರೋಪಿಗಳು ಪೊಲೀಸ್ ಕಸ್ಟಡಿಯಲ್ಲಿದ್ದಾರೆ’ ಎಂದು ಗೃಹಸಚಿವ ಜಿ.ಪರಮೇಶ್ವರ ತಿಳಿಸಿದರು.

ಬಜಪೆ ಬಳಿಯ ಕಿನ್ನಿಪದವಿನಲ್ಲಿ ಮೇ 1ರಂದು ರಾತ್ರಿ ಸುಹಾಸ್ ಶೆಟ್ಟಿ ಕೊಲೆ ನಡೆದಿತ್ತು. ಕಿನ್ನಿಪದವಿನಲ್ಲಿ ವಾಸವಾಗಿರುವ ಪೇಜಾವರ ಗ್ರಾಮದ ಶಾಂತಿಗುಡ್ಡೆಯ ಅಬ್ದುಲ್ ಸಫ್ವಾನ್ (29), ಶಾಂತಿಗುಡ್ಡೆಯ ನಿಯಾಜ್ (28), ಕೆಂಜಾರು ಗ್ರಾಮದ ಮೊಹಮ್ಮದ್ ಮುಝಮಿಲ್ (32), ಕಳವಾರು ಕುರ್ಸುಗುಡ್ಡೆಯ ಕಲಂದರ್ ಶಾಫಿ (31), ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲ್ಲೂಕಿನ ರುದ್ರಪಾದೆಯ ರಂಜಿತ್ (19), ಕಳಸ ಕೋಟೆ ಹೊಳೆ ಮಾವಿನಕೆರೆ ಗ್ರಾಮದ ನಾಗರಾಜ್ (20), ಜೋಕಟ್ಟೆಯ ಮೊಹಮ್ಮದ್ ರಿಜ್ವಾನ್ (28) ಹಾಗೂ ಕಾಟಿಪಳ್ಳ ಮಂಗಳಪೇಟೆಯ ಆದಿಲ್ ಮೆಹರೂಫ್ ಬಂಧಿತ ಆರೋಪಿಗಳು ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ಮಾಹಿತಿ ನೀಡಿದರು.

6ನೇ ಪುಟ ನೋಡಿ

‘ಎಎನ್‌ಎಫ್ ಸಿಬ್ಬಂದಿ ಹೊಸ ಕಾರ್ಯಪಡೆಗೆ’

‘ಸದ್ಯಕ್ಕೆ ರಾಜ್ಯದಲ್ಲಿ ನಕ್ಸಲ್ ಚಟುವಟಿಕೆ ಇಲ್ಲ. ಹಾಗಾಗಿ ಎಎನ್‌ಎಫ್ ಅನ್ನು ಬರ್ಕಾಸ್ತುಗೊಳಿಸುತ್ತೇವೆ. ಅದರಲ್ಲಿರುವ ಸಿಬ್ಬಂದಿಯನ್ನು ಕೋಮು ಹಿಂಸೆ ನಿಗ್ರಹ ಕಾರ್ಯಪಡೆಗೆ ಬಳಸಿಕೊಳ್ಳುತ್ತೇವೆ. ಕೆಲ ಸಿಬ್ಬಂದಿಯನ್ನು ಬೇರೆ ಕಡೆಯಿಂದ ನೇಮಿಸುತ್ತೇವೆ’ ಎಂದು ಪರಮೇಶ್ವರ ಹೇಳಿದರು.

‘ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಕೆಲ ವರ್ಷಗಳಿಂದ ಕೋಮು ಹಿಂಸಾಚಾರ ಮರುಕಳಿಸುತ್ತಿದೆ. ಅನೇಕ ಸಂದರ್ಭಗಳಲ್ಲಿ ಈ ಕಾರಣಕ್ಕಾಗಿಯೇ ಈ ಎರಡು ಜಿಲ್ಲೆಗಳು ರಾಜ್ಯ ಮತ್ತು ರಾಷ್ಟ್ರದ ಗಮನ ಸೆಳೆದಿವೆ. ಈ ಎರಡು ಜಿಲ್ಲೆಗಳಲ್ಲಿ ಶಾಂತಿ ಸ್ಥಾಪಿಸುವುದೇ ಈ ಕಾರ್ಯಪಡೆ ರಚನೆಯ ಉದ್ದೇಶ’ ಎಂದು ತಿಳಿಸಿದರು.

ಕೋಮು ಹಿಂಸೆ ನಿಗ್ರಹ ಕೋಶವನ್ನು ಈ ಹಿಂದೆ ರಚಿಸಿದ್ದೆವು. ಆದರೆ ಅದು ಪೊಲೀಸ್ ಬಲದ ಒಳಗೆ ಇತ್ತು. ಈಗ ಸ್ಥಾಪಿಸುವ ಕಾರ್ಯಪಡೆ ಪ್ರತ್ಯೇಕ ಘಟಕವಾಗಿ ಕಾರ್ಯನಿರ್ವಹಿಸಲಿದೆ ಎಂದರು.

6 ವರ್ಷದಲ್ಲಿ 280ಕ್ಕೂ ಹೆಚ್ಚು ಕಾಡುಪ್ರಾಣಿ ಬಲಿ • ಅಪಘಾತ ತಡೆಗಿಲ್ಲ ಕ್ರಮ

ವನ್ಯಜೀವಿಗೆ ಉರುಳಾದ ಹೆದ್ದಾರಿಗಳು

• ಓದೇಶ ಸಕಲೇಶಪುರ

ಒಳನೋಟ

ರಾಮನಗರ: ಘಟನೆ 1: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಮತ್ತು ಸಾವನದುರ್ಗ ಅರಣ್ಯ ಪ್ರದೇಶದ ನಡುವೆ ಹಾದು ಹೋಗಿರುವ ಬೆಂಗಳೂರು–ಕನಕಪುರ ರಸ್ತೆಯ ದೇವಿಕಾ ರಾಣಿ–ರೋರಿಚ್ ಎಸ್ಟೇಟ್ ಬಳಿ 2022 ಮಾರ್ಚ್ 25ರಂದು ರಸ್ತೆ ದಾಟುತ್ತಿದ್ದ ಕಾಡಾನೆಗೆ ವೇಗವಾಗಿ ಬಂದ ಬಿಎಂಟಿಸಿ ಬಸ್ ಗುದ್ದಿತು. ಡಿಕ್ಕಿಯ ತೀವ್ರತೆಗೆ ಗಾಯಗೊಂಡು ನೆಲಕ್ಕುರುಳಿದ ಆನೆ, ನೋವಿನಲ್ಲೇ ಮೆತ್ತಗೆ ಮೇಲಕ್ಕೆದ್ದು ಕಾಡು ಹೊಕ್ಕಿತು. ಮಾರನೇ ದಿನ ಘಟನಾ ಸ್ಥಳದಿಂದ ಅನತಿ ದೂರದಲ್ಲಿ ಆನೆ ಕೊನೆಯುಸಿರೆಳೆದಿತ್ತು.

ಘಟನೆ 2: ರಾಮನಗರ ಜಿಲ್ಲೆಯ ದೊಡ್ಡಮಣ್ಣುಗುಡ್ಡೆ ಅರಣ್ಯದ ಕಡೆಯಿಂದ 2024ರ ಜ. 31ರಂದು ಆಹಾರ ಅರಸಿ ಬಂದ ಕರಡಿಗೆ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ–275ಗೆ ಅಡ್ಡವಾಗಿ ನಿರ್ಮಿಸಿದ್ದ ತಂತಿ ಬೇಲಿ ಎದುರಾಯಿತು. ಬೇಲಿ ಏರಿ ರಸ್ತೆಗಿಳಿದಿದ್ದ ಕರಡಿಗೆ ವೇಗವಾಗಿ ಬಂದ ವಾಹನವೊಂದು ಗುದ್ದಿತು. ಡಿಕ್ಕಿಯ ತೀವ್ರತೆಗೆ ಕರಡಿಯ ದೇಹದ ಭಾಗಗಳು ಛಿದ್ರಗೊಂಡಿದ್ದವು.

ಅಭಿವೃದ್ಧಿ ಹೆಸರಿನ ಹೆದ್ದಾರಿಗಳು ಹಾಗೂ ರಸ್ತೆಗಳಲ್ಲಿ ನಿತ್ಯ ಸಂಭವಿಸುತ್ತಿರುವ ವನ್ಯಜೀವಿಗಳ ಮಾರಣಹೋಮಕ್ಕೆ ಮೇಲಿನ ಘಟನೆಗಳು ಸಣ್ಣ ನಿದರ್ಶನಗಳಷ್ಟೇ. ಆಧುನಿಕತೆಯ ಭರದಲ್ಲಿ ನಗರೀಕರಣದ ಕಬಂಧಬಾಹುಗಳು ವನ್ಯಜೀವಿಗಳ ಆವಾಸಸ್ಥಾನವಾದ ಅರಣ್ಯಕ್ಕೆ ಚಾಚಿಕೊಂಡಿವೆ. ತಮ್ಮದೇ ಲೋಕದಲ್ಲಿ ಬದುಕುತ್ತಿದ್ದ ವನ್ಯಜೀವಿಗಳು, ಮನುಷ್ಯನ ಅಕ್ರಮ ಪ್ರವೇಶಕ್ಕೆ ನಲುಗಿ ನಿತ್ಯ ಜೀವ ಬಿಡುತ್ತಿವೆ.

ದೊಡ್ಡ ನಗರಗಳ ನಡುವಣ ಅಂತರ ತಗ್ಗಿಸಿ ಸಮೀಪಕ್ಕೆ ಬೆಸೆಯುವ ಸಲುವಾಗಿ ನಿರ್ಮಾಣಗೊಳ್ಳುತ್ತಿರುವ ಹೆದ್ದಾರಿಗಳು ಕಾಡುಗಳನ್ನು ಇಲ್ಲವೇ ಎರಡು ಕಾಡುಗಳನ್ನು ಬೆಸೆಯುವ ಸಂಪರ್ಕ ಪ್ರದೇಶ (ಕಾರಿಡಾರ್)ವನ್ನೇ ಸೀಳಿಕೊಂಡು ಹೋಗುತ್ತಿವೆ. ಹಲವು ಬಗೆಯ ಹೆದ್ದಾರಿ ಯೋಜನೆಗಳ ಉದ್ದೇಶ ಒಂದು ನಗರದಿಂದ ಮತ್ತೊಂದು ನಗರವನ್ನು ತಲುಪುವುದಷ್ಟೇ. ಜೀವ ಸರಪಳಿಯ ಭಾಗವಾಗಿ ಬದುಕುತ್ತಿರುವ ವನ್ಯಜೀವಿಗಳು ಇಲ್ಲಿ ನಗಣ್ಯ. ಪರಿಸರದ ಭಾಗವಾಗಿರುವ ವನ್ಯಜೀವಿಗಳು, ಪಕ್ಷಿಗಳು, ಚಿಟ್ಟೆಗಳು, ಸೂಕ್ಷ್ಮಜೀವಿಗಳ ಒಳಗೊಳ್ಳುವಿಕೆ ಇಲ್ಲದೆಯೇ ಹೆದ್ದಾರಿ ಯೋಜನೆಗಳು ರೂಪುಗೊಳ್ಳುತ್ತಿವೆ. ಹಾಗಾಗಿ, ಹೆದ್ದಾರಿಗಳಲ್ಲಿ ವೇಗವಾಗಿ ಚಲಿಸುವ ವಾಹನಗಳಿಗೆ ಸಿಲುಕಿ ಲೆಕ್ಕವಿಲ್ಲದಷ್ಟು ಪ್ರಾಣಿ–ಪಕ್ಷಿಗಳು ಉಸಿರು ಚೆಲ್ಲುತ್ತಿವೆ.

4ನೇ ಪುಟ ನೋಡಿ



ಅಪಘಾತದಲ್ಲಿ ಕೊನೆಯುಸಿರೆಳೆದ ಕಾಡಾನೆ

‘ಜೀವ ಪರಿಸರದ ಸಮಗ್ರತೆಗೆ ಧಕ್ಕೆ’



ಹೆದ್ದಾರಿಗಳಲ್ಲಿ ಕಾಡುಜೀವಿಗಳು ಅಪಘಾತಕ್ಕೀಡಾಗುವ ಮಾಹಿತಿಯಷ್ಟೇ ನಮಗೆ ಲಭ್ಯವಾಗುತ್ತಿದೆ. ಆದರೆ, ಅದರ ಪರಿಣಾಮಗಳು ಗ್ರಹಿಕೆಗೆ ನಿಲುಕದಷ್ಟು ಗಂಭೀರವಾಗಿವೆ. ಊರು–ಕೇರಿಗಳನ್ನು ಸೀಳುವ ಈ ಹೆದ್ದಾರಿಗಳು ಅಲ್ಲಿನ ಜನರ ಬದುಕು ಮತ್ತು ಜೀವ ಪರಿಸರವನ್ನು ಧ್ವಂಸಗೊಳಿಸುತ್ತವೆ. ಅಲ್ಲಿ ನೆಲೆಸಿರುವ ಜೀವಿಗಳ ನಡುವೆ ಸಂವಾದಕ್ಕೆ ಗೋಡೆ ನಿರ್ಮಿಸುತ್ತವೆ. ಒಟ್ಟಾರೆಯಾಗಿ ಈ ಹೆದ್ದಾರಿಗಳು ಪ್ರಗತಿಯ ಹೆಸರಿನಲ್ಲಿ ಸ್ಥಳೀಯರ ಬದುಕನ್ನು, ಅಳಿದುಳಿದ ಜೀವ ಪರಿಸರದ ಸಮಗ್ರತೆಗೆ ಧಕ್ಕೆಯುಂಟು ಮಾಡುತ್ತಿವೆ’ ಎನ್ನುತ್ತಾರೆ ಪರಿಸರವಾದಿ ಕೃಪಾಕರ.

ಪಾಕ್‌ನ ಸರಕುಗಳ ಆಮದಿಗೆ ನಿರ್ಬಂಧ

ನವದೆಹಲಿ (ಪಿಟಿಐ): ಪಾಕಿಸ್ತಾನದ ಸರಕುಗಳ ಆಮದಿನ ಮೇಲೆ ಕೇಂದ್ರ ಸರ್ಕಾರವು ಶನಿವಾರ ಸಂಪೂರ್ಣವಾಗಿ ನಿರ್ಬಂಧ ಹೇರಿದೆ.

ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿಯ ನಂತರ ಪಾಕಿಸ್ತಾನವನ್ನು ಗುರಿಯಾಗಿಸಿ ಭಾರತವು ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ನಿರ್ಬಂಧ ಅದರ ಮುಂದುವರಿದ ಭಾಗವಾಗಿದೆ.

ರಾಷ್ಟ್ರೀಯ ಭದ್ರತೆ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಈ ಕ್ರಮಕೈಗೊಳ್ಳಲಾಗಿದೆ ಎಂದು ವಿದೇಶಿ ವ್ಯಾಪಾರ ಮಹಾನಿರ್ದೇಶನಾಲಯವು ಆದೇಶದಲ್ಲಿ ತಿಳಿಸಿದೆ.



12ನೇ ಪುಟ ನೋಡಿ

ಪತ್ರ ವ್ಯವಹಾರ ಅಮಾನತು

ಪಾಕಿಸ್ತಾನದ ಜೊತೆಗಿನ ಎಲ್ಲ ಬಗೆಯ ಪತ್ರ ಮತ್ತು ಪಾರ್ಸೆಲ್ ವ್ಯವಹಾರಗಳನ್ನು ಭಾರತವು ಶನಿವಾರದಿಂದ ಅಮಾನತಿನಲ್ಲಿ ಇರಿಸಿದೆ. ಈ ಅಮಾನತು ಆದೇಶವು ವಾಯುಮಾರ್ಗದ ಮೂಲಕ, ರಸ್ತೆ ಮೂಲಕ ನಡೆಯುವ ಪತ್ರ, ಪಾರ್ಸೆಲ್ ವ್ಯವಹಾರಗಳಿಗೆ ಅನ್ವಯವಾಗುತ್ತದೆ. ಇದರ ಜೊತೆಯಲ್ಲೇ, ಪಾಕಿಸ್ತಾನದ ಯಾವುದೇ ಹಡಗು ಭಾರತದ ಬಂದರು ಪ್ರವೇಶಿಸುವಂತಿಲ್ಲ ಎಂದು ಕೂಡ ಆದೇಶಿಸಲಾಗಿದೆ.

12ನೇ ಪುಟ ನೋಡಿ

ಎರಡನೇ ಬಾರಿಗೆ ಅಲ್ಬನೀಸ್ ಆಸ್ಟ್ರೇಲಿಯಾ ಪ್ರಧಾನಿ



ಮೆಲ್ಬರ್ನ್ (ಎಪಿ): ಆಸ್ಟ್ರೇಲಿಯಾದಲ್ಲಿ ನಡೆದ ಚುನಾವಣೆಯಲ್ಲಿ ಪ್ರಧಾನಿ ಆಂಥೊನಿ ಅಲ್ಬನೀಸ್ ಅವರ ನೇತೃತ್ವದ ಲೇಬರ್ ಪಕ್ಷವು ಗೆಲುವು ಸಾಧಿಸಿದೆ. ಈ ಮೂಲಕ ಅಲ್ಬನೀಸ್ ಅವರು ಮತ್ತೊಮ್ಮೆ ದೇಶದ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ. ಕಳೆದ 21 ವರ್ಷಗಳಲ್ಲಿ ಎರಡನೇ ಅವಧಿಗೆ ಆಯ್ಕೆಯಾದ ಮೊದಲ ಪ್ರಧಾನಿ ಇವರಾಗಿದ್ದಾರೆ.

ವಿಜಯೋತ್ಸವದಲ್ಲಿ ಮಾತನಾಡಿದ ಅಲ್ಬನೀಸ್ ಅವರು, ‘ಇಂದು ಆಸ್ಟ್ರೇಲಿಯಾ ಜನರು ದೇಶದ ಮೌಲ್ಯಗಳಿಗಾಗಿ ಮತ ಹಾಕಿದ್ದಾರೆ’ ಎಂದರು.

ಅಲ್ಬನೀಸ್ ಅವರಿಗೆ ಅಭಿನಂದನೆಗಳು. ಭಾರತ–ಆಸ್ಟ್ರೇಲಿಯಾ ದ್ವಿಪಕ್ಷೀಯ ಸಂಬಂಧ ವೃದ್ಧಿಗಾಗಿ ಕೆಲಸ ಮಾಡಲು ಉತ್ಸುಕನಾಗಿದ್ದೇನೆ

ನರೇಂದ್ರ ಮೋದಿ
ಪ್ರಧಾನಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸೋನು ನಿಗಮ್ ವಿರುದ್ಧ ಪ್ರತಿಭಟನೆ

ಬೆಂಗಳೂರು: ಬಾಲಿವುಡ್ ಗಾಯಕ ಸೋನು ನಿಗಮ್ ಅವರು ಕನ್ನಡಿಗರಿಗೆ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿ ಕನ್ನಡ ಸಂಘಟನೆ ಮುಖಂಡ ರೂಪೇಶ್ ರಾಜಣ್ಣ ಹಾಗೂ ಇತರೆ ಕಾರ್ಯಕರ್ತರು ಶನಿವಾರ ಕನ್ನಡ ಚಲನ ಚಿತ್ರ ವಾಣಿಜ್ಯ ಮಂಡಳಿ ಎದುರು ಪ್ರತಿಭಟನೆ ನಡೆಸಿದರು.

ಬಳಿಕ ವಾಣಿಜ್ಯ ಮಂಡಳಿಯ ಮುಖ್ಯಸ್ಥರನ್ನು ಭೇಟಿಯಾದ ಕಾರ್ಯಕರ್ತರು, ಸೋನು ನಿಗಮ್ ಅವರನ್ನು ಕನ್ನಡ ಚಿತ್ರರಂಗ ನಿಷೇಧಿಸಬೇಕು ಎಂದು ಒತ್ತಾಯಿಸಿದರು. ಜತೆಗೆ ಈ ಹಿಂದೆ ಉತ್ತರ ಭಾರತ ಸೋನು ನಿಗಮ್ ಅವರನ್ನು ನಿರ್ಲಕ್ಷ್ಯಿಸಿದಾಗ, ಕನ್ನಡಿಗರು ಪ್ರೀತಿ ಕೊಟ್ಟಿದ್ದಾರೆ. ಆದರೂ ಕನ್ನಡಿಗರನ್ನು ಭಯೋತ್ಪಾದಕರಿಗೆ ಹೋಲಿಕೆ ಮಾಡಿರುವುದು ಸರಿಯಲ್ಲ. ಆದ್ದರಿಂದ ಅವರನ್ನು ಕನ್ನಡ ಸಿನಿಮಾಗಳಿಂದ ನಿಷೇಧಿಸಬೇಕು ಎಂದು ಆಗ್ರಹಿಸಿದರು.

ಸೋನು ನಿಗಮ್ ಅವರ ಭಾವಚಿತ್ರಕ್ಕೆ ಮಸಿ ಬಳಿಯುವ ಮೂಲಕ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು. ರಾಜಾಜಿನಗರದಲ್ಲಿ ಪಕ್ಷದ ಕಚೇರಿಯ ಮುಂಭಾಗ ಸೋನು ನಿಗಮ್ ವಿರುದ್ಧ ಪ್ರತಿಭಟನೆ ನಡೆಸಿದರು.

ಘನತ್ಯಾಜ್ಯ ವಿಲೇವಾರಿ: ಹೊಸ ಟೆಂಡರ್ ಎತ್ತಿಹಿಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಘನ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ 2024ರ ನವೆಂಬರ್‌ನಲ್ಲಿ 'ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಗಮ ನಿಯಮಿತ' (ಬಿಎಸ್‌ಡಬ್ಲ್ಯುಎಂಎಲ್) ಹೊರಡಿಸಿದ್ದ ಹೊಸ ಟೆಂಡರ್ ಅನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

'ಬಿಎಸ್‌ಡಬ್ಲ್ಯುಎಂಎಲ್' ಹೊರಡಿಸಿದ್ದ ಹೊಸ ಟೆಂಡರ್ ನಿಯಮಗಳನ್ನು ಪ್ರಶ್ನಿಸಿ ಹಲವು ಗುತ್ತಿಗೆದಾರರು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ವಿಲೇವಾರಿ ಮಾಡಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ನಾಲ್ಕು ತಿಂಗಳಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ' ಎಂದು ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ಆದೇಶಿಸಿದೆ.



ಅಂತೆಯೇ, ಅರ್ಜಿದಾರರಿಗೆ ಬಿಬಿಎಂಪಿ ವ್ಯಾಪ್ತಿಯ ಹಲವು ವಾರ್ಡ್‌ಗಳಲ್ಲಿ ಕರೆಯಲಿರುವ ತ್ಯಾಜ್ಯ ವಿಲೇವಾರಿ ಟೆಂಡರ್‌ಗಳಲ್ಲಿ ಭಾಗವಹಿಸಲು ಅನುಮತಿ ನೀಡಿದೆ.

'ಟೆಂಡರ್ ವಾಪಸು ಪಡೆದದ್ದು ಏಕಪಕ್ಷೀಯ' ಎಂಬ ಅರ್ಜಿದಾರರ ಆರೋಪವನ್ನು ತಳ್ಳಿ ಹಾಕಿರುವ ನ್ಯಾಯಪೀಠ, 'ಸರ್ಕಾರ ವಿಸ್ತೃತ ಸಮಾಲೋಚನೆ ನಡೆಸಿದ ಬಳಿಕವೇ 2022ರ ಸೆಪ್ಟೆಂಬರ್‌ನಲ್ಲಿ ಟೆಂಡರ್ ವಾಪಸ್ ಪಡೆದಿರುವುದು ಸ್ಪಷ್ಟವಾಗಿದೆ' ಎಂಬುದನ್ನು ದೃಢಪಡಿಸಿದೆ.

'ಟೆಂಡರ್ ದರವನ್ನು ಮನಬಂದಂತೆ ನಿಗದಿ ಮಾಡಲಾಗಿದೆ' ಎಂಬ ಆರೋಪಕ್ಕೆ ಉತ್ತರಿಸಿರುವ ನ್ಯಾಯಪೀಠ, 'ಈ ಕೋರ್ಟ್ ಬೆಲೆ ನಿಗದಿಯ ಬಗ್ಗೆ ಮೌಲ್ಯಮಾಪನ ಮಾಡುವ ತಜ್ಞನಲ್ಲ' ಎಂದು ಕುಟುಕಿದೆ.

ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ ಶೆಟ್ಟಿ ಅವರ ಹೇಳಿಕೆಯನ್ನು ಉಲ್ಲೇಖಿಸಿರುವ ನ್ಯಾಯಪೀಠ, 'ಈ ಅರ್ಜಿಗಳಲ್ಲಿ ಯಾವ್ಯಾವ ಗುತ್ತಿಗೆದಾರರು ಅಥವಾ ಟೆಂಡರ್‌ದಾರರು ಇದ್ದಾರೋ ಅವರಿಗೆ ಹೊಸ ಟೆಂಡರ್ ನಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಲಾಗುವುದು. ಆದ್ದರಿಂದ, ಹೊಸ ಟೆಂಡರ್ ರದ್ದುಗೊಳಿಸಲು ಯಾವುದೇ ಕಾರಣಗಳಿಲ್ಲ ಮತ್ತು ಈಗಾಗಲೇ ರದ್ದುಗೊಳಿಸುವ ಟೆಂಡರ್ ರೀ-ಕಾಲ್ ಮಾಡುವುದರಲ್ಲಿ ಅರ್ಥವಿಲ್ಲ' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ವ್ಯಕ್ತಿ ಸೆರೆ: ಗಾಂಜಾ ವಶ

ಬೆಂಗಳೂರು: ಸಂಪಿಗೆಹಳ್ಳಿ ಠಾಣಾ ವ್ಯಾಪ್ತಿಯಲ್ಲಿರುವ ಎಜೆಬಿಜೆ ಮೈದಾನದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿ, 1 ಕೆ.ಜಿ. 20 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ. ದಿಣ್ಣೂರು ಬಸ್ ನಿಲ್ದಾಣ ಬಳಿ ಕಡಿಮೆ ಬೆಲೆಗೆ ಗಾಂಜಾವನ್ನು ಖರೀದಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾಗಿ ಆರೋಪಿ ಒಪ್ಪಿಕೊಂಡಿದ್ದಾನೆ.

ವಾಹನ ಸಂಚಾರ ಮಾರ್ಪಾಡು

ಬೆಂಗಳೂರು: ದೇವರಬೀಸನಹಳ್ಳಿ ಜಂಕ್ಷನ್‌ನಲ್ಲಿ ಸುಗಮ ಸಂಚಾರ ಸಲುವಾಗಿ ಸಕ್ರಾ ಆಸ್ಪತ್ರೆ ಕಡೆಗೆ ಸಂಪರ್ಕಿಸುವ ರಸ್ತೆಯನ್ನು ಏಕಮುಖ ರಸ್ತೆಯಾಗಿ ಪ್ರಾಯೋಗಿಕವಾಗಿ ಮಾರ್ಪಾಡು ಮಾಡಲಾಗಿದೆ ಎಂದು ಪೂರ್ವ ಸಂಚಾರ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ತಿಳಿಸಿದ್ದಾರೆ.

ಮೇ 8ರವರೆಗೆ ಸಕ್ರಾ ಆಸ್ಪತ್ರೆ ರಸ್ತೆ ಕಡೆಯಿಂದ ದೇವರಬೀಸನಹಳ್ಳಿ ಜಂಕ್ಷನ್ ವರೆಗೆ ವಾಹನ ಸಂಚಾರ ನಿರ್ಬಂಧ ವಿಧಿಸಲಾಗಿದೆ. ಪರ್ಯಾಯ ಮಾರ್ಗವಾಗಿ ಸಕ್ರಾ ಆಸ್ಪತ್ರೆ ರಸ್ತೆ ಕಡೆಯಿಂದ ದೇವರಬೀಸನಹಳ್ಳಿ ಜಂಕ್ಷನ್ ಕಡೆಗೆ ಸಂಚರಿಸುವ ವಾಹನಗಳು ಬೆಳ್ಳಂದೂರು ಕೋಡಿ ಕಡೆಗೆ ಸಂಚರಿಸಬೇಕು. ಕಾಡು ಬೀಸನಹಳ್ಳಿ ಜಂಕ್ಷನ್ ಕಡೆಗೆ ಸಂಚರಿಸುವ ವಾಹನಗಳು ಸಕ್ರಾ ಆಸ್ಪತ್ರೆ ರಸ್ತೆ ಮೂಲಕ ಹೊರ ವರ್ತಲು ರಸ್ತೆ ಕಡೆಗೆ ಸಂಚರಿಸಿ ಗಣೇಶ ದೇವಸ್ಥಾನ ಕ್ರಾಸ್ ಬಳಿ ಎಡತಿರುವು ಪಡೆಯಬೇಕು.

ಬಳಿಕ ಕಾಡುಬೀಸನಹಳ್ಳಿ ಜಂಕ್ಷನ್‌ನಲ್ಲಿ ಯು ಟರ್ನ್ ಪಡೆದು ಸರ್ವಿಸ್ ರಸ್ತೆ ಮೂಲಕ ಸೆಸ್ನಾ ಬಿಸಿನೆಸ್ ಪಾರ್ಕ್ ಕಡೆಗೆ ಪ್ರವೇಶಿಸಬಹುದು.

₹32.72 ಕೋಟಿ ಮೌಲ್ಯದ ಭೂ ಒತ್ತುವರಿ ತೆರವು

ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ₹32.72 ಕೋಟಿ ಮೌಲ್ಯದ ಒಟ್ಟು 10 ಎಕರೆ 0.37 ಗುಂಟೆ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿ ಜಿ.ಜಗದೀಶ ಅವರ ನೇತೃತ್ವದಲ್ಲಿ ಶನಿವಾರ ತೆರವುಗೊಳಿಸಲಾಯಿತು.

ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಕಟ್ಟೊಗೊಲ್ಲಹಳ್ಳಿ ಗ್ರಾಮದಲ್ಲಿ ಗೋಮಾಳ, ವರ್ತೂರು ಹೋಬಳಿಯ ಕೈಕೊಂಡ್ರಹಳ್ಳಿಯಲ್ಲಿ ಸ್ಮಶಾನ, ಆನೇಕಲ್ ತಾಲ್ಲೂಕಿನ ಕಸಬಾ-1 ಹೋಬಳಿಯ ಸಿಡಿಹೊಸಕೋಟೆ ಗ್ರಾಮದಲ್ಲಿ ಸರ್ಕಾರಿ ಭೂಮಿ, ಕಸಬಾ-2 ಹೋಬಳಿಯ ಬೆಸ್ತಮಾನಹಳ್ಳಿಯಲ್ಲಿ ಸರ್ಕಾರಿ ಜಾಗ, ಜಿಗಣಿ-1 ಹೋಬಳಿಯ ಬುಕ್ಕಸಾಗರದಲ್ಲಿ ಗುಂಡುತೋಪು, ಜಿಗಣಿ-2 ಹೋಬಳಿಯ ಹುಲಿಮಂಗಲ ಗ್ರಾಮದಲ್ಲಿ ಗೋಮಾಳ, ಸರ್ಜಾಪುರ-1 ಹೋಬಳಿಯ ಕೂಗೂರು ಗ್ರಾಮದಲ್ಲಿ ಕುಂಟೆ, ಸರ್ಜಾಪುರ-2 ಹೋಬಳಿಯ ಮುತ್ತನಲ್ಲೂರು ಗ್ರಾಮದಲ್ಲಿ ಗುಂಡುತೋಪು, ಸರ್ಜಾಪುರ-3 ಹೋಬಳಿಯ ಕೊಮ್ಮಸಂದ್ರ ಗ್ರಾಮದಲ್ಲಿ ಸ್ಮಶಾನದಲ್ಲಿನ ಒತ್ತುವರಿ ತೆರವುಗೊಳಿಸಲಾಯಿತು.

ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಯಲಚಗುಪ್ಪೆ ಗ್ರಾಮದಲ್ಲಿ ಸ್ಮಶಾನ, ದೊಡ್ಡೇರಿ ಗ್ರಾಮದಲ್ಲಿ ಗುಂಡುತೋಪು, ಬೇಗೂರು ಹೋಬಳಿಯ ಮೈಲಸಂದ್ರದಲ್ಲಿ ಗುಂಡುತೋಪು, ಕೆಂಗೇರಿ ಹೋಬಳಿಯ ಸೋಂಪುರ ಗ್ರಾಮದಲ್ಲಿ ಗುಂಡುತೋಪು ಒತ್ತುವರಿ ತೆರವು ಮಾಡಲಾಯಿತು.

ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಮಲ್ಲಸಂದ್ರ ಗ್ರಾಮದಲ್ಲಿ ಗುಂಡುತೋಪು, ಹಾರೋಕ್ಯಾತನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಕೊರಕಲು, ಖರಾಬು, ಹುಲ್ಲೇಗೌಡನಹಳ್ಳಿಯಲ್ಲಿ ಖರಾಬು, ತೋರನಾಗಸಂದ್ರ ಗ್ರಾಮದಲ್ಲಿ ಖರಾಬಿನಲ್ಲಿನ ಒತ್ತುವರಿಯನ್ನು ತೆರವುಗೊಳಿಸಿ ವಶಕ್ಕೆ ಪಡೆದುಕೊಳ್ಳಲಾಯಿತು.

ಯಲಹಂಕ ತಾಲ್ಲೂಕಿನ ಚಿಕ್ಕಜಾಲದಲ್ಲಿ ಗೋಮಾಳ, ಜಾಲ ಹೋಬಳಿಯ ನೆಲ್ಲಕುಂಟೆಯಲ್ಲಿ ಗೋಮಾಳ ಒತ್ತುವರಿ ತೆರವುಗೊಳಿಸಲಾಗಿದೆ.

ಯುವತಿಯ ನಗ್ನ ಓಡಾಟ: ವಿಡಿಯೊ ಹರಿದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಚ್‌ಎಸ್‌ಆರ್ ಬಡಾವಣೆಯ ರಸ್ತೆಯಲ್ಲಿ ಯುವತಿಯೊಬ್ಬಳು ನಗ್ನವಾಗಿ ಓಡಾಡಿರುವ ವಿಡಿಯೊವೊಂದು ಜಾಲತಾಣದಲ್ಲಿ ಹರಿದಾಡುತ್ತಿದೆ.

'ಬಡಾವಣೆಯ ಪಿ.ಜಿ.ಯೊಂದರಲ್ಲಿ ವಾಸವಿರುವ ಯುವತಿ ಜನನಿಬಿಡ ರಸ್ತೆಯಲ್ಲಿ ಓಡಾಡುತ್ತಿರುವುದು ಆ ವಿಡಿಯೊ ದಲ್ಲಿದೆ. ಇದು ಸಿ.ಸಿ. ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿರುವ ದೃಶ್ಯದಂತೆ ಕಾಣುತ್ತಿದೆ. 2024ರ ಸೆಪ್ಟೆಂಬರ್‌ನಲ್ಲಿ ಈ ದೃಶ್ಯ ಸೆರೆಯಾಗಿದ್ದು, ಈಗ ಜಾಲತಾಣದಲ್ಲಿ ಹರಿದಾಡುತ್ತಿದೆ.

ಯುವತಿ ಎಲ್ಲಿಗೋ ಹೋಗಿ, ವಾಪಸ್ ಪಿ.ಜಿ.ಗೆ ಮರಳುತ್ತಿರುವಂತೆ ಕಾಣುತ್ತಿದೆ. ಪೊಲೀಸರು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ನೆಟ್ಟಿಗರು ಒತ್ತಾಯಿಸಿದ್ದಾರೆ.

ಜಾತಿ ವ್ಯವಸ್ಥೆ ನಿಂತ ನೀರು: ಸಿ.ಎಂ

ಯಲಹಂಕದಲ್ಲಿ 14 ಅಡಿ ಎತ್ತರದ ಅಂಬೇಡ್ಕರ್ ಕಂಚಿನ ಪ್ರತಿಮೆ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ದೇಶದ ಜಾತಿ ವ್ಯವಸ್ಥೆಗೆ ಚಲನೆ ಇಲ್ಲ. ಆದರೆ ವರ್ಗಕ್ಕೆ ಚಲನೆಯಿದೆ. ನಮ್ಮ ಸಮಾಜದಲ್ಲಿ ಶ್ರೀಮಂತ ಬಡವನಾದರೂ, ಬಡವ ಶ್ರೀಮಂತನಾದರೂ ಕಡೆಯವರೆಗೂ ಉಳಿದು ಕೊಳ್ಳುವುದು ಹುಟ್ಟಿದ ಜಾತಿಯಲ್ಲಿ ಮಾತ್ರ. ಆದ್ದರಿಂದ ಈ ಜಾತಿ ವ್ಯವಸ್ಥೆ ನಿಂತ ನೀರಿನಂತೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಯಲಹಂಕದಲ್ಲಿ 14 ಅಡಿ ಎತ್ತರದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕಂಚಿನ ಪ್ರತಿಮೆಯನ್ನು ಶನಿವಾರ ಅನಾವರಣ ಮಾಡಿ ಅವರು ಮಾತನಾಡಿದರು.

'ನಮ್ಮ ದೇಶ, ನಮ್ಮ ಸಮಾಜಕ್ಕೆ ಅವಶ್ಯವಾಗಿದ್ದಂತಹ ಅತ್ಯುತ್ತಮ ಸಂವಿಧಾನವನ್ನು ನೀಡಿದವರು ಬಾಬಾ ಸಾಹೇಬ್ ಅಂಬೇಡ್ಕರ್. ಈ ದೇಶದ ಸಾಮಾಜಿಕ ಪರಿಸ್ಥಿತಿ, ಜಾತಿ ವ್ಯವಸ್ಥೆ ಅಂಬೇಡ್ಕರ್ ಅವರಿಗೆ ಅರ್ಥ ಆದಷ್ಟು ಬೇರೆಯವರಿಗೆ ಆಗಿರಲಿಲ್ಲವೆಂದರೆ ಅದು ಅತಿಶಯೋಕ್ತಿಯಲ್ಲ. ಜಾತಿ ವ್ಯವಸ್ಥೆ ಇದ್ದಷ್ಟೂ ಕಾಲ ಮೀಸಲಾತಿ ಇರಲೇಬೇಕು ಎಂಬುದನ್ನು ಅವರು ಬಲವಾಗಿ ನಂಬಿದ್ದರು' ಎಂದರು.

'ಶಾಸಕ ಎಸ್.ಆರ್. ವಿಶ್ವನಾಥ್ ಅವರು ಯಲಹಂಕದಲ್ಲಿ ಪಕ್ಷಾತೀತವಾಗಿ ಕೆಲಸ ಮಾಡುವುದಾಗಿ ಹೇಳಿರುವುದನ್ನು ನಾನು ಸ್ವಾಗತಿಸುತ್ತೇನೆ. ಯಲಹಂಕದಲ್ಲಿ ದಲಿತರು, ಹಿಂದುಳಿದವರೇ ಹೆಚ್ಚಿದ್ದು, ಎಲ್ಲರಿಗೂ ನ್ಯಾಯ ದೊರಕಿಸುವ ಕೆಲಸವನ್ನು ವಿಶ್ವನಾಥ್ ಮಾಡುತ್ತಿದ್ದಾರೆ. ವಿಶ್ವನಾಥ್ ಅವರ ಕ್ಷೇತ್ರಕ್ಕೆ ಅನುದಾನದ ಬೇಡಿಕೆಯನ್ನು ಪರಿಗಣಿಸಲಾಗುವುದು' ಎಂದು ಸಿದ್ದರಾಮಯ್ಯ ಭರವಸೆ ನೀಡಿದರು.

ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ, ಕಂದಾಯ ಸಚಿವ ಕೃಷ್ಣಬೈರೇಗೌಡ, ನಗರಾಭಿವೃದ್ಧಿ ಸಚಿವ ಸುರೇಶ್, ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿದರು.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್, ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಬೆಂಗಳೂರುನಗರ ಜಿಲ್ಲಾಧಿಕಾರಿ ಜಗದೀಶ್, ಸಮಾಜಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಹರೀಶ್, ದಲಿತ ಸಂಘಟನೆಗಳ ಮುಖಂಡರಾದ ವಿ.ನಾಗರಾಜ್, ಎಚ್.ಮಾರಪ್ಪ, ಮುನಿಆಂಜಿನಪ್ಪ, ಬಿ.ಆರ್.ಮುನಿರಾಜು, ರಾಜಣ್ಣ ಉಪಸ್ಥಿತರಿದ್ದರು.



ಯಲಹಂಕದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕಂಚಿನ ಪ್ರತಿಮೆಯನ್ನು ಶನಿವಾರ ಸಿ.ಎಂ ಸಿದ್ದರಾಮಯ್ಯ ಅನಾವರಣ ಮಾಡಿದರು

ನಗರದಲ್ಲಿ ಇಂದು

ಆರ್ಗ್ಯಾನಿಕ್ ಸಂತೆ: ಅತಿಥಿಗಳು: ಶಾಂಭವಿ ರಂಗನಾಥ್, ಸಂಗೀತ ಕಛೇರಿ: ಸಾಯಿ ಅಭಿರಾಮ್, ಸಮರ್ಥ ಜಿ. ಅಯ್ಯಂಗಾರ್, ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾಥ್, ಮಲ್ಲೇಶ್ವರ, ಬೆಳಿಗ್ಗೆ 9.30


ರಾಷ್ಟ್ರೀಯ ನಾಣ್ಯಗಳ ಪ್ರದರ್ಶನ: ಸ್ಥಳ: ಬೆಂಗಳೂರು ಗೇಟ್ ಹೋಟೆಲ್, ಕೆ.ಜಿ. ರಸ್ತೆ, ಬೆಳಿಗ್ಗೆ 10ರಿಂದ

ಯೋಗಾಲಕ್ಷ್ಮೀನರಸಿಂಹ ಸ್ವಾಮಿಯ ಪ್ರತಿಷ್ಠಾನ ಮಹೋತ್ಸವ: ಸಾನ್ನಿಧ್ಯ: ವಿದ್ಯಾಧೀಶತೀರ್ಥ ಶ್ರೀಪಾದ, ವಿಶ್ವಪ್ರಸನ್ನ ತೀರ್ಥ ಶ್ರೀಪಾದ, ವಿಶ್ವಭೂಷಣ ತೀರ್ಥ ಶ್ರೀಪಾದ, ಸ್ಥಳ: ಯೋಗಾಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನಮ್, ಮಧ್ವನಾರಾಯಣ ಆಶ್ರಮ, ದೊಡ್ಡ ಆಲದ ಮರ ರಸ್ತೆ, ರಾಮೋಹಳ್ಳಿ, ಬೆಳಿಗ್ಗೆ 10

ಶಂಕರ ಜಯಂತಿ, 53ನೇ ವರ್ಷದ ಸುವರ್ಣ ಮಹೋತ್ಸವ ಸಂಗೀತೋತ್ಸವದ ಸಮಾರೋಪ ಸಮಾರಂಭ: 'ಕಲಾಭೂಷಣ' ಪ್ರಶಸ್ತಿ ಸ್ವೀಕರಿಸುವವರು: ಶ್ರೀಕಾಂತಂ ನಾಗೇಂದ್ರಶಾಸ್ತ್ರಿ, ಅತಿಥಿ: ಎಸ್. ಶಂಕರ್, ಅಧ್ಯಕ್ಷತೆ: ಎಂ. ಅನಂತ್, ಕಲಾವಿದರಿಗೆ ಗೌರವ ಸಮರ್ಪಣೆ: ವೇದ: ವೆಂಕಟರಾಮ ಶಾಸ್ತ್ರಿ, ಸಂಗೀತ ಸಂಸ್ಥೆ: ನಾದ ರಂಜಿನಿ ಸಂಗೀತ ಸಭಾ, ಗಾಯನ: ಉಷಾ ಕೇಸರಿ, ಮೃದಂಗ: ಬಾಲಸುಬ್ರಹ್ಮಣ್ಯ, ಆಯೋಜನೆ: ಶ್ರೀ ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಬೆಳಿಗ್ಗೆ 10.30ರಿಂದ

ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ಅವರ ತತ್ವಧಾರಾ

ಪ್ರವಚನಮಾಲಿಕೆ: 'ವಿವೇಕ ಚೂಡಾಮಣಿಯಲ್ಲಿ ಸಾಧನೆಯ ಮಜಲುಗಳು' ಪ್ರವಚನ: ಮಲ್ಲೇಪುರಂ ಜಿ. ವೆಂಕಟೇಶ್, ಆಯೋಜನೆ: ವಿಷ್ಣುಗುಪ್ತ ವಿಶ್ವವಿದ್ಯಾಪೀಠಮ್, ಸ್ಥಳ: ಶ್ರೀರಾಮಾಶ್ರಮ, ಗಿರಿನಗರ, ಸಂಜೆ 5.30



ಮಲ್ಲೇಪುರಂ ಜಿ. ವೆಂಕಟೇಶ್

'ಪಂಚತಂತ್ರ', 'ಹಿತೋಪದೇಶ', ಪುಸ್ತಕಗಳ ಬಿಡುಗಡೆ: ಸುಧಾಮೂರ್ತಿ, ಪುಸ್ತಕಗಳ ಪರಿಚಯ: ಜಗದೀಶ ಶರ್ಮಾ ಸಂಪ, ಉಪಸ್ಥಿತಿ: ಭೀಮಶಾ ಆರ್ಯ, ಆಯೋಜನೆ: ಸದಾತನ, ಸ್ಥಳ: ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು, ಬಸವನಗುಡಿ ರಸ್ತೆ, ಬೆಳಿಗ್ಗೆ 10.30

ಶಂಕರ ಜಯಂತಿ: ಅತಿಥಿ: ಎಂ.ಕೆ. ಶ್ರೀಧರ್, ಅಧ್ಯಕ್ಷತೆ: ಎಚ್.ವಿ. ಸತ್ಯನಾರಾಯಣ, ಆಯೋಜನೆ ಮತ್ತು ಸ್ಥಳ: ಹೊಯ್ಸಳ ಕರ್ನಾಟಕ ಸಂಘ, ಹೊಂಬೇಗೌಡನಗರ, ಬೆಳಿಗ್ಗೆ 10.30

ಭಗೀರಥ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

'ಹಾವು ಮತ್ತು ನಾವು' ವಿಚಾರಸಂಕಿರಣ: ಸ್ನೇಕ್ ಶ್ಯಾಮ್, ಆಯೋಜನೆ: ಮಾಸ ಮಂಥನ, ಸ್ಥಳ: ಸಾನ್ನಿಧ್ಯ, ಒಂದನೇ ಅಡ್ಡರಸ್ತೆ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಧನ್ಯಾಶ್ರೀ ಎ.ಡಿ., ಅತಿಥಿಗಳು: ವಿದ್ಯಾ ರಾವ್, ಲತಾಶೇಖರ್, ಜೋಗಿಲ ಸಿದ್ಧರಾಜು, ಸುಮನಾ ಎಸ್.ಕೆ., ಆಯೋಜನೆ: ಕಲಾಮಾಯೆ ನೃತ್ಯ ಶಾಲೆ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 4

'ತೊಂಗಲು' ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ಬೆಂ.ಶ್ರೀ ರವೀಂದ್ರ, ಪುಸ್ತಕದ ಕುರಿತು: ಜೆ.ಎನ್. ಜಗನ್ನಾಥ್, ಆಯೋಜನೆ: ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ, ಸ್ಥಳ: ಕಪ್ಪಣ ಅಂಗಳ, ಜೆ.ಪಿ. ನಗರ, ಸಂಜೆ 5.30

'ಪುಕ್ಕಟೆ ಸಲಹೆ' ನಾಟಕ ಪ್ರದರ್ಶನ: ರಚನೆ: ಡುಂಡಿರಾಜ್, ನಿರ್ದೇಶನ: ಅಶೋಕ್ ಬಿ., ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಪ್ರಣವಾಂಜಲಿ ಪರ್ಫಾರ್ಮಿಂಗ್ ಆಫ್ ಆರ್ಟ್ಸ್‌ನ ವಿದ್ಯಾರ್ಥಿಗಳು, ಆಯೋಜನೆ ಮತ್ತು ಸ್ಥಳ: ಅಭಯ ಲಕ್ಷ್ಮೀ ನರಸಿಂಹ ಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 6

ಪಹಲ್ಗಾಮ್ ದಾಳಿ ಮಡಿದವರಿಗೆ ಮೇಣದ ಬತ್ತಿ ನಮನ: ಭಾಗವಹಿಸುವವರು: ರಿಜ್ವಾನ್ ಅರ್ಷದ್, ಆಯೋಜನೆ: ಮೆಂಬರ್ ಆಫ್ ಕ್ಲಬ್ ವೊಕ್ಸ್, ಸ್ಥಳ: ಜಂಕ್ಷನ್ ಆಫ್ ಮಿಲ್ಲರ್ಸ್ ರಸ್ತೆ, ನಂದಿ ದುರ್ಗಾ ರಸ್ತೆ, ಸಂಜೆ 6

ಸಂಕ್ಷಿಪ್ತ ಸುದ್ದಿ

ಸಮೀಕ್ಷೆ: ಪರಯ ಎಂದು ನಮೂದಿಸಿ

ಬೆಂಗಳೂರು: ಒಳ ಮೀಸಲಾತಿ ಜಾತಿ ಜನಗಣತಿಯ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿ ಬಲಗೈ ಪರಯ ಎಂದು ನೋಂದಾಯಿಸಿಕೊಳ್ಳಬೇಕು ಎಂದು ಕರ್ನಾಟಕ ಪರಿಶಿಷ್ಟ ಜಾತಿ ಬಲಗೈ ಪರಯ ಮಹಾಸಭಾ ತಿಳಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ಅಧ್ಯಕ್ಷ ಎ. ಕೃಷ್ಣಪ್ಪ, 'ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿ ಬಲಗೈ ಪರಯ ಸಮುದಾಯವೆಂದು ನಮೂದಿಸುವಂತೆ ಮೇ 5ರಿಂದ 17ರವರೆಗೆ ಜನಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗುವುದು. ಇದು ನಿರ್ಣಾಯಕ ಸಮಯವಾಗಿದ್ದು, ಎಲ್ಲರೂ ಜಾಗೃತರಾಗಿ ತಮ್ಮ ಜಾತಿಯನ್ನು ನಿಖರವಾಗಿ ಬರೆಸಬೇಕು. ನಮ್ಮ ಅಸ್ತಿತ್ವ ಉಳಿಸಿಕೊಂಡು ಪರಯರ ಜಾತಿಯ ನೈಜ ಪಾಲು ಪಡೆಯಬೇಕು' ಎಂದು ಕರೆ ನೀಡಿದರು.

'ರಾಜ್ಯ ಸರ್ಕಾರ ಒಳ ಮೀಸಲಾತಿಯಲ್ಲಿ ಹೊಲಯರಿಗೆ ನಿಗದಿಪಡಿಸಿದ ಶೇಕಡ 6ರಷ್ಟು ಮೀಸಲಾತಿಯಲ್ಲಿ ಪರಯ ಜಾತಿಗೆ ಶೇ 1ರಷ್ಟು ಪ್ರತ್ಯೇಕ ಮೀಸಲಾತಿಯನ್ನು ಪಡೆಯಬೇಕಾದರೆ ಸಮೀಕ್ಷೆಯ ಸಂದರ್ಭದಲ್ಲಿ ಪರಯ ಎಂದು ನಮೂದಿಸಬೇಕು ಎಂದು ಹೇಳಿದರು.

ಗುತ್ತಿಗೆದಾರರಿಗೆ ₹50 ಸಾವಿರ ದಂಡ

ಬೆಂಗಳೂರು: ಕೋರಮಂಗಲ ಕಣಿವೆ ವಿಭಾಗದ ಕಂಠೀರವ ಸ್ಟೇಡಿಯಂ ಬಳಿಯ ರಾಜಕಾಲುವೆಯ ವಾರ್ಷಿಕ ನಿರ್ವಹಣಾ ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡದ ಗುತ್ತಿಗೆದಾರರಾದ ವಿ.ವಾಸು ಅವರಿಗೆ ₹50,000 ದಂಡ ವಿಧಿಸಲಾಗಿದೆ.

ಸಾರ್ವಜನಿಕರಿಗೆ ಅನಾನುಕೂಲ ಉಂಟು ಮಾಡಿರುವುದರಿಂದ ಗುತ್ತಿಗೆ ಕರಾರಿನಂತೆ ಪರಿಶೋಧ 41(1) ಮತ್ತು 41(2)ರನ್ವಯ ಬಿಬಿಎಂಪಿಯ ಬೃಹತ್ ನೀರುಗಾಲುವೆ-ಕೋರಮಂಗಲ ಕಣಿವೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರು ದಂಡ ವಿಧಿಸಿದ್ದಾರೆ.

ಪತಿ ಕೊಲೆಗೆ ಸುಪಾರಿ: ಪತ್ನಿ ಸೇರಿ 7 ಆರೋಪಿಗಳ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಲದೇವನಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕ್ಯಾಬ್ ಚಾಲಕ ಚಂದ್ರಶೇಖರ್ (40) ಅಪಹರಣ ಮತ್ತು ಕೊಲೆಗೆ ಪತ್ನಿಯೇ ಸುಪಾರಿ ನೀಡಿರುವುದು ತನಿಖೆ ವೇಳೆ ಪತ್ತೆಯಾಗಿದ್ದು, ಪ್ರಕರಣ ಸಂಬಂಧ ಪತ್ನಿ ಸೇರಿ ಮೂವರನ್ನು ಬಂಧಿಸಲಾಗಿದೆ.

ಚಂದ್ರು ಪತ್ನಿ ವನಜಾಕ್ಷಿ, ಪ್ರಿಯಕರ ನಾಗರಾಜ್, ಮೈಸೂರಿನ ಪುರುಷೋತ್ತಮ್, ಮಂಡ್ಯದ ನಂದನ್ ಹಾಗೂ ಮೂವರು ಅಪ್ರಾಪ್ತರನ್ನು ಪೊಲೀಸರು ಬಂಧಿಸಿದ್ದಾರೆ.

'ನಾಗರಾಜ್ ಜತೆ ವನಜಾಕ್ಷಿ ಸಲುಗೆಯಿಂದ ಇದ್ದ ವಿಷಯ ಗೊತ್ತಾಗಿ ಚಂದ್ರಶೇಖರ್ ಬುದ್ಧಿ ಹೇಳಿದ್ದರು. ಹಾಗಾಗಿ ಪತಿಯ ಹತ್ಯೆ ಮಾಡಲು ವನಜಾಕ್ಷಿ ತನ್ನ ಪ್ರಿಯಕರನಿಗೆ ₹1 ಲಕ್ಷ ಸುಪಾರಿ ನೀಡಿದ್ದಳು. ಏಪ್ರಿಲ್ 26ರಂದು ಚಂದ್ರಶೇಖರ್‌ನನ್ನು ಅಪಹರಿಸಿ ಕೊಲೆ ಮಾಡಲಾಗಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ. ಕ್ಯಾಬ್ ಚಾಲಕನಾಗಿದ್ದ ಚಿಕ್ಕಬ್ಯಾಲಕೆರೆ ಚಂದ್ರು, 15 ವರ್ಷಗಳ ಹಿಂದೆ ವನಜಾಕ್ಷಿ ಯನ್ನು ಪ್ರೀತಿಸಿ ಮದುವೆಯಾಗಿದ್ದ.

ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ನಾಗರಾಜ್‌ನಿಂದ ದೂರವಿರುವಂತೆ ಪತ್ನಿಗೆ ಬುದ್ಧಿ ಹೇಳುತ್ತಿದ್ದ. ಈ ವಿಚಾರಕ್ಕೆ ದಂಪತಿ ನಡುವೆ ಜಗಳ ನಡೆಯುತ್ತಿತ್ತು. ಇತ್ತೀಚೆಗೆ ಜಗಳವಾಡಿಕೊಂಡು ತನ್ನ ತಾಯಿ ಜತೆ ವನಜಾಕ್ಷಿ ದೊಡ್ಡಬ್ಯಾಲಕೆರೆಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಿದ್ದಳು ಎಂದು ಹೇಳಿದ್ದಾರೆ.

ನಾಗರಾಜ್, ಪರಿಚಿತ ನಂದನ್ ಎಂಬಾತನಿಗೆ ₹1 ಲಕ್ಷಕ್ಕೆ ಸುಪಾರಿ ನೀಡಿ, ₹30 ಸಾವಿರ ಮುಂಗಡ ಪಾವತಿಸಿದ್ದ. ನಂದನ್ ಹಾಗೂ ಸಹಚರರು ಚಂದ್ರಶೇಖರ್‌ನನ್ನು ನಗರದಲ್ಲಿ ಅಪಹರಿಸಿ ಕನಕಪುರದ ಸಾತನೂರು ಬಳಿ ಕೊಲೆ ಮಾಡಿ ಮೃತದೇಹ ಎಸೆದು ಪರಾರಿಯಾಗಿದ್ದಾಗಿ ವಿಚಾರಣೆಯಲ್ಲಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಬಿಎಂಟಿಸಿ ಬಸ್ ಡಿಕ್ಕಿ: ಪಾದಚಾರಿ ಸಾವು

ಆನೇಕಲ್: ತಾಲ್ಲೂಕಿನ ಸೂರ್ಯ ಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬಿಎಂಟಿಸಿ ಬಸ್ ಡಿಕ್ಕಿಯಾಗಿದ್ದರಿಂದ ಪಾದಚಾರಿಯೊಬ್ಬರು ಮೃತಪಟ್ಟಿದ್ದಾರೆ.

ಕೇರಳದ ಅನಿಲ್ ಕುಮಾರ್(40) ಮೃತರು.

ಶುಕ್ರವಾರ ರಾತ್ರಿ 11ರ ಸುಮಾರಿನಲ್ಲಿ ಹೋಟೆಲ್‌ವೊಂದರಲ್ಲಿ ಊಟ ಮಾಡಿ ನಡೆದು ಹೋಗುತ್ತಿದ್ದಾಗ ಆನೇಕಲ್ ಕಡೆಯಿಂದ ಬಂದ ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಡಿಕ್ಕಿ ಹೊಡೆದಿದೆ. ಅಪಘಾತದಿಂದ ಅನಿಲ್ ಕುಮಾರ್ ತೀವ್ರ ಗಾಯಗೊಂಡರು. ಕೂಡಲೇ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟಿದ್ದಾರೆ. ಚಂದಾಪುರ ಸೂರ್ಯಸಿಟಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೆಲಮಂಗಲ ಸಮೀಪ ರಾಷ್ಟ್ರೀಯ ಹೆದ್ದಾರಿಯಲ್ಲಿ ಆಟೊಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ

ಬಾಲಕಿ ಸೇರಿ ಮೂವರ ದುರ್ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಲಮಂಗಲ ತಾಲ್ಲೂಕಿನ ಮಲ್ಲರಬಾಣವಾಡಿ ಬಳಿ ಶನಿವಾರ ಕೆಎಸ್‌ಆರ್‌ಟಿಸಿ ಬಸ್ ಮತ್ತು ಆಟೊ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಒಂದೇ ಕುಟುಂಬದ ಮೂವರು ಮೃತಪಟ್ಟಿದ್ದು, ಮೂವರ ಸ್ಥಿತಿ ಗಂಭೀರವಾಗಿದೆ.

ಶಾಂತಿನಗರ ಗ್ರಾಮದ ನಿವಾಸಿಗಳಾದ ಆಟೊ ಚಾಲಕ ಶ್ರೀನಿವಾಸ್ (40), ಪುಟ್ಟಮ್ಮ (55) ಮತ್ತು ವರ್ಷಿಣಿ (13) ಮೃತರು. ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿರುವ ವೆಂಕಟೇಶ್ (37), ನಾಗರತ್ನಮ್ಮ (38) ಮತ್ತು 11 ವರ್ಷದ ಬಾಲಕಿ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸಂಬಂಧಿಕರ ಮನೆಯ ಕಾರ್ಯಕ್ರಮಕ್ಕೆ ತೆರಳಿದ್ದ ಒಂದೇ ಕುಟುಂಬದ ಆರು ಮಂದಿ ಶಾಂತಿನಗರದಿಂದ ನೆಲಮಂಗಲಕ್ಕೆ ಆಟೊದಲ್ಲಿ ಬರುತ್ತಿದ್ದರು. ಮಲ್ಲರಬಾಣವಾಡಿ ಕ್ರಾಸ್ ಬಳಿ ಬೆಂಗಳೂರಿನಿಂದ ಹೊರನಾಡಿಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದೆ.

ಬಸ್‌ನಲ್ಲಿದ್ದ ಪ್ರಯಾಣಿಕರಿಗೆ ಹಾನಿಯಾಗಿಲ್ಲ. ಬಸ್ ಡಿಕ್ಕಿಯಾದ ರಭಸಕ್ಕೆ ಆಟೊ ಸಂಪೂರ್ಣ ನಜ್ಜುಗುಜ್ಜಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ಬಳಿಕ ನೆಲಮಂಗಲ ಸಂಚಾರಿ ಪೊಲೀಸರು, ಟೋಲ್ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಕೂಡಲೇ ಗಾಯಾಳುಗಳನ್ನು ನಗರದ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದರು.

ಮೃತದೇಹಗಳನ್ನು ಶವಾಗಾರಕ್ಕೆ ರವಾನಿಸಿದರು. ಕ್ರೇನ್ ಮೂಲಕ ಆಟೊ ಮತ್ತು ಬಸ್ ತೆರವುಗೊಳಿಸಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ನೆಲಮಂಗಲ ಸಂಚಾರಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಅಪಘಾತದ ವಾಹನಗಳ ತೆರವುಗೊಳಿಸಿದರು. ಬಸ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ



ಅಪಘಾತದಲ್ಲಿ ಸಂಪೂರ್ಣವಾಗಿ ಜಖಂಗೊಂಡಿರುವ ಆಟೊ

ಟಿಪ್ಪರ್ ಡಿಕ್ಕಿ: ವೃದ್ಧೆ ಸಾವು

ಬೆಂಗಳೂರು: ರಸ್ತೆ ದಾಟುತ್ತಿದ್ದ ವೇಳೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ವೃದ್ಧೆ ಮೃತಪಟ್ಟಿರುವ ಘಟನೆ ಅಶೋಕ ನಗರ ಸಂಚಾರಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ರಾಮಮೂರ್ತಿ ನಗರದ ನಿವಾಸಿ ಮೇರಿ ವಿಕ್ಟೋರಿಯಾ (83) ಮೃತ ಮಹಿಳೆ. ಚರ್ಚ್‌ನಲ್ಲಿ ಪ್ರಾರ್ಥನೆ ಸಲ್ಲಿಸಿ ಮಧ್ಯಾಹ್ನ 1.30ರ ಸುಮಾರಿಗೆ ವಾಪಸ್ ಮನೆಗೆ ಹೋಗುತ್ತಿದ್ದರು. ರಿಚ್‌ಮಂಡ್ ರಸ್ತೆಯ ಫಾತಿಮಾ ಬೇಕರಿ ಬಳಿ ರಸ್ತೆ ದಾಟುವ ವೇಳೆ ಅತಿ ವೇಗವಾಗಿ ಬಂದ ಟಿಪ್ಪರ್ ವಾಹನ ಡಿಕ್ಕಿ ಹೊಡೆದಿದೆ.

ಕೆಳಗೆ ಬಿದ್ದು ಗಾಯಗೊಂಡಿದ್ದ ಮೇರಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆಗೆ ಸ್ಪಂದಿಸಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.ಅಶೋಕನಗರ ಸಂಚಾರಿ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಟಿಪ್ಪರ್ ವಶಕ್ಕೆ ಪಡೆದು, ಪ್ರಕರಣ ದಾಖಲಿಸಲಾಗಿದೆ.

ಕಾಳಸಂತೆಯಲ್ಲಿ ಐಪಿಎಲ್ ಟಿಕೆಟ್‌ಗಳ ಮಾರಾಟ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಐಪಿಎಲ್ ಕ್ರಿಕೆಟ್ ಪಂದ್ಯಗಳ ಟಿಕೆಟ್ ಮಾರುತ್ತಿದ್ದ ನಾಲ್ಕು ಮಂದಿಯನ್ನು ಸಿಸಿಬಿ ಪೊಲೀಸರು (ವಿಶೇಷ ತನಿಖಾ ತಂಡ) ಬಂಧಿಸಿದ್ದಾರೆ.


ನಗರದ ಚರಣ್ ರಾಜ್, ಹರ್ಷವರ್ಧನ, ವಿನಯ್ ಮತ್ತು ವೆಂಕಟಸಾಯಿ ಕಿರಣ್ ಅವರನ್ನು ಬಂಧಿಸಿ, ₹38,400 ಮೌಲ್ಯದ 32 ಐಪಿಎಲ್ ಟಿಕೆಟ್‌ಗಳು, ನಾಲ್ಕು ಮೊಬೈಲ್ ಮತ್ತು ಒಂದು ಲಕ್ಷ ರೂಪಾಯಿ ವಶಪಡಿಸಿಕೊಳ್ಳಲಾಗಿದೆ.

ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿದ್ದ ಆರ್‌ಸಿಬಿ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳ ನಡುವಿನ ಪಂದ್ಯದ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಹೆಚ್ಚಿನ ದರಕ್ಕೆ ಆರೋಪಿಗಳು ಮಾರಾಟ ಮಾಡುತ್ತಿದ್ದರು.

ಖಚಿತ ಮಾಹಿತಿ ಆಧರಿಸಿದ ಪೊಲೀಸರ ತಂಡ, ಯಶವಂತಪುರ ಪೊಲೀಸ್ ಠಾಣಾ ವ್ಯಾಪ್ತಿಯ ಪೈಪ್‌ಲೈನ್ ರಸ್ತೆಯಲ್ಲಿ ಟಿಕೆಟ್ ಮಾರಾಟದಲ್ಲಿ ತೊಡಗಿದ್ದ ಆರೋಪಿ ಚರಣ್ ರಾಜ್ ಅವರನ್ನು ವಶಕ್ಕೆ ಪಡೆದು, ₹ 1,200 ಮುಖಬಲೆಯ 12 ಟಿಕೆಟ್ ಮತ್ತು ಮೊಬೈಲ್ ವಶಕ್ಕೆ ಪಡಿಸಿಕೊಂಡು ವಿಚಾರಣೆ ನಡೆಸಿತು.

ಬಳಿಕ ಪ್ರಕರಣದಲ್ಲಿ ಭಾಗಿಯಾಗಿದ್ದ ಇತರೆ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಅವರಿಂದ 20 ಐಪಿಎಲ್ ಟಿಕೆಟ್‌ಗಳು, ನಾಲ್ಕು ಮೊಬೈಲ್ ಮತ್ತು ಒಂದು ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಸಿಬಿ ವಿಶೇಷ ವಿಚಾರಣಾ ದಳಕ್ಕೆ ಪ್ರಕರಣ ವರ್ಗಾವಣೆಯಾಗಿದ್ದು, ತನಿಖೆ ಮುಂದುವರಿದಿದೆ.



ಆರೋಪಿಗಳಿಂದ ವಶಕ್ಕೆ ಪಡೆದ ಐಪಿಎಲ್ ಟಿಕೆಟ್, ಮೊಬೈಲ್, ನಗದು

ಮಳವಳ್ಳಿಯ ವಕೀಲ ಜಗದೀಶ್ ಕೊಲೆ ಶಂಕೆ

ನೈಸ್ ರಸ್ತೆಯಲ್ಲಿ ವ್ಯಕ್ತಿಯ ಶವ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನ್ನೇರುಘಟ್ಟ-ಕನಕಪುರ ಮಾರ್ಗದ ನೈಸ್ ರಸ್ತೆಯಲ್ಲಿ ವಕೀಲ ಜಗದೀಶ್ ಅವರ ಮೃತದೇಹ ಪತ್ತೆಯಾಗಿದ್ದು, ಕೊಲೆ ಶಂಕೆ ವ್ಯಕ್ತಪಡಿಸಿರುವ ಕೆಂಗೇರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಮಂಡ್ಯ ಜಿಲ್ಲೆಯ ಮಳವಳ್ಳಿಯ ಜಗದೀಶ್ ನಗರದ ಉಲ್ಲಾಳದಲ್ಲಿ ವಾಸವಿದ್ದರು. ಮೇ 2ರಂದು ಸಂಜೆ 7.30 ರಿಂದ 8 ಗಂಟೆ ಸುಮಾರಿಗೆ ನೈಸ್ ರಸ್ತೆಯಲ್ಲಿ ಅವರ ಕಾರು ಪತ್ತೆಯಾಗಿದ್ದು, ಕಾರು ನಿಲ್ಲಿಸಿದ ಜಾಗದಿಂದ 100 ಮೀಟರ್ ದೂರದಲ್ಲಿ ಅವರ ಮೃತದೇಹ ಪತ್ತೆಯಾಗಿದೆ. ಕಾರಿನ ಒಂದೆರಡು ಕಡೆಗಳಲ್ಲಿ ಸಣ್ಣ ಪ್ರಮಾಣದ ಅಪಘಾತವಾದ ಗುರುತುಗಳಿವೆ.



ಜಗದೀಶ್

ಅಪಘಾತದ ವಿಚಾರವಾಗಿ ಗಲಾಟೆ ನಡೆದಿದೆಯೇ? ಅಥವಾ ಉದ್ದೇಶ ಪೂರ್ವಕವಾಗಿ ಕೊಲೆ ಮಾಡಲಾಗಿದೆಯೇ ಎಂಬುದರ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮೃತದೇಹವು ರಕ್ತಸಿಕ್ತವಾಗಿ ಕಂಡುಬಂದಿದ್ದು, ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಲಾಗಿದೆ. ವರದಿ ಬಂದ ಬಳಿಕ ಮತ್ತಷ್ಟು ಮಾಹಿತಿ ಗೊತ್ತಾಗಲಿದೆ ಎಂದು ಪೊಲೀಸರು ಹೇಳಿದರು.

'ರಸ್ತೆ ಪಕ್ಕದಲ್ಲಿ ಮೃತದೇಹ ಪತ್ತೆಯಾದ ಬಗ್ಗೆ ಶುಕ್ರವಾರ ರಾತ್ರಿ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಬಂದಿದೆ. ಪ್ರಾಥಮಿಕ ಮಾಹಿತಿ ಪ್ರಕಾರ ರಸ್ತೆ ಪಕ್ಕದಲ್ಲಿ ಕಾರು ನಿಂತಿದ್ದು, ಪಾರ್ಕಿಂಗ್ ಲೈಟ್ ಉರಿಯುತ್ತಿತ್ತು. ಕಾರು ನಿಲ್ಲಿಸಿದ ಜಾಗದಿಂದ 100 ಮೀಟರ್ ದೂರದಲ್ಲಿ ಮೃತದೇಹ ಪತ್ತೆಯಾಗಿದ್ದು, ಕಾರಿನ ಎರಡು ಕಡೆಗಳಲ್ಲಿ ಅಪಘಾತದ ಗುರುತುಗಳಿವೆ. ಮೃತರ ಸಂಬಂಧಿಕರ ದೂರು ಆಧರಿಸಿ, ಕೆಂಗೇರಿ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆಗೆ ತಂಡವನ್ನು ರಚಿಸಲಾಗಿದೆ' ಎಂದು ಪಶ್ಚಿಮ ವಲಯದ ಹೆಚುವರಿ ಪೊಲೀಸ್ ಆಯುಕ್ತ ವಿಕಾಶ್ ಕುಮಾರ್ ವಿಕಾಶ್ ತಿಳಿಸಿದ್ದಾರೆ.

ಪ್ರಕರಣ ಸಂಬಂಧ ಮೂವರನ್ನು ವಶಕ್ಕೆ ಪಡೆದು, ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಮಾನವ ಹಕ್ಕು ಉಲ್ಲಂಘನೆ ಆರೋಪ'

ಬೆಂಗಳೂರು: ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಅರಣ್ಯ ಇಲಾಖೆಯು ನಮ್ಮ ಅರಣ್ಯ ಹಕ್ಕುಗಳು ಹಾಗೂ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತಿದೆ ಎಂದು ನಾಗರಹೊಳೆ ಆದಿವಾಸಿ ಜಮ್ಮ-ಪಾಳೆ ಹಕ್ಕು ಸ್ಥಾಪನಾ ಸಮಿತಿ ಆರೋಪಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ತಿಮ್ಮ ಜೆ.ಕೆ., 'ಜೇನು ಕುರುಬ, ಬೆಟ್ಟ ಕುರುಬ, ಯರವ ಮತ್ತು ಪಣಿಯ ಆದಿವಾಸಿ ಜನರು ಅರಣ್ಯದಲ್ಲಿ ವಾಸ ಮಾಡುತ್ತಿದ್ದೇವೆ. ಆದರೆ ಅರಣ್ಯ ಇಲಾಖೆಯವರು ನಮ್ಮ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸುತ್ತಿದ್ದಾರೆ. ನಾಗರಹೊಳೆ ಕಾಡಿನೊಳಗೆ ಮತ್ತು ಹೊರಗೆ ವಾಸಿಸುವ ಆದಿವಾಸಿಗಳ ಮೇಲೆ ಹುಲಿ ಸಂರಕ್ಷಣೆಯ ಹೆಸರಿನಲ್ಲಿ ಕಿರುಕುಳ ನೀಡುತ್ತಿದ್ದಾರೆ' ಎಂದು ದೂರಿದರು.

'ಅರಣ್ಯ ಚೆಕ್ ಪೋಸ್ಟ್‌ಗಳನ್ನು ನಿರ್ಮಿಸುವ ಮೂಲಕ ನಮ್ಮ ಮನೆಗಳಿಗೆ ತೆರಳುವುದಕ್ಕೆ ನಿರ್ಬಂಧಿಸುತ್ತಿದ್ದಾರೆ. ಅರಣ್ಯ ಉತ್ಪನ್ನಗಳ ಸಂಗ್ರಹಣೆಯಲ್ಲಿ ನಿರ್ಬಂಧ ವಿಧಿಸುತ್ತಿದ್ದಾರೆ. ಆದ್ದರಿಂದ ಅರಣ್ಯ ಹಕ್ಕು ಕಾಯ್ದೆ–2006ಅನ್ನು ಜಾರಿಗೊಳಿಸಬೇಕು. ನಮ್ಮ ಸಮುದಾಯದವರನ್ನು ಕಾಡಿನಿಂದ ಬಲವಂತದಿಂದ ಒಕ್ಕಲೆಬ್ಬಿಸಬಾರದು' ಎಂದು ಆಗ್ರಹಿಸಿದರು.

MYSORE EDUCATION SOCIETY (MES)

"Brahmi", #62, 10th Main, 15th Cross, Malleswaram, Bengaluru-560003, www.mesinstitutions.in

*Hearty Congratulations to the **Rank Holders** for their Exemplary Performance in the **Board Examinations,** March 2025*

MES Kishora Kendra School (State Board)

Malleswaram, Bengaluru-560003 website: www.meskks.in



MADHUSUDHAN RAJU S — 100% 1st RANK
NAGADEEPTI K SHASTRY — 99.4% 5th RANK



ADITHI ASHWIN — 99.2% 6th RANK
KEERTHANA M — 99.2% 6th RANK
BHANU KARTHIK SATTA — 99% 7th RANK
PURVI MANJUNATH KODIHALLI — 98.7% 9th RANK
NAYANA S — 98.6% 10th RANK
ADITYA S — 98.2% 12th RANK
KEERTHANA B S — 98.2% 12th RANK
NAMANA S — 98.2% 12th RANK
VASAVI V HEGDE — 98.2% 12th RANK
KOMAL RAGHAVENDRA — 98.1% 13th RANK



TEJAS R KUDALKAR — 98.1% 13th RANK
DEEPAK UMESH MOUDGHALYA — 97.9% 14th RANK
RAGHAVI T R — 97.9% 14th RANK
SHREYAS BOLAR — 97.9% 14th RANK
PRITAM AJIT NAYAK — 97.8% 15th RANK
BHRAMARA S SHETTAR — 97.6% 16th RANK
LEKHARAJ — 97.4% 17th RANK
PRERANA S K — 97.3% 18th RANK
DHRITI S — 97.1% 19th RANK
B LAKSHMEE NAGACHAITANYA — 97% 20th RANK

MES Kishore Kendra Public School (ICSE Board)

Vidyaranyapura, Bengaluru-560097 website: www.meskkps.in

100 PERCENT RESULT



AYUSH AGRAWAL — 98.4%
RUTHU KIRAN — 98.2%
STUTI SHEETAL VARDHAMAN — 98%



PRIYANKA G S — 98%
SANAVI G — 97%
KUMAR L — 96.4%
BUSHRA NAVEEDA — 96.4%
SHRIJANI H — 96.4%
SUJAY C SANKESHWAR — 96.2%
KUSHAAL M MUTHUGADURU — 96%
KARTHIK R HANDE — 95.2%
PUNARVASU A — 95%
SRIHAMSINI R — 95%

Admissions are Open (2025-26) in the four PU Colleges of MES

MES PU COLLEGE OF ARTS, COMMERCE & SCIENCE

15th Cross, Malleswaram, Bengaluru - 560 003. Ph: 080-23562536 / 8147521258 www.mesacspuc.in

Courses Offered

SCIENCE
- PCMC (Physics, Chemistry, Mathematics, Computer Science)
- PCMB (Physics, Chemistry, Mathematics, Biology)
- PCME (Physics, Chemistry, Mathematics, Electronics)

ARTS
- HELS (History, Economics, Logic, Sociology)
- HEPsyS (History, Economics, Psychology Sociology)

COMMERCE
- MEBA (Basic Maths, Economics, Business Studies, Accountancy)
- MSBA (Basic Maths, Statistics, Business Studies, Accountancy)
- CSBA (Computer Science, Statistics, Business Studies, Accountancy)

MES KISHORA KENDRA PU COLLEGE

15th Cross, Malleswaram, Bengaluru - 560 003. Ph: 080-23347266 / 7204434138 www.meskkpuc.in

Courses Offered

SCIENCE
- PCMC (Physics, Chemistry, Mathematics, Computer Science)
- PCMB (Physics, Chemistry, Mathematics,Biology)

COMMERCE
- BASE (Business, Accountancy, Statistics,Economics)
- BASCs (Business, Accountancy, Statistics, Computer Science)

MES PROF. MPL SASTRY PU COLLEGE

Rajajinagar, Bengaluru - 560 010. Ph: 080-23131468 / 23122466, 8904256529 www.mesmplpuc.in

Courses Offered

SCIENCE
- PCMC (Physics, Chemistry, Mathematics and Computer Science)
- PCMB (Physics, Chemistry, Mathematics and Biology)

COMMERCE
- EBACs (Economics, Business Studies, Accountancy, Computer Science)

MES PROF. B.R. SUBBA RAO PU COLLEGE

Vidyaranyapura, Bengaluru - 560 097. Ph: 080-23646446 / 8861126826, 8861126840 www.mesbrspuc.in

Courses Offered

SCIENCE
- PCMC (Physics, Chemistry, Mathematics, Computer Science)
- PCMB (Physics, Chemistry, Mathematics, Biology)

COMMERCE
- BASE (Business, Accountancy, Statistics, Economics)
- EBACs (Economics, Business Studies, Accountancy, Computer Science)

ವನ್ಯಜೀವಿಗೆ ಉರುಳಾದ ಹೆದ್ದಾರಿಗಳು


ಅರಣ್ಯದಲ್ಲಿ ಹಾದು ಹೋಗಿರುವ ಹೆದ್ದಾರಿಯಲ್ಲಿ ವಾಹನ ಅಪಘಾತಕ್ಕೆ ಬಲಿಯಾಗಿರುವ ಕರಡಿ

43,382 ಚ.ಕಿ.ಮೀ. ರಾಜ್ಯದಲ್ಲಿರುವ ಒಟ್ಟು ಅರಣ್ಯ ಪ್ರದೇಶ

11,198.31 ಚ.ಕಿ.ಮೀ ಸಂರಕ್ಷಿತ ಅರಣ್ಯ ಪ್ರದೇಶ

ರಾಜ್ಯದಲ್ಲಿ ರಸ್ತೆ ಅಪಘಾತದಲ್ಲಿ ಮೃತಪಟ್ಟ ವನ್ಯಜೀವಿಗಳ ವಿವರ

ಪ್ರಾಣಿ/ಪಕ್ಷಿ	2019-20	2020-21	2021-22	2022-23	2023-24	2024-25	ಒಟ್ಟು
ಆನೆ	-	-	1	1	-	-	2
ಹುಲಿ	-	-	-	-	1	-	1
ಚಿರತೆ	9	10	6	9	15	13	62
ಕೃಷ್ಣಮೃಗ	5	5	5	0	6	4	25
ಚುಕ್ಕೆ ಜಿಂಕೆ	12	12	11	13	10	10	68
ಕರಡಿ	6	2	6	5	3	2	24
ಕಾಡುಹಂದಿ	3	0	3	3	6	2	17
ಕಾಡುಕೋಣ	1	0	2	4	1	1	9
ಮುಳ್ಳುಹಂದಿ	1	0	0	2	1	0	4
ಬಾರ್ಕಿಂಗ್ ಜಿಂಕೆ	-	3	1	-	1	0	5
ಸಾಂಬಾರ್ ಜಿಂಕೆ	2	1	1	2	2	4	12
ನರಿ	1	2	3	6	3	3	18
ಕಾಡುಬೆಕ್ಕು	1	1	1	1	1	0	5
ಪುನುಗು ಬೆಕ್ಕು	-	-	1	-	1	0	2
ಚಿರತೆ ಬೆಕ್ಕು	-	1	-	5	-	2	8
ಪಟ್ಟೆ ಕತ್ತೆಕಿರುಬ	-	1	-	1	-	0	2
ನವಿಲು	1	1	1	2	1	1	7
ಒಟ್ಟು	42	39	41	31	52	42	247

(ಮಾಹಿತಿ: ಅರಣ್ಯ ಇಲಾಖೆ)

> ದೊಡ್ಡ ಪ್ರಾಣಿಗಳಾದರೆ ವಾಹನ ಸವಾರರಿಗೆ ಕಾಣಿಸುತ್ತವೆ. ಹಾವು, ಓತಿಕ್ಯಾತ, ಕಪ್ಪೆ, ಸಿಂಗಳೀಕ ಸೇರಿ ಸಣ್ಣಪುಟ್ಟ ವನ್ಯಜೀವಿಗಳು ಲೆಕ್ಕಕ್ಕಿಲ್ಲವಾಗಿವೆ. ಇವು ಜೀವವೈವಿಧ್ಯತೆಗೆ ಕೊಡುಗೆ ನೀಡುತ್ತಿಲ್ಲವೇ, ಇವುಗಳನ್ನು ನಾವು ರಕ್ಷಣೆ ಮಾಡಬೇಕಲ್ಲವೆ?
>
> **ಡಿ.ವಿ. ಗಿರೀಶ್,** ವೈಲ್ಡ್ ಕ್ಯಾಟ್ -ಸಿ ಸಂಸ್ಥೆ

> ಹೆದ್ದಾರಿ ನಿರ್ಮಿಸುವಾಗ ಅರಣ್ಯದೊಳಗೆ ಮಾತ್ರ ವನ್ಯಜೀವಿಗಳಿಗೆ ಸೌಲಭ್ಯ ಕಲ್ಪಿಸುವ ಬಗ್ಗೆ ಯೋಚಿಸಲಾಗುತ್ತದೆ. ಅರಣ್ಯೇತರ ಪ್ರದೇಶದಲ್ಲೂ ಸಾಗುವ ಪ್ರಾಣಿಗಳ ಸುರಕ್ಷತೆಗೂ ಕ್ರಮ ಕೈಗೊಳ್ಳಬೇಕು.
>
> **ಗಿರಿಧರ ಕುಲಕರ್ಣಿ,** ಪರಿಸರ ಕಾರ್ಯಕರ್ತ

> ಹೆದ್ದಾರಿ ನಿರ್ಮಾಣ ಮತ್ತು ವಿಸ್ತರಣೆ ಮಾಡುವಾಗ ವನ್ಯಜೀವಿಗಳು ರಸ್ತೆ ದಾಟಲು ಮೇಲ್ಸೇತುವೆ ಮತ್ತು ಅಂಡರ್‌ಪಾಸ್ ನಿರ್ಮಾಣಕ್ಕೆ ಆದ್ಯತೆ ನೀಡಲಾಗುತ್ತಿದೆ. ಕನಕಪುರ ರಸ್ತೆಯಲ್ಲಿ ಈಗಾಗಲೇ ನಿರ್ಮಾಣವಾಗಿದ್ದು, ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ 3 ಕಡೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ
>
> **ವಿಲಾಸ್ ಪಿ. ಬ್ರಹ್ಮಂಕರ್,** ಪ್ರಾದೇಶಿಕ ಅಧಿಕಾರಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

> ಹೆದ್ದಾರಿಗಳಲ್ಲಿ ಪಕ್ಷಿಗಳು ಸಹ ವಾಹನ ಅಪಘಾತಕ್ಕೆ ಬಲಿಯಾಗುತ್ತಿರುವುದರ ಕುರಿತು ತಜ್ಞರ ನೇತೃತ್ವದಲ್ಲಿ ಅಧ್ಯಯನ ನಡೆಸಬೇಕು. ಪಕ್ಷಿಗಳು ವಾಹನಗಳಿಗೆ ಸಿಲುಕದಂತೆ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು
>
> **ಗೌರಿ ಶಿವಯೋಗಿ,** ಪಶು–ಪಕ್ಷಿಗಳ ಸಂರಕ್ಷಕಿ

> ಅರಣ್ಯ ಪ್ರದೇಶದಲ್ಲಿ ಹೆದ್ದಾರಿ ನಿರ್ಮಾಣ ಅಥವಾ ವಿಸ್ತರಣೆ ಯೋಜನೆ ರೂಪಿಸುವಾಗ, ಆ ಮಾರ್ಗಗಳಲ್ಲಿ ಕಡ್ಡಾಯವಾಗಿ ವನ್ಯಜೀವಿಗಳ ಸರಾಗ ಓಡಾಟಕ್ಕೆ ಓವರ್‌ಪಾಸ್ ಮತ್ತು ಅಂಡರ್‌ಪಾಸ್ ಸೇತುವೆ ನಿರ್ಮಿಸಬೇಕಾಗುತ್ತದೆ. ಇಲ್ಲದಿದ್ದರೆ ಇಲಾಖೆ ಅರಣ್ಯದಲ್ಲಿ ಹೆದ್ದಾರಿ ನಿರ್ಮಾಣಕ್ಕೆ ಅನುಮತಿ ನೀಡದು
>
> **ಸುಭಾಷ್ ಕೆ. ಮಾಲ್ಖಡೆ,** ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)

ಒಂದನೇ ಪುಟದಿಂದ..

280ಕ್ಕೂ ಹೆಚ್ಚು ವನ್ಯಜೀವಿಗಳು ಬಲಿ: ರಾಜ್ಯ ಅರಣ್ಯ ಇಲಾಖೆಯ ಅಂಕಿಅಂಶಗಳೇ ಹೇಳುವಂತೆ, ಕಳೆದ ಆರು ವರ್ಷಗಳಲ್ಲಿ 280ಕ್ಕೂ ಹೆಚ್ಚು ವನ್ಯಜೀವಿಗಳು ಅರಣ್ಯ ಪ್ರದೇಶದಲ್ಲಿ ವಾಹನ ಅಪಘಾತಕ್ಕೆ ಬಲಿಯಾಗಿವೆ. ಸಾಕು ಪ್ರಾಣಿಗಳು ಸಹ ಜೀವ ಕಳೆದುಕೊಳ್ಳುತ್ತಿವೆ. ಇವು ವರದಿಯಾಗಿರುವ ಪ್ರಕರಣಗಳಷ್ಟೇ. ದಟ್ಟಾರಣ್ಯದಲ್ಲಿ ರಾತ್ರಿ ಮತ್ತು ನಸುಕಿನಲ್ಲಿ ಸಂಭವಿಸುವ ಎಷ್ಟೋ ವನ್ಯಜೀವಿಗಳ ಸಾವು–ನೋವುಗಳು ಯಾರ ಗಮನಕ್ಕೂ ಬರುವುದೇ ಇಲ್ಲ. ಗೊತ್ತಾದ ಪ್ರಕರಣಗಳಲ್ಲಷ್ಟೇ ಪ್ರಾಣಿಗಳ ಕಳೇಬರ ಗುರುತಿಸಿ ಅಂತ್ಯಕ್ರಿಯೆ ನಡೆಸುತ್ತೇವೆ ಎನ್ನುತ್ತಾರೆ ಅರಣ್ಯ ಇಲಾಖೆ ಅಧಿಕಾರಿಗಳು.

ಸಂಪರ್ಕ ಸೇತು: ಕರ್ನಾಟಕವು ಉತ್ಕೃಷ್ಟ ಅರಣ್ಯ, ವನ್ಯಜೀವಿ ಹಾಗೂ ಜಲ ಸಂಪತ್ತನ್ನು ಹೊಂದಿದೆ. ದೇಶದ ಶೇ 25ರಷ್ಟು ಆನೆ ಸಂತತಿ ಮತ್ತು ಶೇ 18ರಷ್ಟು ಹುಲಿ ಸಂತತಿ ರಾಜ್ಯದಲ್ಲಿದೆ. 5 ರಾಷ್ಟ್ರೀಯ ಉದ್ಯಾನವನಗಳು, 30 ವನ್ಯಜೀವಿ ಅಭಯಾರಣ್ಯಗಳು, 16 ಸಂರಕ್ಷಿತ ಮೀಸಲು ಅರಣ್ಯಗಳನ್ನು ಒಳಗೊಂಡಂತೆ ಶೇ 25ರಷ್ಟು ಅರಣ್ಯ ಪ್ರದೇಶವನ್ನು ವನ್ಯಜೀವಿ ಮತ್ತು ಜೀವವೈವಿಧ್ಯ ಸಂರಕ್ಷಣೆಗಾಗಿ ಮೀಸಲಿಡಲಾಗಿದೆ.

ಹುಲಿ ಸಂರಕ್ಷಿತ ಪ್ರದೇಶಗಳಾದ ಕಾಳಿ, ಭದ್ರಾ, ಬಂಡೀಪುರ, ನಾಗರಹೊಳೆ, ಬಿಳಿಗಿರಿ ರಂಗನಾಥಸ್ವಾಮಿ ಬೆಟ್ಟದಲ್ಲಿ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಸ್ಥಳೀಯ ರಸ್ತೆಗಳು ಹಾದು ಹೋಗಿವೆ. ದೇಶದ ಏಕೈಕ ರಣಹದ್ದು ಅಭಯಾರಣ್ಯವಾದ ರಾಮನಗರದ ರಾಮದೇವರ ಬೆಟ್ಟದ ಸುತ್ತಲಿನ ಪರಿಸರ ಸೂಕ್ಷ್ಮವಲಯ ಪ್ರದೇಶವೂ ಹೆದ್ದಾರಿಯಿಂದ ಮುಕ್ತವಾಗಿಲ್ಲ. ಇಲ್ಲೆಲ್ಲೂ ಕಾಡುಪ್ರಾಣಿ ಅಥವಾ ಜಾನುವಾರುಗಳ ಓಡಾಟಕ್ಕೆ ಕಾರಿಡಾರ್ ಇಲ್ಲವೇ ಇಲ್ಲ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವೂ ಪ್ರಾಣಿಗಳಿಗೆ ಮೇಲುಸೇತುವೆ ಅಥವಾ ಕೆಳಸೇತುವೆಯನ್ನು ಎಲ್ಲಿಯೂ ನಿರ್ಮಿಸಿಲ್ಲ. ಇವುಗಳ ಜೀವಕ್ಕೆ ಬೆಲೆಯೇ ಇಲ್ಲವಾಗಿದೆ.

ವೇಗದ ಮಿತಿ ಲೆಕ್ಕಕ್ಕಿಲ್ಲ: ರಾಷ್ಟ್ರೀಯ ಉದ್ಯಾನವನ, ವನ್ಯಜೀವಿಧಾಮ, ಹುಲಿ ಸಂರಕ್ಷಿತ ಪ್ರದೇಶ, ಅಭಯಾರಣ್ಯಗಳಲ್ಲಿರುವ ರಸ್ತೆಗಳಲ್ಲಿ ವಾಹನಗಳ ವೇಗ ಪ್ರತಿ ಗಂಟೆಗೆ 30ರಿಂದ 40 ಕಿ.ಮೀ. ದಾಟುವಂತಿಲ್ಲ. ದಾರಿಯುದ್ದಕ್ಕೂ ಸೂಚನಾ ಫಲಕಗಳನ್ನು ಅಳವಡಿಸಲಾಗಿದ್ದರೂ, ವಾಹನ ಚಾಲಕರಿಗೆ ವೇಗದ ಮಿತಿ ಲೆಕ್ಕಕ್ಕಿಲ್ಲವಾಗಿದೆ. ಹಾಗಾಗಿಯೇ, ಅಪರಿಚಿತ ವಾಹನಕ್ಕೆ ಸಿಲುಕಿ ಪ್ರಾಣಿ ಸಾವು ಎಂಬುದು ಸುದ್ದಿಯಾಗುತ್ತಿದೆಯೇ ಹೊರತು, ಡಿಕ್ಕಿ ಹೊಡೆದವರ ವಿರುದ್ಧ ಕಾನೂನು ಕ್ರಮ ಕೈಗೊಂಡ ನಿದರ್ಶನ ಅತಿ ವಿರಳ.

‘ಅಪಘಾತಗಳು ಸಾಮಾನ್ಯವಾಗಿ ಬೆಳಗಿನ ಜಾವ ಇಲ್ಲವೇ ರಾತ್ರಿ ಸಂಭವಿಸುತ್ತಿವೆ. ಹೀಗಾಗಿ ಅಪಘಾತ ಮಾಡಿದ ವಾಹನಗಳ ಪತ್ತೆ ಸಾಧ್ಯವಾಗಿಲ್ಲ’ ಎಂದು ಶಿವಮೊಗ್ಗ ವನ್ಯಜೀವಿ ವಲಯದ ಡಿಸಿಎಫ್ ಪ್ರಸನ್ನಕೃಷ್ಣ ಪಟಗಾರ ಹೇಳಿದರು.

ಆವಾಸಸ್ಥಾನ ವಿಸ್ತರಣೆ: ಅರಣ್ಯ ಪ್ರದೇಶವನ್ನು ಅಭಿವೃದ್ಧಿಯ ಭೂತ ಪ್ರವೇಶಿಸಿದಂತೆ ವನ್ಯಜೀವಿಗಳ ಆವಾಸಸ್ಥಾನ ಅರಣ್ಯದಾಚೆಗೆ ಹಿಗ್ಗುತ್ತಿದೆ. ಮತ್ತೊಂದೆಡೆ ವನ್ಯಜೀವಿಗಳ ಸಂಖ್ಯೆ ಹೆಚ್ಚುತ್ತಿದೆ. ರಾಷ್ಟ್ರೀಯ ಉದ್ಯಾನವನಗಳಲ್ಲಿ ಹುಲಿ ಸಾಂದ್ರತೆಯ ಹೆಚ್ಚಳ ಹಾಗೂ ಅಭಿವೃದ್ಧಿ ಒತ್ತಡ, ಹೊಸ ಆವಾಸಸ್ಥಳಗಳ ಹುಡುಕಾಟದ ಒತ್ತಡಕ್ಕೆ ಅವುಗಳನ್ನು ಸಿಲುಕಿಸಿವೆ. ಹುಲಿ ಸಂರಕ್ಷಿತಾರಣ್ಯಗಳಾದ ಬಂಡೀಪುರ ಮತ್ತು ನಾಗರಹೊಳೆಯಿಂದ ಮೈಸೂರು ನಗರ ಸುಮಾರು 60 ಕಿ.ಮೀ. ದೂರವಿದ್ದರೂ, ಕಳೆದ ವರ್ಷ ನಗರದಿಂದ ಕೇವಲ ಐದು ಕಿ.ಮೀ. ದೂರದಲ್ಲಿರುವ ಮಂಡಕಳ್ಳಿ ವಿಮಾನ ನಿಲ್ದಾಣ ರಸ್ತೆಯಲ್ಲಿ ಹುಲಿಯೊಂದು ಕಾರಿಗೆ ಬಲಿಯಾಗಿತ್ತು. ಆವಾಸಸ್ಥಾನಕ್ಕೆ ಸೂಕ್ತವಲ್ಲದ ಪ್ರದೇಶಗಳತ್ತಲೂ ಹುಲಿಗಳು ಬರುತ್ತಿವೆ. ಸಣ್ಣಪುಟ್ಟ ಕಿರು ಅರಣ್ಯಗಳನ್ನು ಹಾದು ಹೋಗಿರುವ ಹೆದ್ದಾರಿಗಳನ್ನು ದಾಟಿಯೇ ವನ್ಯಜೀವಿಗಳು ನೆಲೆ ಕಂಡುಕೊಳ್ಳಲು ಹೆಣಗಾಡುತ್ತಿವೆ ಎನ್ನುವುದು ಪರಿಸರವಾದಿಗಳ ಪ್ರತಿಪಾದನೆ.

ವಾಹನ ಸಂಚಾರ ನಿರ್ಬಂಧ: ಶೇ 60ರಷ್ಟು ಅರಣ್ಯವೇ ಇರುವ ಚಾಮರಾಜನಗರ ಜಿಲ್ಲೆಯು ಕೇರಳ ಹಾಗೂ ತಮಿಳುನಾಡಿನೊಂದಿಗೆ ಗಡಿ ಹಂಚಿಕೊಂಡಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೂಲಕ ತಮಿಳುನಾಡು ಹಾಗೂ ಕೇರಳಕ್ಕೆ ಸಂಪರ್ಕ ಕಲ್ಪಿಸುವ ಹೆದ್ದಾರಿಗಳಿವೆ. ಇಲ್ಲಿನ ಮುಖ್ಯ ಹೆದ್ದಾರಿಗಳು ಬಹುತೇಕ ಅರಣ್ಯ ಪ್ರದೇಶದೊಳಗೆ ಹಾದು ಹೋಗಿರುವುದರಿಂದ ಮೂರು ರಾಜ್ಯಗಳು ರಾತ್ರಿ ವಾಹನ ಸಂಚಾರಕ್ಕೆ ನಿರ್ಬಂಧ ಹೇರಿವೆ. ರಾತ್ರಿ ವಾಹನ ಓಡಾಟವಿದ್ದಾಗ ಕಾಡುಪ್ರಾಣಿಗಳ ಸಾವು ನಿರಂತರವಾಗಿತ್ತು. ಇದೀಗ, ರಾತ್ರಿ ಸಂಚಾರ ನಿರ್ಬಂಧ ತೆರವುಗೊಳಿಸುವ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ.

ಕೊಳ್ಳೇಗಾಲದಿಂದ ಹನೂರು ಮಾರ್ಗವಾಗಿ ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ ಕಾವೇರಿ ಮತ್ತು ಮಲೆಮಹದೇಶ್ವರ ವನ್ಯಧಾಮಗಳ ಮಧ್ಯೆ ಹಾದು ಹೋಗುತ್ತದೆ. ಮಧುವನಹಳ್ಳಿಯಿಂದ ತಮಿಳುನಾಡಿನ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ–38 ಬಿಳಿಗಿರಿ ರಂಗನಾಥಸ್ವಾಮಿ ಹುಲಿ ಸಂರಕ್ಷಿತ ಪ್ರದೇಶದ ಅರ್ಧನಾರಿಪುರ ಮೂಲಕ ಹಾದು ಹೋಗುತ್ತದೆ. ಚಾಮರಾಜನಗರದ ಅಟ್ಟುಗೂಳಿಪುರದಿಂದ ಪುಣಜನೂರು ಚೆಕ್‌ಪೋಸ್ಟ್‌ವರೆಗೆ 20 ಕಿ.ಮೀ. ರಸ್ತೆ ಕಾಡಿನೊಳಗೆ ಹಾದು ಹೋಗುತ್ತದೆ.

ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ಅರ್ಧನಾರಿಪುರ – ಸತ್ಯಮಂಗಲ ರಸ್ತೆಯಲ್ಲಿ ಪ್ರಾಣಿಗಳು ವಾಹನಗಳಿಗೆ ಬಲಿಯಾಗುತ್ತಿದ್ದುದ್ದರಿಂದ ತಮಿಳುನಾಡಿನ ಈರೋಡ್ ಜಿಲ್ಲಾಧಿಕಾರಿ ರಾತ್ರಿ ವಾಹನ ಸಂಚಾರಕ್ಕೆ ನಿರ್ಬಂಧ ಹೇರಿದರು. ಇದನ್ನು ಪ್ರಶ್ನಿಸಿ ಲಾರಿ ಮಾಲೀಕರ ಸಂಘವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಆದರೆ, ಸುಪ್ರೀಂ ಕೋರ್ಟ್ ಜಿಲ್ಲಾಧಿಕಾರಿ ಆದೇಶವನ್ನು ಎತ್ತಿ ಹಿಡಿದಿದ್ದರಿಂದ ವನ್ಯಜೀವಿಗಳ ಸಾವಿಗೆ ಬ್ರೇಕ್ ಬಿತ್ತು. ಇದರ ಬೆನ್ನಲ್ಲೆ ಹುಣಸೆಪಾಳ್ಯ ಬಳಿ ಚಿರತೆಗೆ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದು ಸ್ಥಳದಲ್ಲೇ ಮೃತಪಟ್ಟಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಆಗಿನ ಚಾಮರಾಜನಗರ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಚೆಕ್‌ಪೋಸ್ಟ್‌ಗಳಲ್ಲಿ ರಾತ್ರಿ ವಾಹನ ಸಂಚಾರವನ್ನು ಸ್ಥಗಿತಗೊಳಿಸಿದರು. ಆದರೂ ಮಹದೇಶ್ವರ ಬೆಟ್ಟದಲ್ಲಿ ವಿಶೇಷ ದಿನಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ರಾತ್ರಿಯಿಡೀ ವಾಹನಗಳ ಸಂಚರಿಸುತ್ತಿರುವುದರಿಂದ ವನ್ಯಪ್ರಾಣಿಗಳು ವಾಹನಗಳಿಗೆ ಸಿಲುಕಿ ಸಾವೀಗೀಡಾಗುತ್ತಲೇ ಇವೆ.


ಅರಣ್ಯದಲ್ಲಿ ಹಾದು ಹೋಗಿರುವ ಹೆದ್ದಾರಿಯಲ್ಲಿ ವಾಹನ ಅಪಘಾತಕ್ಕೆ ಬಲಿಯಾಗಿರುವ ಚಿರತೆ

ನಿಯಂತ್ರಣಕ್ಕೆ ರಸ್ತೆ ಉಬ್ಬು: ಮಡಿಕೇರಿಗೆ ಹೊಂದಿಕೊಂಡಂತಿರುವ ನಾಗರಹೊಳೆ ಹುಲಿ ರಕ್ಷಿತಾರಣ್ಯದ ಮತ್ತಿಗೋಡು ಆನೆ ಶಿಬಿರದ ಸಮೀಪ 2018ರ ಅ. 8ರಂದು ನಸುಕಿನಲ್ಲಿ ‘ರಂಗ’ ಹೆಸರಿನ ಆನೆ ರಸ್ತೆ ದಾಟುತ್ತಿದ್ದಾಗ ಬಸ್ ಡಿಕ್ಕಿ ಹೊಡೆದು ಮೃತಪಟ್ಟಿತ್ತು. ಅದಕ್ಕೂ ಮುಂಚೆ ಆನೆ ಚೌಕೂರು ವಲಯದಲ್ಲಿ ಕಾಡೆಮ್ಮೆ ವಾಹನಕ್ಕೆ ಬಲಿಯಾಯಿತು. ಈ ಘಟನೆಗಳ ಬೆನ್ನಲ್ಲೇ, ಈ ಮಾರ್ಗದಲ್ಲಿ 500 ಮೀಟರ್‌ಗೆ ಒಂದರಂತೆ ರಸ್ತೆ ಉಬ್ಬು ಹಾಕಲಾಯಿತು. ಅಪಘಾತಗಳು ಸ್ವಲ್ಪಮಟ್ಟಿಗೆ ಕಡಿಮೆಯಾಯಿತು.

ಕೊಡಗಿನಲ್ಲಿ ಹಾದು ಹೋಗಿರುವ ಏಕೈಕ ರಾಷ್ಟ್ರೀಯ ಹೆದ್ದಾರಿ– 275 ವಿಸ್ತರಿಸುವ ಕುರಿತ ಚರ್ಚೆಗಳು ನಡೆದಿವೆ. ಒಂದು ವೇಳೆ ವಿಸ್ತರಣೆಯಾದರೆ ಕುಶಾಲನಗರದಿಂದ ಸಂಪಾಜೆವರೆಗೂ ರಸ್ತೆ ಚತುಷ್ಪಥವಾಗಲಿದೆ. ಮತ್ತೊಂದೆಡೆ, ಕೇರಳ ಸಂಪರ್ಕಿಸುವ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವವನ್ನು ರಾಜ್ಯ ಸರ್ಕಾರ 2018ರಲ್ಲೇ ಕೇಂದ್ರಕ್ಕೆ ಕಳುಹಿಸಿದೆ. ಮಡಿಕೇರಿ– ವಿರಾಜಪೇಟೆ– ಮಾಕುಟ್ಟ ಮೂಲಕ ಕೇರಳ ಸಂಪರ್ಕಿಸುವ ಅಂತರರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೇಗೇರಿಸಲು ಡಿಪಿಆರ್ ಸಲ್ಲಿಕೆಯಾಗಿದೆ. ಇದು ವನ್ಯಜೀವಿಗಳಿಗೆ ಬಹಳ ದೊಡ್ಡ ಆಪತ್ತನ್ನು ತರುವ ಸಾಧ್ಯತೆ ಇದೆ.

ಕೇರಳ ಸಂಪರ್ಕಿಸುವ ಮತ್ತೊಂದು ರಾಜ್ಯ ಹೆದ್ದಾರಿ ಮಡಿಕೇರಿ– ಪಣತ್ತೂರು ರಸ್ತೆಯನ್ನೂ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವ ಕೇಂದ್ರದ ಮುಂದಿದೆ. ಒಂದು ವೇಳೆ ಈ ಎರಡೂ ಪ್ರಸ್ತಾವಗಳಿಗೆ ಕೇಂದ್ರ ಅಸ್ತು ಎಂದರೆ ಈ ರಸ್ತೆಗಳಲ್ಲಿ ಹೆಚ್ಚಿನ ವಾಹನಗಳು ಸಂಚರಿಸುವುದು ನಿಶ್ಚಿತ. ಈ ಯೋಜನೆಗಳಲ್ಲಿ ವನ್ಯಜೀವಿ ಕಾರಿಡಾರ್ ನಿರ್ಲಕ್ಷ್ಯಿಸಿದರೆ ವನ್ಯಜೀವಿಗಳ ಪ್ರಾಣಕ್ಕೆ ಮತ್ತಷ್ಟು ಸಂಚಕಾರ ಬರಲಿದೆ ಎನ್ನುತ್ತಾರೆ ವನ್ಯಜೀವಿ ತಜ್ಞರು.

ಶೇ 12ರಷ್ಟು ಸಾವು: ಉತ್ತರ ಕನ್ನಡ ಜಿಲ್ಲೆಯು ಶೇ 80ರಷ್ಟು ಅರಣ್ಯ ಭೂಮಿಯಿದ್ದರೂ ಇಲ್ಲಿನ ಹೆದ್ದಾರಿಗಳಲ್ಲಿ ವಾಹನ ಅಪಘಾತಕ್ಕೆ ತುತ್ತಾಗುವ ವನ್ಯಜೀವಿಗಳ ಸಂಖ್ಯೆ ವಾರ್ಷಿಕವಾಗಿ ಸರಾಸರಿ 12ರಷ್ಟಿದೆ. ಕಾಳಿ ಹುಲಿ ಸಂರಕ್ಷಿತಾರಣ್ಯದಲ್ಲಿ ಹಾದು ಹೋಗಿರುವ ಸದಾಶಿವಗಢ–ಔರಾದ್ ರಾಜ್ಯ ಹೆದ್ದಾರಿಯಲ್ಲೇ ಅಪಘಾತ ಹೆಚ್ಚು. ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ಶೇ 85ರಷ್ಟು ಅರಣ್ಯ ವ್ಯಾಪಿಸಿದ್ದು, ಕರ್ನಾಟಕ– ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳ ಗಡಿಯನ್ನೂ ಸಂದಿಸುತ್ತದೆ. ಈ ತಾಲ್ಲೂಕೊಂದರಲ್ಲೇ ಒಂದು ರಾಷ್ಟ್ರೀಯ ಹೆದ್ದಾರಿ ಹಾಗೂ ಐದು ರಾಜ್ಯ ಹೆದ್ದಾರಿಗಳು ಅರಣ್ಯದ ಮೂಲಕ ಹಾದು ಹೋಗಿವೆ. ಇಲ್ಲಿ ವನ್ಯಜೀವಿಗಳು ಅಪಘಾತಕ್ಕೀಡಾಗುವುದು ತೀರಾ ಕಡಿಮೆ.

‘ವನ್ಯಜೀವಿಗಳು ಅಪಘಾತಕ್ಕೆ ಉಂಟಾಗುವುದನ್ನು ತಪ್ಪಿಸಲು ಹೆದ್ದಾರಿಯಲ್ಲಿ ಅಲ್ಲಲ್ಲಿ ನಿಧಾನವಾಗಿ ಚಲಿಸುವಂತೆ ಎಚ್ಚರಿಸುವ ಫಲಕ ಅಳವಡಿಸಲಾಗಿದೆ. ದಟ್ಟ ಅರಣ್ಯದ ನಡುವೆ ಹಾದುಹೋದ ಭಗವತಿ–ಕುಳಗಿ ರಸ್ತೆ, ಕ್ಯಾಸಲ್‌ರಾಕ್–ಭೀಮಗಡ ರಸ್ತೆಯಲ್ಲಿ ಸಂಜೆ 6ರಿಂದ ಮುಂಜಾನೆ 6 ಗಂಟೆವರೆಗೆ ಸಂಚಾರ ನಿಷೇಧಿಸಲಾಗುತ್ತಿದೆ. ಹೀಗಾಗಿ ಅಪಘಾತ ಕಡಿಮೆಯಾಗಿದೆ’ ಎಂದು ಕಾಳಿ ಹುಲಿ ಸಂರಕ್ಷಿತಾರಣ್ಯದ ಡಿಸಿಎಫ್ ನೀಲೇಶ ಶಿಂಧೆ ಕಾರಣವನ್ನು ತಿಳಿಸಿದರು.

ಆವಾಸಸ್ಥಾನ ವಿಭಜನೆ: ಚಿಕ್ಕಮಗಳೂರಿನ ಪಶ್ಚಿಮ ಘಟ್ಟದಿಂದ ಕರಾವಳಿಗೆ ಸಂಪರ್ಕಿಸುವ ಘಾಟಿಗಳಲ್ಲಿ ವನ್ಯಜೀವಿಗಳ ಆವಾಸವನ್ನು ಹೆದ್ದಾರಿಗಳು ವಿಭಜಿಸಿವೆ. ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ 2 ಹೆದ್ದಾರಿ ಹಾದು ಹೋಗಿವೆ. ಶೃಂಗೇರಿಯಿಂದ ಕೆರೆಕಟ್ಟೆ ಮೂಲಕ ಮಾಳ ಮೂಲಕ ಮಂಗಳೂರು ತಲುಪುವ ರಾಷ್ಟ್ರೀಯ ಹೆದ್ದಾರಿ ರಾಷ್ಟ್ರೀಯ ಉದ್ಯಾನದಲ್ಲಿ ಸುಮಾರು 45 ಕಿ.ಮೀ. ಹಾದು ಹೋಗಿದೆ. ಎಸ್.ಕೆ.ಬಾರ್ಡರ್‌ನಿಂದ ಕಳಸ ತಲುಪುವ ಮುಖ್ಯರಸ್ತೆಯು ಕುದುರೆಮುಖ ಉದ್ಯಾನದಲ್ಲಿ 31 ಕಿ.ಮೀ. ಹಾದು ಹೋಗುತ್ತಿದೆ. ಈ ಎರಡೂ ರಸ್ತೆಯಲ್ಲಿ ಅರಣ್ಯ ಇಲಾಖೆ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಿಕೊಂಡಿದೆ. ಪಾಸ್‌ಗಳನ್ನು ನೀಡಿ ವಾಹನಗಳನ್ನು ಮಧ್ಯದಲ್ಲಿ ನಿಲ್ಲಿಸದಂತೆ ನೋಡಿಕೊಳ್ಳುತ್ತಿದೆ. ಆದರೂ ವನ್ಯಜೀವಿಗಳು ವಾಹನಗಳಿಗೆ ಸಿಲುಕಿ ಸಾಯುತ್ತಿವೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳನ್ನು ಸಂಪರ್ಕಿಸುವ ಆಗುಂಬೆ ಘಾಟಿ, ಚಾರ್ಮಾಡಿ, ಶಿರಾಡಿ ಮತ್ತು ಸಂಪಾಜೆಯು ಪಶ್ಚಿಮಘಟ್ಟದ ಅಭಯಾರಣ್ಯಗಳನ್ನು ಸೀಳಿವೆ. ಇಲ್ಲಿ ವಾಹನ ಮತ್ತು ವನ್ಯಜೀವಿ ಸಂಚಾರ ಒಟ್ಟಿಗೇ ಇದೆ. ಬೆಂಗಳೂರಿಗೆ ಹೊಂದಿಕೊಂಡಂತಿರುವ ಬನ್ನೇರುಘಟ್ಟ ವನ್ಯಜೀವಿ ವಲಯವು ಮುತ್ತತ್ತಿ ಮೂಲಕ ಬಿಳಿಗಿರಿರಂಗನ ಬೆಟ್ಟಕ್ಕೂ ಸಂಪರ್ಕ ಕಲ್ಪಿಸುತ್ತದೆ. ಬೆಂಗಳೂರು ಮೈಸೂರಿನ ಹೆದ್ದಾರಿಯು ವನ್ಯಜೀವಿ ಕಾರಿಡಾರ್‌ಗಳನ್ನು ಛಿದ್ರಮಾಡಿವೆ.

‘ಯುರೋಪ್‌ನ ದೇಶಗಳಲ್ಲಿ ಹೆದ್ದಾರಿಗಳಲ್ಲಿ ಪ್ರಾಣಿಗಳ ಕಾರಿಡಾರ್ ಇದ್ದರೆ ವಿಶಾಲವಾದ ಮೇಲ್ಸೆತುವೆ ಮೇಲೆ ಕಾಡನ್ನೇ ಸೃಷ್ಟಿಸಿರುತ್ತಾರೆ. ಇಲ್ಲಿ ಕಾಡಿನ ಜೀವಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಪೆಂಚ್ ಮತ್ತು ಕನ್ಹಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಪ್ರಾಣಿಗಳ ಕೆಳಸೇತುವೆ, ಅಸ್ಸಾಂನಲ್ಲಿ ಆನೆಗಳಿಗೆ ಕಾರಿಡಾರ್ ಮಾಡಿದಂತೆ ರಾಜ್ಯದಲ್ಲೂ ಮಾಡಬೇಕಿತ್ತು’ ಎನ್ನುತ್ತಾರೆ ಪರಿಸರಕ್ಕಾಗಿ ನಾವು ಸಂಘಟನೆಯ ಆಂಜನೇಯ ರೆಡ್ಡಿ ನೀರಾವರಿ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ
ಪೂರಕ ಮಾಹಿತಿ: ಬ್ಯೂರೋಗಳಿಂದ

‘ಎನ್‌ಎಚ್‌ಎಐ ಹೇಳಿದ್ದೊಂದು ಮಾಡಿದ್ದೊಂದು’

‘ಬೆಂಗಳೂರು–ಮೈಸೂರು ಹೆದ್ದಾರಿಗೆ ರಣಹದ್ದು ಅಭಯಾರಣ್ಯ ವ್ಯಾಪ್ತಿಯ ಪರಿಸರ ಸೂಕ್ಷ್ಮವಲಯ ಸೇರಿದಂತೆ 20.18 ಹೆಕ್ಟೇರ್ ಅರಣ್ಯ ಪ್ರದೇಶ ಬಳಕೆಯಾಗಿದೆ. ವನ್ಯಜೀವಿಗಳ ಓಡಾಟಕ್ಕೆ ಧಕ್ಕೆಯಾಗದಂತೆ ಓವರ್‌ಪಾಸ್ ಮತ್ತು ಅಂಡರ್‌ಪಾಸ್ ನಿರ್ಮಾಣ ಕುರಿತು ಎನ್‌ಎಚ್‌ಎಐ ನಮಗೆ ತೋರಿಸಿದ್ದ ನೀಲನಕ್ಷೆಗೂ ಈಗ ನಿರ್ಮಿಸಿರುವುದಕ್ಕೂ ವ್ಯತಿರಿಕ್ತವಾಗಿವೆ. ಹೆದ್ದಾರಿ ಉದ್ಘಾಟನೆಗೆ ಮುಂಚೆ ಪರಿಶೀಲಿಸಿದ್ದ ಡಿಐಜಿಎಫ್ (ಡೆಪ್ಯೂಟಿ ಡೈರೆಕ್ಟರ್ ಜನರಲ್ ಆಫ್ ಫಾರೆಸ್ಟ್) ವನ್ಯಜೀವಿಗಳ ಓಡಾಟಕ್ಕೆ ಪೂರಕ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರೂ ಎನ್‌ಎಚ್‌ಎಐ ನಿರ್ಲಕ್ಷ್ಯಿಸಿದೆ. ನಾವು ಬರೆದ ಪತ್ರಕ್ಕೂ ಅಲ್ಲಿನ ಅಧಿಕಾರಿಗಳು ಪ್ರತಿಕ್ರಿಯಿಸಿಲ್ಲ’ ಎಂದು ರಾಮನಗರ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ. ರಾಮಕೃಷ್ಣಪ್ಪ ತಿಳಿಸಿದರು.

118 ಕಿ.ಮೀ. ಉದ್ದದ ಹೆದ್ದಾರಿಯ ಎರಡೂ ಬದಿ ನಿರ್ಮಿಸಿರುವ ತಂತಿ ಬೇಲಿ ವನ್ಯಜೀವಿಗಳು, ಜಾನುವಾರುಗಳು ಆಚೀಚೆ ಹೋಗದಂತೆ ತಡೆದಿದೆ. ಇದರಿಂದಾಗಿ ವನ್ಯಜೀವಿಗಳು ತಂತಿಬೇಲಿ ಏರಿ ಅಥವಾ ಮುರಿದು ಹೆದ್ದಾರಿ ದಾಟಲು ಯತ್ನಿಸಿ ವಾಹನಗಳಿಗೆ ಸಿಲುಕಿ ಸಾಯುತ್ತಿವೆ. ಅವುಗಳನ್ನು ತಿನ್ನಲು ಬರುವ ಹದ್ದು ಸೇರಿದಂತೆ ಇತರ ಪಕ್ಷಿಗಳು ಅಪಘಾತಕ್ಕೆ ಬಲಿಯಾಗುತ್ತಿವೆ. ವನ್ಯಜೀವಿಗಳು ರಸ್ತೆ ದಾಟಲು ಎನ್‌ಎಚ್‌ಎಐ ಮಂಡ್ಯ ಜಿಲ್ಲೆಯ ಕೆ. ಶೆಟ್ಟಿಹಳ್ಳಿ ಬಳಿ ಅರ್ಧಂಬರ್ಧ ಮೇಲ್ಸೇತುವೆ ನಿರ್ಮಿಸಿದೆ.



ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಿಸುವುದಾಗಿ ಅರಣ್ಯ ಇಲಾಖೆಗೆ ಭರವಸೆ ನೀಡಿದ್ದ ವನ್ಯಜೀವಿ ಕಾರಿಡಾರ್ ಮಾದರಿ


ಶ್ರೀರಂಗಪಟ್ಟಣ ತಾಲ್ಲೂಕಿನ ಕೆ. ಶೆಟ್ಟಿಹಳ್ಳಿ ಬಳಿ ವನ್ಯಜೀವಿಗಳ ಓಡಾಟಕ್ಕೆ ನಿರ್ಮಿಸಿರುವ ಮೇಲ್ಸೇತುವೆ ಕಾಮಗಾರಿ ಅರ್ಧಕ್ಕೆ ನಿಂತಿದೆ

ವನ್ಯಜೀವಿಗಾಗಿ ದೇಶದ ಅತಿ ಉದ್ದದ ಕೆಳ ಸೇತುವೆ

ವಾಹನಗಳ ಜೊತೆಗೆ ವನ್ಯಜೀವಿಗಳ ಸಂಚಾರಕ್ಕೂ ಅನುವಾಗುವಂತಹ ಎಲಿವೇಟೆಡ್ ವನ್ಯಜೀವಿ ಕಾರಿಡಾರ್ ಅನ್ನು ರಾಷ್ಟ್ರೀಯ ಹೆದ್ದಾರಿ–44ರಲ್ಲಿ ಎನ್‌ಎಚ್‌ಎಐ ನಿರ್ಮಿಸಿದೆ. ಮಧ್ಯಪ್ರದೇಶದ ಸಿನೋಯ್ ಮತ್ತು ಮಹಾರಾಷ್ಟ್ರದ ನಾಗಪುರ ನಡುವಣ ಪೆಂಚ್ ಮತ್ತು ಕನ್ಹಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ 37 ಕಿ.ಮೀ. ಈ ಹೆದ್ದಾರಿ ಹಾದು ಹೋಗುತ್ತದೆ. ಈ ಮಾರ್ಗದಲ್ಲಿ 4 ಕೆಳ ಸೇತುವೆ ಮತ್ತು 5 ಸಣ್ಣ ಸೇತುವೆ ನಿರ್ಮಿಸಲಾಗಿದೆ. ಈ ಪೈಕಿ 2 ಕೆಳಸೇತುವೆ 750 ಮೀಟರ್ ಉದ್ದವಿದ್ದು, ದೇಶವಷ್ಟೇ ಅಲ್ಲದೆ ವಿಶ್ವದ ಅತಿ ಉದ್ದದ ವನ್ಯಜೀವಿ ಅಂಡರ್‌ಪಾಸ್ ಎಂದು ಹೆಸರಾಗಿವೆ. ವಾಹನಗಳ ಶಬ್ದದಿಂದ ವನ್ಯಜೀವಿಗಳಿಗೆ ತೊಂದರೆಯಾಗಬಾರದೆಂದು ಹೆದ್ದಾರಿಯುದ್ದಕ್ಕೂ ಶಬ್ದ ನಿರೋಧಕ ಗೋಡೆ ಅಳವಡಿಸಲಾಗಿದೆ. ವನ್ಯಜೀವಿಗಳ ಚಲನವಲನ ಸೆರೆಗೆ ಕ್ಯಾಮೆರಾಗಳನ್ನು ಅಳವಡಿಲಾಗಿದೆ. ಹೆದ್ದಾರಿ ಪೂರ್ಣಗೊಂಡ ಒಂದು ವರ್ಷದ ಬಳಿಕ 2019ರಲ್ಲಿ ನಡೆಸಿದ್ದ ಸಮೀಕ್ಷೆಯಲ್ಲಿ ಇಲ್ಲಿನ ಕೆಳಸೇತುವೆಗಳಲ್ಲಿ ಹುಲಿ, ಚಿರತೆ, ಚುಕ್ಕಿ ಜಿಂಕೆ ಸೇರಿದಂತೆ 17 ಬಗೆಯ ಒಟ್ಟು 5,381 ಪ್ರಾಣಿಗಳು ಹಾದು ಹೋಗಿರುವುದು ಕ್ಯಾಮೆರಾದಲ್ಲಿ ದಾಖಲಾಗಿತ್ತು. 2020ರಲ್ಲಿ ಈ ಸಂಖ್ಯೆ 16,608 ತಲುಪಿತ್ತು ಎನ್ನುತ್ತವೆ ವರದಿಗಳು.

ಅಸ್ಸಾಂನ ಆನೆ ಕಾರಿಡಾರ್ ಮಾದರಿ: ಪೆಂಚ್ ವನ್ಯಜೀವಿ ಕಾರಿಡಾರ್ ಯಶಸ್ಸಿನ ಬೆನ್ನಲ್ಲೇ, ಅಸ್ಸಾಂನ ಲಮ್ಡಿಂಗ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ–54ರಲ್ಲಿ ಆನೆಗಳಿಗಾಗಿ 2 ಕೆಳಸೇತುವೆ ಮತ್ತು 2 ಸಣ್ಣ ಸೇತುವೆ ಹಾಗೂ ಉತ್ತರಾಖಂಡದ ಹೆದ್ದಾರಿ– 58 ಮತ್ತು 72ರಲ್ಲಿ 3 ಕೆಳ ಸೇತುವೆ ನಿರ್ಮಾಣವನ್ನು ಪ್ರಾಧಿಕಾರ ಕೈಗೆತ್ತಿಕೊಂಡಿದೆ. ಅಸ್ಸಾಂನ ದಿಯೊಸೊರ್‌ನಲ್ಲಿ ಕಾಂಜಿರಂಗ ರಾಷ್ಟ್ರೀಯ ಉದ್ಯಾನದ ಬುರಾಪಹಾರ್ ವಲಯದಿಂದ ಪೊರ್ಕುಪಾ ಅರಣ್ಯ ವಲಯದವರೆಗೆ ಆನೆಗಳ ಓಡಾಟಕ್ಕೆ 4.4 ಕಿ.ಮೀ. ಉದ್ದ ಮತ್ತು 2.9 ಕಿ.ಮೀ. ಅಗಲದ ಕಾರಿಡಾರ್ ನಿರ್ಮಿಸಲಾಗಿದೆ. ಅದೇ ರೀತಿ ದುಲುಂಗ್–ಸಬನ್‌ಸಿರಿ ಕಾರಿಡಾರ್, ಧಿರಿಂಗ್ ದಿಬ್ರು ಸೈಕೋವ, ಕಾಂಚನಗಿರಿ ಹಾಗೂ ಅಮುಗ್ರಿ ಕಾರಿಡಾರ್ ನಿರ್ಮಿಸಿ ಕಾಡಾನೆಗಳ ಸರಾಗ ಓಡಾಟಕ್ಕೆ ವ್ಯವಸ್ಥೆ ಮಾಡಲಾಗಿದೆ.


ಪೆಂಚ್ ರಾಷ್ಟ್ರೀಯ ಉದ್ಯಾನವನದ ಹುಲಿ ಸಂರಕ್ಷಿತ ಪ್ರದೇಶದಲ್ಲಿ ನಿರ್ಮಿಸಿರುವ ಎಲಿವೇಟೆಡ್ ಕಾರಿಡಾರ್‌ನಲ್ಲಿ ವನ್ಯಜೀವಿಗಳು ರಸ್ತೆ ದಾಟುವುದಕ್ಕಾಗಿ ನಿರ್ಮಿಸಿರುವ ಕೆಳ ಸೇತುವೆ ಚಿತ್ರ ಕೃಪೆ: ಎನ್‌ಎಚ್‌ಎಐ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 4-5-2000

- **ಭ್ರಷ್ಟಾಚಾರ ತಡೆಗೆ ‘ಪಂಚಾಯಿತಿ ಜಮಾಬಂದಿ’ ವ್ಯವಸ್ಥೆ**

ಬೆಂಗಳೂರು, ಮೇ 3– ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಭ್ರಷ್ಟಾಚಾರ ತಡೆಗಟ್ಟಲು, ಸಾರ್ವಜನಿಕರೂ ಲೆಕ್ಕ ಪತ್ರಗಳನ್ನು ಪರಿಶೀಲಿಸಲು ಅನುಕೂಲವಾಗುವಂತೆ ‘ಪಂಚಾಯಿತಿ ಜಮಾಬಂದಿ’ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವ ಎಂ.ವೈ.ಘೋರ್ಪಡೆ ವಿಧಾನಸಭೆಯಲ್ಲಿ ತಿಳಿಸಿದರು.

ಅಧಿಕಾರ ವಿಕೇಂದ್ರೀಕರಣದ ಜತೆಗೆ ಭ್ರಷ್ಟಾಚಾರದ ವಿಕೇಂದ್ರೀಕರಣವಾಗಬಾರದು ಎಂಬ ಹಿನ್ನೆಲೆಯಲ್ಲಿ ಈ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು ಎಂದು ವಿವರಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 4-5-1975

- **ಪ್ರತ್ಯೇಕ ಗಿರಿರಾಷ್ಟ್ರಕ್ಕೆ ಚೀನಾದ ಕುಮ್ಮಕ್ಕು**

ಕಲ್ಕತ್ತ, ಮೇ 3– ಗುಪ್ತ ನಾಗಗಳು, ಮಿಜೋ ಬಂಡುಕೋರರು ಮತ್ತಿತರರನ್ನು ಸಂಘಟಿಸಿ ಪ್ರತ್ಯೇಕ ಗಿರಿರಾಷ್ಟ್ರವೊಂದನ್ನು ನಿರ್ಮಿಸಲು ಚೀನಾ ಪ್ರಚೋದನೆ ನೀಡಿದ ಸಂಚು ಬಯಲಾಗಿದೆ.

ನಾಗಗಳು, ಮಿಜೋಗಳು, ಚಿತ್ತಗಾಂಗ್ ಶ್ರೇಣಿಯ ಚಕ್ಮಾಗಳು, ಬರ್ಮಾದ ಎರಡು ಬುಡಕಟ್ಟುಗಳು ಇವನೆಲ್ಲಾ ಸಂಘಟಿಸುವ ಯತ್ನ ಚೀನದ್ದು.

ಆದರೆ ಪೊಲೀಸರ ಕೈಗೆ ಸಿಕ್ಕಿಬಿದ್ದ ಗುಪ್ತ ನಾಗಾವೊಬ್ಬ ಇದನ್ನೆಲ್ಲಾ ತಿಳಿಸಿದ್ದರಿಂದ ಚೀನಾದ ಸಂಚು ವಿಫಲಗೊಂಡಿತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಮೇ 4, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಸಪ್ತಮಿ **ಗಂ. 7-19 ನಕ್ಷತ್ರ:** ಪುಷ್ಯ ಗಂ. 12-54 **ಯೋಗ:** ಗಂಡ ಗಂ. 24-42
ಕರಣ: ವಣಜೆ ಗಂ. 07-19, ಮೇಷ ಮಾಸದ 21 ನೇ ದಿನ.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-12 **ಸೂರ್ಯಾಸ್ತ:** 06-43
ಮುಸ್ಲಿಂ ದಿನಾಂಕ: 05 ಜುಲ್ಕಾಯದ್
ಅದೃಷ್ಟ ಸಂಖ್ಯೆ: 3, 4

ಮೇಷ: ಉದ್ಯೋಗ ತ್ಯಜಿಸಿ ಹಳ್ಳಿಯ ಬದುಕಿಗೆ ಹಿಂದಿರುಗಲು ಅಥವಾ ಹುಟ್ಟಿದ ಊರಿನಲ್ಲಿ ಕೃಷಿ ಮಾಡಲು ಯೋಚನೆ ಬರುವುದು. ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ದುಡುಕಬೇಡಿ. ಸ್ನೇಹಿತರಲ್ಲಿ ವಿಶ್ವಾಸ ವೃದ್ಧಿಯಾಗುವುದು.

ವೃಷಭ: ರಕ್ಷಣಾ ವ್ಯವಸ್ಥೆಯವರಿಗೆ ವೃತ್ತಿಯಲ್ಲಿ ರಾತ್ರಿ ಪಾಳಿ ತಪ್ಪಿದ ಕಾರಣದಿಂದಾಗಿ ಮನಸ್ಸಿಗೆ ಸಮಾಧಾನ ಆಗುವುದು. ಸಮಾರಂಭಗಳಿಗಾಗಿ ಹೊಸ ಬಟ್ಟೆ ತರುವಂತೆ ಮನೆಯವರಿಂದ ಹೆಚ್ಚಿನ ಒತ್ತಾಯ ಬರಲಿದೆ.

ಮಿಥುನ: ರೇಷ್ಮೆ ವ್ಯಾಪಾರಿಗಳಿಗೆ ಸಗಟು ಮಾರಾಟದಿಂದ ಅಧಿಕ ಲಾಭ ದೊರೆಯುವುದು. ದನ ಕರುಗಳ ಅಥವಾ ಮನೆಯಲ್ಲಿ ಸಾಕಿರುವ ಪ್ರಾಣಿಗಳ ಆರೋಗ್ಯ ತಪಾಸಣೆ ಮಾಡಿಸಬೇಕಾಗುವುದು. ವೃಥಾ ಅಲೆದಾಟಗಳು ತಪ್ಪಲಿವೆ.

ಕರ್ಕಾಟಕ: ಇಂದು ಯಾವುದೇ ವ್ಯಕ್ತಿಗಳಿಂದ ಪ್ರಚೋದನೆಗೆ ಒಳಗಾಗದಿರಿ. ಶರೀರದಲ್ಲಿ ಉಲ್ಲಾಸ ಹಾಗೂ ಕಾರ್ಯಪ್ರವೃತ್ತಿಯನ್ನು ಹೊಂದುತ್ತೀರಿ. ನಿಮ್ಮ ಅಭಿವೃದ್ಧಿ ಹೆಜ್ಜೆಗಳು ನಿಮ್ಮ ಸುತ್ತಮುತ್ತಲಿನ ಜನರ ಕಣ್ಣನ್ನು ಕೆಂಪಾಗಿಸುತ್ತದೆ.

ಸಿಂಹ: ಕಮಿಷನ್ ಏಜೆಂಟ್‌ಗಳಿಗೆ ಅದರಲ್ಲೂ ವಿಶೇಷವಾಗಿ ಭೂ ವ್ಯವಹಾರ ನಡೆಸುವವರಿಗೆ ಅಧಿಕ ಆದಾಯವಿದೆ. ಮನೆಯಲ್ಲಿ ಹಿತಕರ ವಾತಾವರಣ ಇರುತ್ತದೆ. ನವಗ್ರಹ ಪೀಡಾ ಪರಿಹಾರ ಸ್ತೋತ್ರ ಪಠಿಸಿದರೆ ಉತ್ತಮ.

ಕನ್ಯಾ: ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ನಿಮ್ಮಲ್ಲಿ ಬಂದಿದೆ. ಇದರಿಂದ ಸುಲಭವಾಗಿ ಕೆಲಸ ಪೂರೈಸುವಿರಿ. ನಿಮ್ಮ ಮುಂದಿನ ಮಾರ್ಗವನ್ನು ತಂದೆಯವರಲ್ಲಿ ಚರ್ಚಿಸಿ, ತಂದೆಯ ಅಭಿಪ್ರಾಯಗಳಿಗೆ ಬೆಲೆ ಕೊಡಿ.

ತುಲಾ: ನಾನಾ ವಿಧದ ಆದಾಯ ಉಂಟಾಗುವುದರಿಂದ ಆರ್ಥಿಕ ತಳಪಾಯ ಭದ್ರವಾಗುತ್ತದೆ. ವಿದ್ಯಾರ್ಥಿಗಳ ಮನಸ್ಥಿತಿ ವಿದ್ಯಾಭ್ಯಾಸದಿಂದ ದೂರಾಗುವ ಸಾಧ್ಯತೆಗಳಿದೆ. ಆಸೆ-ಆಕಾಂಕ್ಷೆಗಳು ಈ ದಿನ ದೇವತಾನುಗ್ರದಿಂದ ಈಡೇರಲಿದೆ.

ವೃಶ್ಚಿಕ: ಅಕ್ಕ-ತಂಗಿಗಾಗಿ ಹಣ, ಸಮಯವನ್ನು ಖರ್ಚು ಮಾಡಬೇಕಾದ ಸಂದರ್ಭ ಬರುವುದು. ಮಕ್ಕಳಿಗೆ ಜೀವನದ ಪಾಠ ಹೇಳುವಿರಿ. ಅನೇಕ ಅವಕಾಶಗಳು ನಿಮಗೆ ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ.

ಧನು: ಆರೋಗ್ಯಕ್ಕಾಗಿ ಆಸ್ಪತ್ರೆಯ ಅಲೆದಾಟ ಅನಿವಾರ್ಯವಾಗುವುದು. ರಾಜಕೀಯ ಕ್ಷೇತ್ರದಲ್ಲಿರುವವರಿಗೆ ಸಾಮರ್ಥ್ಯ, ಜನಬಲ ಹೆಚ್ಚಲಿದೆ. ಆಂಜನೇಯನ ಸೇವೆಯಿಂದ ಗೊಂದಲ ನಿವಾರಣೆಯಾಗುತ್ತದೆ.

ಮಕರ: ವೃತ್ತಿಯಲ್ಲಿ ಅನುಭವಿಗಳಿಂದ ಬೈಗುಳ ಕೇಳಬೇಕಾಗುವುದು. ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಲು ಅಧ್ಯಯನ ಅಗತ್ಯ. ಮಹಿಳೆಯರು ಋಣಾತ್ಮಕ ಚಿಂತನೆ ಮಾಡುವುದರಿಂದಾಗಿ ಆರೋಗ್ಯ ಹಾಳಾಗುವ ಲಕ್ಷಣವಿದೆ.

ಕುಂಭ: ಇನ್ನೊಬ್ಬರಿಗೆ ಮಾದರಿಯಾಗುವಂತೆ ಕೆಲಸಗಳಲ್ಲಿ ದಕ್ಷತೆಯನ್ನು ರೂಢಿಸಿಕೊಳ್ಳಿ. ಕೃಷಿ ಮತ್ತು ಹೈನುಗಾರಿಕೆಯಲ್ಲಿ ಹೊಸ ಪ್ರಯತ್ನ ನಡೆಸಿದರೆ ಉತ್ತಮ ಫಲ ಸಿಗುವುದು. ಮಗಳಿಂದ ಶುಭ ಸುದ್ದಿಯೊಂದನ್ನು ತಿಳಿಯುವಿರಿ.


ಮೀನ: ಮಾನಸಿಕ ಶಕ್ತಿ ಬಲಯುತವಾಗಿ ಇಂದು ನಿಮ್ಮ ಯೋಚನೆಗಳನ್ನು ಶೀಘ್ರವೇ ಕಾರ್ಯರೂಪಕ್ಕೆ ಬರಲಿವೆ. ಮಗನ ವಿವಾಹ ಸಿದ್ಧತೆಗಳು ಭರದಿಂದ ಸಾಗಲಿದೆ. ಭೂಮಿ ಖರೀದಿ ಮುಂದಕ್ಕೆ ಹಾಕುವ ಪರಿಸ್ಥಿತಿ ಬರಬಹುದು.

ಪದಬಂಧ 6031

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಎದೆ ಮತ್ತು ಹೊಟ್ಟೆಯನ್ನು ಬೇರ್ಪಡಿಸುವ ಸೂಕ್ಷ್ಮ ಪದರ (2)
3.ಸುಮ್ಮನೆ ಕಿತ್ತು ಮುಡಿದ ಹೂವು (2)
5.ಕೈಯನ್ನು ಕುಲುಕುವಿಕೆ (5)
6.ಗಡಕ್ಕನೆ ಬಂದೆರಗಿದ ಗಂಡು ಕೋತಿ (3)
7.ಜಗಲಿಯಲ್ಲಿ ನಿಂತು ಪರಸ್ಪರ ಬೈದಾಡುವುದು (3)
8.ತಳ್ಳಾಡಿದರೂ ಮಾಡಿದುದು ಮಧ್ಯಸ್ತಿಕೆ! (5)
9.ದುಃಖ ಹೀಗೆ ಬಂದಿದೆ (3)
10.ಪಿತನ ಹತ್ತಿರ ಬಂದಿರುವ ಕ್ಷೌರಿಕ (3)
13.ನೀರಿನಿಂದಾದ ಅನಿಲ (5)
14.ಪುರಿಯಲ್ಲಿ ಅಡಗಿರುವ ಶತ್ರು ಕಾಣಿಸಿದನೇ? (2)
15.ನಿಧಾನಿಸಿ! ದಾನಮಾಡುವವನು ಇಲ್ಲಿದ್ದಾನೆ (2)

ಮೇಲಿಂದ ಕೆಳಕ್ಕೆ
1.ಕಾಡುಪ್ರಾಣಿ ಇಲ್ಲಿದೆ (4)
2.ಕೆಲಸಕ್ಕೆ ಬಳಸಿದ್ದು ಒಂದು ಬಗೆಯ ಆಯುಧ (3)
4.ಬಟ್ಟೆಗಳನ್ನು ಮಡಿ ಮಾಡುವವನು (4)
5.ಅಶ್ವದ ಮೊಗವಿದು (5)
7.ಮಂದಿಗೆಲ್ಲ ಒಡೆಯನೀತ (5)
9.ಕೆಟ್ಟ ನಡತೆಯವನು (4)
11.ದಾರ್ಶನಿಕ ಇಲ್ಲಿದ್ದಾನೆ (4)
12.ದನಕರುಗಳ ಮೂತ್ರ (3)



6030ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉತ್ತೇಜನ 3.ಮದರಂಗಿ 5.ಕಾರಣೆ 6.ಖಡ್ಗಮೃಗ 7.ನದಿಮುಖಜಭೂಮಿ 10.ತಪರಾಕು 11.ಕೂಜನ 14.ನತದೃಷ್ಟ 15.ವಿಕಸನ

ಮೇಲಿಂದ ಕೆಳಕ್ಕೆ:
1.ಉಕ್ತಿ 2.ಜಠರ 4.ಗಿಡುಗ 5.ಕಾನನ 6.ಖನಿಜ 8.ಮುಸುಕು 9.ಮಿಥುನ 10.ತಲ್ಲೀನ 12.ಜಟಕ 13.ಮೌನ

ಸುಡೊಕು 6416

1		9		2			8	
	6				9		5	2
	8			4	5			
2							6	
		4		3				1
5					2			
		5		9			7	6
7			2		6	8		
9	4			7			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6415 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೃಷ್ಣಾ ಅಂತಿಮ ತೀರ್ಪಿನ ಕುರಿತು ಸರ್ವ ಪಕ್ಷ ಸಭೆ: ಸಿ.ಎಂ

ಗೆಜೆಟ್ ಅಧಿಸೂಚನೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂಕೋರ್ಟ್‌ನ ಮಧ್ಯಂತರ ಆದೇಶ, ಕೇಂದ್ರದ ಅಧಿಸೂಚನೆ ನಂತರ ಆಲಮಟ್ಟಿ ಜಲಾಶಯದ ಎತ್ತರವನ್ನು 524.256 ಮೀಟರ್‌ಗೆ ಹೆಚ್ಚಿಸುವ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೇಂದ್ರ ಜಲಶಕ್ತಿ ಸಚಿವರು ಮೇ 7ರಂದು ಕರೆದಿರುವ ಕೃಷ್ಣಾ ಕಣಿವೆ ವ್ಯಾಪ್ತಿಯ ರಾಜ್ಯಗಳ ಜಲಸಂಪನ್ಮೂಲ ಸಚಿವರ ಸಭೆಯ ಹಿನ್ನೆಲೆಯಲ್ಲಿ ಜಲ ಸಂಪನ್ಮೂಲ ಸಚಿವರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್, ಕಾನೂನು ತಜ್ಞರು ಹಾಗೂ ಅಧಿಕಾರಿಗಳ ಜತೆ ಸಭೆ ನಡೆಸಿ ಮುಖ್ಯಮಂತ್ರಿ ಮಾತನಾಡಿದರು.

ಎರಡನೇ ನ್ಯಾಯಮಂಡಳಿ ಆದೇಶದಲ್ಲಿ 173 ಟಿಎಂಸಿ ಅಡಿ ನೀರು ಬಳಸಿಕೊಳ್ಳಲು ಅನುಮತಿ ನೀಡಲಾಗಿತ್ತು. ಕೃಷ್ಣ ಮೇಲ್ದಂಡೆ ಯೋಜನೆ ಮೂರನೇ ಹಂತಕ್ಕೆ 130 ಟಿಎಂಸಿ ಅಡಿ ನಿಗದಿ ಮಾಡಿದೆ. ಅಣೆಕಟ್ಟೆಯ ಎತ್ತರವನ್ನು ಈಗಿರುವ 519 ಮೀಟರ್‌ಗಳಿಂದ 524.256 ಮೀಟರ್‌ಗೆ ಏರಿಸಿದರೆ ಕರ್ನಾಟಕಕ್ಕೆ ಹಂಚಿಕೆ ಮಾಡಿರುವ ನೀರನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ರಾಜ್ಯದ ಪಾಲಿನ ನೀರು ಬಳಕೆಗೆ ಕೇಂದ್ರ ಸರ್ಕಾರ ತಕ್ಷಣ ಗೆಜೆಟ್ ಅಧಿಸೂಚನೆ ಹೊರಡಿಸಬೇಕು ಎಂದು ಒತ್ತಾಯಿಸಿದರು.

ಕೃಷ್ಣಾ ಜಲವಿವಾದ ನ್ಯಾಯಮಂಡಳಿ 2010ರಲ್ಲಿ ತೀರ್ಪು ನೀಡಿತ್ತು. ಅಂತಿಮ ತೀರ್ಪು ನೀಡಿ 15 ವರ್ಷಗಳಾಗಿವೆ. ಆದರೆ, ಇಲ್ಲಿಯವರೆಗೂ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿಲ್ಲ. ಈ ಕುರಿತು ಕೇಂದ್ರ ನೀರಾವರಿ ಸಚಿವರನ್ನು ಭೇಟಿ ಮಾಡಿ, ಒತ್ತಾಯಿಸಿದ ನಂತರ ಈಗ ಸಭೆ ಕರೆಯಲಾಗಿದೆ ಎಂದು ಹೇಳಿದರು.

ತೆಲಂಗಾಣ ಮತ್ತು ಆಂಧ್ರ ಪ್ರದೇಶ ಕೂಡ ಅರ್ಜಿ ಹಾಕಿಕೊಂಡಿದೆ. ಅವರು ತಮ್ಮ ಪಾಲಿಗೆ ಹಂಚಿಕೆಯಾಗಿರುವ ನೀರು ಬಳಸಿಕೊಳ್ಳಲು ಕರ್ನಾಟಕದ ಅಭ್ಯಂತರ ಇಲ್ಲ ಎಂದರು.

ಕಾವೇರಿ ಜಲವಿವಾದ ನ್ಯಾಯ ಮಂಡಳಿ ತೀರ್ಪಿಗೆ ಸಂಬಂಧಿಸಿದಂತೆ ಮೇಲ್ಮನವಿಗಳು ಬಾಕಿ ಇರುವಾಗಲೂ ತೀರ್ಪು ಪ್ರಕಟಿಸುವಂತೆ ಕಾವೇರಿ ನ್ಯಾಯಮಂಡಳಿಗೆ ಸುಪ್ರೀಂಕೋರ್ಟ್ ನಿರ್ದೇಶಿಸಿರುತ್ತದೆ.

ಈ ಕುರಿತು ಹಲವು ಬಾರಿ ಮನವಿ ಸಲ್ಲಿಸಿದ್ದರೂ, ಇನ್ನೂ ಅಧಿಸೂಚನೆ ಹೊರಡಿಸಿಲ್ಲ. ರಾಜ್ಯದ ಪಾಲಿನ ನೀರು ಪಡೆದುಕೊಳ್ಳಲು ಕಾನೂನು ಕ್ರಮಗಳು ಸೇರಿದಂತೆ ಎಲ್ಲಾ ಪ್ರಯತ್ನ ನಡೆಸಲಾಗುವುದು. ಕೃಷ್ಣಾ ಜಲವಿವಾದ ನ್ಯಾಯಮಂಡಳಿ ಅಂತಿಮ ತೀರ್ಪಿನ ಅನುಷ್ಠಾನ ಕುರಿತು ಸರ್ವಪಕ್ಷ ಸಭೆ ಕರೆಯಲಾಗುವುದು ಎಂದರು.

ಸಚಿವರಾದ ಎಚ್‌.ಕೆ. ಪಾಟೀಲ, ಎಂ.ಬಿ. ಪಾಟೀಲ, ಆರ್‌.ಬಿ. ತಿಮ್ಮಾಪುರ, ಶರಣಬಸಪ್ಪ ದರ್ಶನಾಪುರ, ಎಚ್‌.ಸಿ. ಮಹದೇವಪ್ಪ, ಶಿವಾನಂದ ಪಾಟೀಲ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ವಕೀಲ ಮೋಹನ್ ಕಾತರಕಿ ಉಪಸ್ಥಿತರಿದ್ದರು.

> ಭೂಸ್ವಾಧೀನ ಪ್ರಕ್ರಿಯೆ ಮುಂದುವರಿಸಲು ಬೆಳಗಾವಿ ಅಧಿವೇಶನದಲ್ಲೇ ತೀರ್ಮಾನಿಸಿದ್ದೇವೆ. 15 ವರ್ಷಗಳಲ್ಲಿ ಯೋಜನಾ ವೆಚ್ಚ ಏರಿಕೆಯಾಗುತ್ತಿದೆ
>
> **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ

> ಕಳೆದ ಐದು ವರ್ಷವೂ ಪ್ರವಾಹದಿಂದ ಕೃಷ್ಣಾ ನದಿ ಪಾತ್ರದ ಜನರು ಸಂಕಷ್ಟ ಅನುಭವಿಸಿದ್ದಾರೆ. ಹೆಚ್ಚುವರಿ ನೀರನ್ನು ಕಾಲುವೆಗೆ ಹರಿಸಿಕೊಳ್ಳಬಹುದು
>
> **ಎಚ್‌.ಕೆ. ಪಾಟೀಲ,** ಕಾನೂನು ಸಚಿವ

ನೀಟ್ ಅಕ್ರಮ: 14 ವಿದ್ಯಾರ್ಥಿಗಳ ಪ್ರವೇಶ ರದ್ದು



ನವದೆಹಲಿ (ಪಿಟಿಐ): ನೀಟ್‌–ಯುಜಿ 2024ರ ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿರುವ 26 ಮಂದಿ ಎಂಬಿಬಿಎಸ್ ವಿದ್ಯಾರ್ಥಿಗಳನ್ನು ತಕ್ಷಣವೇ ಅಮಾನತಿನಲ್ಲಿ ಇರಿಸಲು ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ಸೂಚನೆ ನೀಡಿದೆ.

ಪ್ರವೇಶ ಪರೀಕ್ಷೆಯ ಸಂದರ್ಭದಲ್ಲಿ ಅಕ್ರಮದಲ್ಲಿ ತೊಡಗಿದ್ದ 14 ವಿದ್ಯಾರ್ಥಿಗಳ 2024–25ನೇ ಸಾಲಿನ ಪ್ರವೇಶವನ್ನು ರದ್ದುಪಡಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ನೀಟ್ ಪರೀಕ್ಷೆ ಬರೆಯಲಾಗುತ್ತದೆ. ನೀಟ್‌–ಯುಜಿ 2024ರ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಬಗ್ಗೆ ತನಿಖೆ ನಡೆಯುತ್ತಿದೆ. ಇದರ ಭಾಗವಾಗಿ, ಅಕ್ರಮ ಆಗಿರುವ ನಿದರ್ಶನ ಗಳನ್ನು ಗುರುತಿಸಿರುವ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ 42 ವಿದ್ಯಾರ್ಥಿಗಳನ್ನು ಮೂರು ವರ್ಷಗಳಿಗೆ (2024, 2025 ಮತ್ತು 2026) ನೀಟ್‌–ಯುಜಿ ಪರೀಕ್ಷೆಯಿಂದ ಡಿಬಾರ್ ಮಾಡಿದೆ. ಒಟ್ಟು ಒಂಬತ್ತು ವಿದ್ಯಾರ್ಥಿಗಳನ್ನು 2025 ಮತ್ತು 2026ನೆಯ ಸಾಲಿನ ಪರೀಕ್ಷೆಗಳಿಂದ ಡಿಬಾರ್ ಮಾಡಿದೆ. ಸಿಬಿಐ ತನಿಖೆ ಆಧರಿಸಿ ಈ ಕ್ರಮ ಕೈಗೊಳ್ಳಲಾಗಿದೆ.

‘ಅಕ್ರಮಗಳ ತೀವ್ರತೆ ಹಾಗೂ ವೈದ್ಯಕೀಯ ಶಿಕ್ಷಣ ವ್ಯವಸ್ಥೆಯ ವಿಶ್ವಾಸಾರ್ಹತೆ ಹಾಳುಮಾಡುವ ಸಾಧ್ಯತೆ ಪರಿಗಣಿಸಿ ರಾಷ್ಟ್ರೀಯ ವೈದ್ಯಕೀಯ ಆಯೋಗವು ಸಂಬಂಧಪಟ್ಟ ವೈದ್ಯಕೀಯ ಕಾಲೇಜುಗಳಿಗೆ ಈ ನಿರ್ದೇಶನ ನೀಡಿದೆ’ ಎಂದು ಮೂಲಗಳು ಹೇಳಿವೆ.

ಬರಗೂರು ರಾಮಚಂದ್ರಪ್ಪಗೆ ‘ಸಾಹಿತ್ಯ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಬಸವರಾಜ ಕಟ್ಟೀಮನಿ ಪ್ರತಿಷ್ಠಾನವು ಜೀವಮಾನ ಸಾಧನೆಗಾಗಿ 2024ನೇ ಸಾಲಿನ ‘ಕಾದಂಬರಿ ಸಾಹಿತ್ಯ ಪ್ರಶಸ್ತಿ’ಗೆ ಚಿಂತಕ ಪ್ರೊ. ಬರಗೂರು ರಾಮಚಂದ್ರಪ್ಪ ಅವರನ್ನು ಆಯ್ಕೆ ಮಾಡಿದೆ.



ಬರಗೂರು ರಾಮಚಂದ್ರಪ್ಪ

‘ಪ್ರಶಸ್ತಿಯು ₹50 ಸಾವಿರ ನಗದು, ಸ್ಮರಣಿಕೆ ಹೊಂದಿದೆ. ಮೇ 25ರಂದು ಸಮಾರಂಭ ನಡೆಯಲಿದೆ’ ಎಂದು ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

‘ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಬರಗೂರಿನ ರಾಮಚಂದ್ರಪ್ಪ ಅವರು, ಬಸವರಾಜ ಕಟ್ಟೀಮನಿ ಅವರ ತತ್ವ–ಆದರ್ಶಗಳಂತೆ ಬರೆಯುತ್ತ, ಬದುಕು ನಡೆಸಿದ್ದಾರೆ. 13 ಕಾದಂಬರಿ ರಚಿಸಿದ್ದು, ಈ ಕ್ಷೇತ್ರವನ್ನು ಸಮೃದ್ಧಗೊಳಿಸಿದ್ದಾರೆ’ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಗೋವಾ: ಕಾಲ್ತುಳಿತ ಆರು ಮಂದಿ ಸಾವು

ಪಣಜಿ (ಪಿಟಿಐ): ಉತ್ತರ ಗೋವಾ ಜಿಲ್ಲೆಯ ಹಳ್ಳಿಯೊಂದರಲ್ಲಿ ದೇವಸ್ಥಾನದ ಉತ್ಸವದ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ ಇಬ್ಬರು ಮಹಿಳೆಯರು ಸೇರಿದಂತೆ ಆರು ಜನರು ಸಾವಿಗೀಡಾಗಿದ್ದಾರೆ. 70 ಜನರು ಗಾಯಗೊಂಡಿದ್ದಾರೆ ಎಂದು ಶನಿವಾರ ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯ ಸರ್ಕಾರವು ಘಟನೆಯ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶಿಸಿದೆ. ಜಿಲ್ಲಾಧಿಕಾರಿ ಹಾಗೂ ಎಸ್‌ಪಿ ಸೇರಿದಂತೆ ಐವರು ಅಧಿಕಾರಿಗಳನ್ನು ವರ್ಗಾವಣೆ ಮಾಡಿದೆ.

ಪಣಜಿಯಿಂದ ಸುಮಾರು 40 ಕಿ.ಮೀ ದೂರದಲ್ಲಿರುವ ಶಿರಗಾಂವ್ ಗ್ರಾಮದಲ್ಲಿ ಶ್ರೀಲೈರಾಯಿ ದೇವಿ ದೇವಸ್ಥಾನದ ವಾರ್ಷಿಕ ಉತ್ಸವದಲ್ಲಿ ಗೋವಾ, ಮಹಾರಾಷ್ಟ್ರ ಮತ್ತು ಕರ್ನಾಟಕ ಸೇರಿದಂತೆ ವಿವಿಧ ಭಾಗಗಳಿಂದ ಸುಮಾರು 30 ರಿಂದ 40 ಸಾವಿರ ಜನರು ಭಾಗವಹಿಸಿದ್ದರು. ಕಿರಿದಾದ ದಾರಿಗಳಲ್ಲಿ ಸಾವಿರಾರು ಜನರು ಸೇರಿದ್ದರಿಂದ ಶನಿವಾರ ಮುಂಜಾನೆ 3 ಗಂಟೆಗೆ ಕಾಲ್ತುಳಿತ ಸಂಭವಿಸಿದೆ.

ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ಕೇರಳದ ಆಸ್ಪತ್ರೆಯಲ್ಲಿ ಐವರ ಸಾವು

ಕೋಯಿಕ್ಕೋಡ್: ಕೇರಳದ ಕೋಯಿಕ್ಕೋಡ್‌ನಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಐವರು ರೋಗಿಗಳು ಮೃತಪಟ್ಟಿದ್ದು, ಯುಪಿಎಸ್ ಕೊಠಡಿಯಿಂದ ಬಂದ ಹೊಗೆಯೇ ದುರ್ಘಟನೆಗೆ ಕಾರಣ ಎಂದು ಶಂಕಿಸಲಾಗಿದೆ.

‘ತಜ್ಞ ವೈದ್ಯರ ತಂಡ ತನಿಖೆ ನಡೆಸುತ್ತಿದೆ. ಹೊಗೆಗೆ ಕಾರಣವಾದ ಅಂಶಗಳ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಅಥವಾ ಯುಪಿಎಸ್ ಕೊಠಡಿಯಲ್ಲಿದ್ದ ಹಾನಿಗೊಂಡಿರುವ ಬ್ಯಾಟರಿಗಳು ಘಟನೆಗೆ ಕಾರಣ ಇರಬಹುದು ಎಂಬುದಾಗಿ ಶಂಕಿಸಲಾಗಿದೆ’ ಎಂದು ಕೇರಳದ ಆರೋಗ್ಯ ಸಚಿವೆ ವೀಣಾ ಜಾರ್ಜ್ ಹೇಳಿದ್ದಾರೆ.

ಶುಕ್ರವಾರ ರಾತ್ರಿ 8 ಗಂಟೆಗೆ ಯುಪಿಎಸ್ ಕೊಠಡಿಯಿಂದ ಹೊಗೆ ಬರಲಾರಂಭಿಸಿತು. ಬಳಿಕ 151 ರೋಗಿಗಳಿದ್ದ ಕೊಠಡಿಯಲ್ಲಿ ಹೊಗೆ ಆವರಿಸಿತು. ಆಸ್ಪತ್ರೆ ಸಿಬ್ಬಂದಿ ಮತ್ತು ಸ್ಥಳೀಯರು ಸೇರಿ ರೋಗಿಗಳನ್ನು ಸ್ಥಳಾಂತರಿಸಿದರು. ಈ ವೇಳೆ ಐವರು ರೋಗಿಗಳು ಮೃತಪಟ್ಟಿದ್ದಾರೆ. ಹೊಗೆಯಿಂದಾಗಿ ರೋಗಿಗಳು ಮೃತಪಟ್ಟಿದ್ದಾರೆ ಎಂದು ಅವರ ಕುಟುಂಬಸ್ಥರು ಆರೋಪಿಸಿದ್ದಾರೆ. ಆಸ್ಪತ್ರೆ ಅಧಿಕಾರಿಗಳು ಇದನ್ನು ನಿರಾಕರಿಸಿದ್ದಾರೆ. ‘ದಾಖಲೆಗಳ ಪ್ರಕಾರ ಯುಪಿಎಸ್ ಮತ್ತು ಬ್ಯಾಟರಿ ನಿರ್ವಹಣೆ ಸಮರ್ಪಕವಾಗಿತ್ತು’ ಎಂದು ಸಚಿವೆ ವೀಣಾ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮುನೀಶ್ ಮೌದ್ಗಿಲ್‌ಗೆ ಹೆಚ್ಚುವರಿ ಪ್ರಭಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರಿಗೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ (ವಿಪತ್ತು ನಿರ್ವಹಣೆ, ಭೂಮಿ) ಹುದ್ದೆಯ ಹೆಚ್ಚುವರಿ ಪ್ರಭಾರ ಹೊಣೆಗಾರಿಕೆ ನೀಡಲಾಗಿದೆ.

ಈ ಹುದ್ದೆಯ ಹೆಚ್ಚುವರಿ ಪ್ರಭಾರ ಹೊಣೆಯಿಂದ ಐಎಎಸ್ ಅಧಿಕಾರಿ ರಶ್ಮಿ ವಿ. ಮಹೇಶ್ ಅವರನ್ನು ಬಿಡುಗಡೆ ಮಾಡಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

'ದಲಿತ ಗುರುಕುಲಕ್ಕೆ ಜಾಗ ನೀಡಿ'

ಪ್ರಗತಿಪರ ಚಿಂತನೆ ಬೋಧಿಸುವ ಗುರಿ ● ಹಿಂದುಳಿದ, ದಲಿತ ಮಠಾಧೀಶ್ವರರ ಒಕ್ಕೂಟದ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಮತ್ತು ದಲಿತ ಸಮುದಾಯಗಳ ಅರ್ಚಕರಿಗೆ ಪ್ರಗತಿಪರ ಚಿಂತನೆ ಪರಿಚಯಿಸಲು ಅನುಕೂಲವಾಗುವಂತೆ ಗುರುಕುಲ ಆರಂಭಿಸಲು ಚಿತ್ರದುರ್ಗದಲ್ಲಿ ಜಾಗ ಗುರುತಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಹಿಂದುಳಿದ ಮತ್ತು ದಲಿತ ಮಠಾಧೀಶ್ವರರ ಒಕ್ಕೂಟದ ನಿಯೋಗವು ಶನಿವಾರ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, 'ತಳ ಸಮುದಾಯಗಳ ದೇವಸ್ಥಾನಗಳ ಅರ್ಚಕರಿಗೆ ಬುದ್ಧ, ಬಸವ, ಅಂಬೇಡ್ಕರ್, ಕನಕ, ವಾಲ್ಮೀಕಿ, ನಾರಾಯಣಗುರು ಮತ್ತು ಜ್ಯೋತಿ ಬಾ ಫುಲೆ ಅವರ ವಿಚಾರಗಳನ್ನು ಪರಿಚಯಿಸಬೇಕಿದೆ. ಇದಕ್ಕಾಗಿ ಗುರುಕುಲ ಒಂದನ್ನು ಸ್ಥಾಪಿಸಬೇಕಿದ್ದು, ಚಿತ್ರದುರ್ಗದಲ್ಲಿ ಅಗತ್ಯ ಜಾಗ ಒದಗಿಸಿ' ಎಂದು ಮನವಿ ಮಾಡಿದರು.

'ಈ ಗುರುಕುಲದಲ್ಲಿ ಹಿಂದುಳಿದ ಮತ್ತು ದಲಿತ ಸಮುದಾಯಗಳ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ, ತರಬೇತಿ ನೀಡುವ ಉದ್ದೇಶವಿದೆ. ಒಟ್ಟು ₹25 ಕೋಟಿ ವೆಚ್ಚದಲ್ಲಿ ಗುರುಕುಲ ನಿರ್ಮಾಣಕ್ಕೆ ಯೋಜಿಸಿದ್ದೇವೆ. ಅಗತ್ಯ ಹಣಕಾಸು ನೆರವನ್ನೂ ಒದಗಿಸಬೇಕು. ತಳ ಸಮುದಾಯದ ಮಠಗಳಿಗೆ ತಲಾ ₹10 ಕೋಟಿ ಅನುದಾನ ಒದಗಿಸಬೇಕು' ಎಂದು ಕೋರಿದರು.



ಹಿಂದುಳಿದ ದಲಿತ ಮಠಾಧೀಶ್ವರರ ಒಕ್ಕೂಟದ ನಿಯೋಗದ ಜತೆಗೆ ಸಿದ್ದರಾಮಯ್ಯ ಚರ್ಚಿಸಿದರು

ಮುಖ್ಯಾಂಶಗಳು
- ಚಿತ್ರದುರ್ಗದಲ್ಲಿ ಜಾಗ ಗುರುತಿಸಿ
- ₹ 25 ಕೋಟಿ ವೆಚ್ಚದಲ್ಲಿ ಯೋಜನೆ
- ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ ಸಿ.ಎಂ ಭರವಸೆ

ನಿಯೋಗದ ಜತೆಗೆ ಸಭೆ ನಡೆಸಿದ ಸಿದ್ದರಾಮಯ್ಯ ಅವರು, 'ಬೇಡಿಕೆಗಳನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ' ಎಂದರು.

ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಸಿದ್ದರಾಮೇಶ್ವರ ಮಹಾಸಂಸ್ಥಾನ ಮಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಶಿವಶರಣ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಕುಂಚಿಟಿಗ ಮಹಾಸಂಸ್ಥಾನ ಮಠದ ಶಾಂತವೀರ ಸ್ವಾಮೀಜಿ, ಮಹರ್ಷಿ ವಾಲ್ಮೀಕಿ ಗುರುಪೀಠದ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನಿಯೋಗದಲ್ಲಿ ಇದ್ದರು.

ನಿಯೋಗದ ಭೇಟಿಯ ನಂತರ ಭಗೀರಥ ಉಪ್ಪಾರ ಗುರುಪೀಠದ ಪುರುಷೋತ್ತಮಾನಂದ ಪುರಿ ಸ್ವಾಮೀಜಿ ಅವರು ಸಮುದಾಯದ ಮುಖಂಡರ ಜತೆ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದರು. 'ರಾಜಕೀಯದಲ್ಲಿ ಸಮುದಾಯದ ಪ್ರಾತಿನಿಧ್ಯವೇ ಇಲ್ಲ. ಈ ಕೊರತೆಯನ್ನು ನಿವಾರಿಸಬೇಕು' ಎಂದು ಕೋರಿದರು. 'ಪರಿಶೀಲನೆ ನಡೆಸಿ, ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಮುಖ್ಯಮಂತ್ರಿ ತಿಳಿಸಿದರು.

'ಸಾಮಾಜಿಕ ಸಮೀಕ್ಷೆ: ಕೇಂದ್ರಕ್ಕೆ ಆಗ್ರಹ'

ಬೆಂಗಳೂರು: 'ಕೇಂದ್ರ ಸರ್ಕಾರವು ಜಾತಿಗಣತಿಯ ಜತೆಗೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಯ ಸಮೀಕ್ಷೆಯನ್ನೂ ನಡೆಸಬೇಕು' ಎಂದು ವಕೀಲ ಪ್ರೊ.ರವಿವರ್ಮಕುಮಾರ್ ಅವರು ಒತ್ತಾಯಿಸಿದರು.

ಕರ್ನಾಟಕ ಶೋಷಿತ ಸಮುದಾಯಗಳ ಮಹಾಒಕ್ಕೂಟ ಮತ್ತು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟವು ಶನಿವಾರ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಾಮಾಜಿಕ ಸಮೀಕ್ಷೆಗೆ ಕರ್ನಾಟಕವು ಈಗಾಗಲೇ ಮುನ್ನುಡಿ ಬರೆದಿದೆ. ಅದನ್ನೇ ಮಾದರಿಯಾಗಿ ಇರಿಸಿಕೊಂಡು ಕೇಂದ್ರವೂ ಸಾಮಾಜಿಕ ಸಮೀಕ್ಷೆ ನಡೆಸಬೇಕು' ಎಂದರು.

'ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ನೀಡಲಾಗುತ್ತಿರುವ ಮೀಸಲಾತಿಗೆ ಸುಪ್ರೀಂ ಕೋರ್ಟ್ ಶೇ 50ರ ಮಿತಿ ಹೇರಿದೆ. ಈ ಮಿತಿಯನ್ನು ಹೆಚ್ಚಿಸಿ ಎಂದು ಕೋರಿದಾಗಲೆಲ್ಲಾ ಸುಪ್ರೀಂ ಕೋರ್ಟ್, ವೈಜ್ಞಾನಿಕವಾಗಿ ಸಂಗ್ರಹಿಸಿದ ದತ್ತಾಂಶ ನೀಡಿ ಎಂದು ಕೇಳುತ್ತದೆ. ಜಾತಿಗಣತಿ ಜತೆಗೆ ಸಾಮಾಜಿಕ ಸಮೀಕ್ಷೆಯನ್ನೂ ನಡೆಸಿದರೆ, ಈ ಸಮಸ್ಯೆ ಬಗೆಹರಿಯಲಿದೆ' ಎಂದರು.

'ಜಾತಿಗಣತಿ ಮತ್ತು ಸಾಮಾಜಿಕ ಸಮೀಕ್ಷೆಯ ದತ್ತಾಂಶಗಳನ್ನು ಇರಿಸಿಕೊಂಡು ಮೀಸಲಾತಿ ಇರುವ ಶೇ 50ರ ಮಿತಿಯನ್ನು ಹೆಚ್ಚಿಸುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಬೇಕು. ಕಾಲಮಿತಿಯಲ್ಲಿ ಗಣತಿ ನಡೆಸಿ, ಮುಂದಿನ ಕ್ರಮ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದರು.

ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ, 'ರಾಜ್ಯದಲ್ಲಿ ಕಾಂತರಾಜು ಆಯೋಗ ಮತ್ತು ಜಯಪ್ರಕಾಶ್ ಹೆಗ್ಡೆ ಆಯೋಗದ ವರದಿಗಳನ್ನು ರಾಜ್ಯ ಸರ್ಕಾರ ಸ್ವೀಕರಿಸಿದೆ. ಅದರಲ್ಲಿ ನ್ಯೂನತೆಗಳಿದ್ದರೆ ಸರಿಪಡಿಸಬೇಕು. ವರದಿಯ ಶಿಫಾರಸುಗಳನ್ನು ಶೀಘ್ರವೇ ಜಾರಿಗೆ ತರಬೇಕು' ಎಂದು ಒತ್ತಾಯಿಸಿದರು.

'ದೇಶದಾದ್ಯಂತ ಜಾತಿಗಣತಿ ನಡೆಸಬೇಕು ಎಂದು ಕಾಂಗ್ರೆಸ್‌ನ ರಾಹುಲ್ ಗಾಂಧಿ ಅವರು ಒತ್ತಾಯಿಸುತ್ತಲೇ ಇದ್ದರು. ಕೇಂದ್ರ ಸರ್ಕಾರ ಈಗ ಆ ಕೆಲಸಕ್ಕೆ ಮುಂದಾಗಿದೆ. ಜಾತಿಗಣತಿಯನ್ನು ವಿರೋಧಿಸುತ್ತಿದ್ದ ಬಿಜೆಪಿ, ಈಗ ಅದರ ಮಹತ್ವವನ್ನು ಅರ್ಥಮಾಡಿಕೊಂಡಿದೆ ಎಂದು ಭಾವಿಸಿದ್ದೇವೆ' ಎಂದರು.

ಒಕ್ಕೂಟದ ಪ್ರಮುಖರಾದ ಮಾವಳ್ಳಿ ಶಂಕರ್, ಬಿ.ಟಿ. ಲಲಿತಾನಾಯಕ್, ಅನಂತ ನಾಯ್ಕ್ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಬಾಂಬ್ ಕಟ್ಟಿಕೊಂಡು ಯುದ್ಧಕ್ಕೆ ಹೋಗಲು ಸಿದ್ಧ: ಜಮೀರ್



ಹೊಸಪೇಟೆ (ವಿಜಯನಗರ): 'ದೇಶಕ್ಕಾಗಿ ಯಾವುದೇ ತ್ಯಾಗಕ್ಕೆ ನಾನು ಸಿದ್ಧ, ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸಮ್ಮತಿಸಿದರೆ ಮೈಗೆ ಬಾಂಬ್ ಕಟ್ಟಿಕೊಂಡು ಯುದ್ಧಕ್ಕೆ ಹೋಗಲೂ ಸಿದ್ಧ' ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

'ನಾನು ಜೋಕ್ ಅಥವಾ ತಮಾಷೆಗೆ ಹೇಳುತ್ತಿಲ್ಲ, ಮಂತ್ರಿಯಾಗಿ ನನ್ನನ್ನು ಯುದ್ಧಕ್ಕೆ ಕಳಿಸಿದರೆ, ಅಲ್ಲಾ ಮತ್ತು ದೇವರ ಆಣೆಗೂ ಆತ್ಮಾಹುತಿ ಬಾಂಬರ್ ಆಗಿ ಪಾಕಿಸ್ತಾನಕ್ಕೆ ಹೋಗುವೆ' ಎಂದೂ ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಮಾತು ಪಾಲಿಸುವುದಿಲ್ಲ ಎಂಬ ಟೀಕೆ ಕುರಿತು ಗಮನಸೆಳೆದಾಗ, 'ಬಿ.ಎಸ್.ಯಡಿಯೂರಪ್ಪ ಸ್ವಂತ ಬಲದಿಂದ ಸಿ.ಎಂ ಆದರೆ ಅವರ ಮನೆಯಲ್ಲಿ ವಾಚ್‌ಮನ್ ಆಗುವೆ ಎಂದು ಹಿಂದೆ ಹೇಳಿದ್ದು ನಿಜ. ಆಗ ಅವರು ಸ್ವಯಂಬಲದಿಂದ ಸಿ.ಎಂ ಆಗಲಿಲ್ಲ' ಎಂದರು.

ಕಳಸ: ಜೈನ ಕನ್ನಡ ಸಾಹಿತ್ಯ ಸಮ್ಮೇಳನ 18 ರಂದು

ಕಳಸ (ಚಿಕ್ಕಮಗಳೂರು): ಇಲ್ಲಿನ ಚಂದ್ರನಾಥ ಬಸದಿ ಪಂಚಕಲ್ಯಾಣ ಇದೇ 18ರಿಂದ 22ರವರೆಗೆ ನಡೆಯಲಿದ್ದು, ಮೊದಲ ದಿನ ಮೇ 18ರಂದು ರಾಜ್ಯ ಮಟ್ಟದ ಮೊದಲ ಜೈನ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಚಂದ್ರನಾಥ ಬಸದಿ ಜೀರ್ಣೋದ್ಧಾರ ಸಮಿತಿ ಆಶ್ರಯದಲ್ಲಿ ಸಮ್ಮೇಳನ ನಡೆಯಲಿದೆ. ಸಮ್ಮೇಳನದ ಅಧ್ಯಕ್ಷರಾಗಿ ಹೊರನಾಡು ದೊಡ್ಡಮನೆ ಮನೆತನದ ಡಿ.ಶ್ರೀವರ್ಮ ಹೆಗ್ಗಡೆ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸೂರಿ ಶ್ರೀನಿವಾಸ್ ತಿಳಿಸಿದ್ದಾರೆ.

'ತಮ್ಮ ಮಾತಿಗೆ ಮೋದಿ ಬದ್ಧವಾಗಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನರೇಂದ್ರ ಮೋದಿ ಅವರು ಗುಜರಾತ್‌ನ ಮುಖ್ಯಮಂತ್ರಿ ಆಗಿದ್ದಾಗ, ರಾಜ್ಯದಿಂದ ಸಂಗ್ರಹಿಸುವ ತೆರಿಗೆಯಲ್ಲಿ ಶೇ 50ರಷ್ಟನ್ನು ರಾಜ್ಯಕ್ಕೇ ಮರಳಿಸಬೇಕು ಎಂದು ಆಗ್ರಹಿಸುತ್ತಿದ್ದರು. ದೇಶದ ಪ್ರಧಾನಿ ಆದ ಮೇಲೆ ಅವರಿಗೆ ಆ ಮಾತು ಮರೆತುಹೋಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಆರ್ಥಿಕ ಇಲಾಖೆಗೆ ನೀಡಿರುವ ನೂತನ ವಾಹನಗಳಿಗೆ ವಿಧಾನಸೌಧದ ಎದುರು ಶನಿವಾರ ಚಾಲನೆ ನೀಡಿ ಮಾತನಾಡಿದ ಅವರು, 'ಮುಖ್ಯಮಂತ್ರಿ ಆಗಿದ್ದಾಗ ಆಡಿದ್ದ ಮಾತಿಗೆ ಮೋದಿ ಅವರು ತಾವು ಪ್ರಧಾನಿ ಆದಾಗಲೂ ಬದ್ಧವಾಗಿರಬೇಕಲ್ಲವೇ? ಈಗ ನಾವು ಕೇಂದ್ರಕ್ಕೆ ಪ್ರತಿ ವರ್ಷ ₹4.50 ಲಕ್ಷ ಕೋಟಿ ತೆರಿಗೆ ನೀಡುತ್ತಿದ್ದೇವೆ. ಅದರಲ್ಲಿ ನಮಗೆ ವಾಪಸ್ ಬರುವುದು ₹60,000 ಕೋಟಿ ಮಾತ್ರ. ಮೋದಿ ಅವರಿಗೆ ಅವರ ಮಾತಿನ ಮೇಲೆಯೇ ಬದ್ಧತೆ ಇಲ್ಲ' ಎಂದರು.

ಅನುಕಂಪದ ಆಧಾರದಲ್ಲಿ ನೇಮಕಾತಿ ಆದ 95 ಮಂದಿಗೆ ಸಿದ್ದರಾಮಯ್ಯ ಅವರು ನೇಮಕಾತಿ ಪತ್ರ ನೀಡಿದರು. ಅಬಕಾರಿ ಸಚಿವ ಆರ್. ಬಿ.ತಿಮ್ಮಾಪುರ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಶಾಸಕ ರಿಜ್ವಾನ್ ಅರ್ಷದ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

'ಜಾತಿ ಸಮೀಕ್ಷೆ ವೇಳೆ ಮಾದಿಗ ಎಂದು ಬರೆಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಯವರ ಗಣತಿಗಾಗಿ ಸಮೀಕ್ಷೆದಾರರು ಮನೆಗೆ ಬಂದಾಗ 'ನಾವು, ಕೋಡ್ 61– ಮಾದಿಗ' ಎಂದು ಹೇಳಬೇಕು. ಈ ಮೂಲಕ ನಮ್ಮ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚು ಮೀಸಲಾತಿ ಪಡೆಯುವ ಪ್ರಯತ್ನ ಮಾಡಬೇಕಿದೆ' ಎಂದು ಮಾಜಿ ಸಚಿವ ಎಚ್. ಆಂಜನೇಯ ಹೇಳಿದರು.

ಮಾದಿಗ ಮೀಸಲಾತಿ ಹೋರಾಟ ಸಮಿತಿ ವತಿಯಿಂದ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮಾದಿಗ ಮುಖಂಡರ ಜಾಗೃತಿ ಕಾರ್ಯಕ್ರಮದಲ್ಲಿ 'ಜಾತಿ ಸಮೀಕ್ಷೆ ವೇಳೆ ಬರೆಯಿಸಿ– ನಮ್ಮ ಜಾತಿ ಮಾದಿಗ' ಎಂಬ ಭಿತ್ತಿಪತ್ರ, ಕರಪತ್ರ ಬಿಡುಗಡೆಗೊಳಿಸಿ ಅವರು ಮಾತನಾಡಿದರು.



ಮಾದಿಗ ಮುಖಂಡರ ಜಾಗೃತಿ ಕಾರ್ಯಕ್ರಮದಲ್ಲಿ 'ಜಾತಿ ಸಮೀಕ್ಷೆ ವೇಳೆ ಬರೆಯಿಸಿ ನಮ್ಮ ಜಾತಿ ಮಾದಿಗ' ಎಂಬ ಭಿತ್ತಿಪತ್ರ, ಕರಪತ್ರವನ್ನು ಎಚ್.ಆಂಜನೇಯ ಬಿಡುಗಡೆ ಮಾಡಿದರು

'ಜಾತಿ ಸಮೀಕ್ಷೆದಾರರು ಮೇ 5ರಿಂದ 17ರವರೆಗೆ ಮನೆಗಳಿಗೆ ಭೇಟಿ ನೀಡಲಿದ್ದು, ಮಾದಿಗ ಸಮುದಾಯದವರು ಮನೆಯಲ್ಲೇ ಇದ್ದು ಮಾದಿಗ ಎಂದು ನಮೂದಿಸಬೇಕು. 30 ವರ್ಷದ ಹೋರಾಟದ ಫಲವಾಗಿ ಒಳ ಮೀಸಲಾತಿ ಜಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದು, ನಾವೆಲ್ಲ ಈಗ ಜಾತಿ ಸಮೀಕ್ಷೆಯನ್ನು ಶೇ 100ರಷ್ಟು ಯಶಸ್ವಿಗೊಳಿಸಬೇಕಿದೆ' ಎಂದರು.

'ರಾಜ್ಯದಲ್ಲಿ ಪರಿಶಿಷ್ಟ ಸಮುದಾಯದಲ್ಲಿನ ಕೆಲವರು ನಮ್ಮ ಜನಸಂಖ್ಯೆ ಹೆಚ್ಚು ಇದೆ ಎನ್ನುತ್ತಿದ್ದಾರೆ. ಆದರೆ, ವಾಸ್ತವವಾಗಿ ಮಾದಿಗರ ಸಂಖ್ಯೆ ಹೆಚ್ಚಿದೆ. ನಮ್ಮಲ್ಲಿ ಜಾಗೃತಿ ಕೊರತೆಯಿಂದ ಹಿಂದುಳಿದಿದ್ದೇವೆ. ಈಗ ಜಾತಿ ಸಮೀಕ್ಷೆ ಬಳಿಕ ಎಲ್ಲ ಸತ್ಯ ಹೊರಬೀಳಲಿದೆ. ಅವರವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹಂಚಿಕೆ ಆಗಲಿದೆ' ಎಂದು ಹೇಳಿದರು.

'ಬೆಂಗಳೂರಿನಲ್ಲಿ ಮಾದಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದೇವೆ ಎಂದು ಭಾಷಣ, ಮಾತುಗಳಲ್ಲಿ ಹೇಳುತ್ತಿದ್ದೀರಿ. ಅದನ್ನು ದಾಖಲೆ ರೂಪದಲ್ಲಿ ತೋರಿಸಲು ಮಾದಿಗ ಸಮುದಾಯದ ಸಂಘಟನೆ, ಮುಖಂಡರು ಪ್ರತಿ ಬಡಾವಣೆ, ಮನೆಗಳಿಗೆ ಭೇಟಿ ನೀಡಿ ನಮ್ಮ ಜಾತಿ ಮಾದಿಗ ಎಂದು ಹೆಮ್ಮೆಯಿಂದ ಹೇಳುವಂತೆ ಜಾಗೃತಿ ಮೂಡಿಸಬೇಕು' ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಬಿ.ಎಚ್.ಅನಿಲ್‌ಕುಮಾರ್, ನಿವೃತ್ತ ಐಆರ್‌ಎಸ್ ಅಧಿಕಾರಿ ಭೀಮಾಶಂಕರ್, ಆದಿಜಾಂಬವ ಸಂಘದ ಅಧ್ಯಕ್ಷ ಭೀಮರಾಜ್, ಮಾದಿಗ ದಂಡೋರದ ಮುಖಂಡ ಶ್ರೀನಿವಾಸ್, ಅಹಿಂದ ನಾಯಕ ಮುತ್ತುರಾಜ್, ಮುಖಂಡರಾದ ಸುಬ್ಬರಾಯುಡು, ನಾರಾಯಣ ಉಪಸ್ಥಿತರಿದ್ದರು.

ಉತ್ತಮ ಫಲಿತಾಂಶ ಪಡೆದ ಕ್ರೈಸ್ ವಸತಿ ಶಾಲೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯದಲ್ಲಿ ಒಟ್ಟು ಶೇ 62.34ರಷ್ಟು ಫಲಿತಾಂಶ ಬಂದಿದ್ದರೆ, ಸಮಾಜ ಕಲ್ಯಾಣ ಇಲಾಖೆಯಡಿ ಇರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಶಾಲೆಗಳು ಶೇ 91ರಷ್ಟು ಫಲಿತಾಂಶ ಪಡೆದು ಉತ್ತಮ ಸಾಧನೆ ಮಾಡಿವೆ.

ಸರ್ಕಾರದ ಇತರೆ ಶಾಲೆಗಳು ಮತ್ತು ಅನುದಾನ ರಹಿತ ಖಾಸಗಿ ಶಾಲೆಗಳಿಗಿಂತ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮಕ್ಕಳು ಫಲಿತಾಂಶವಾರು ಶೇ 28ರಷ್ಟು ಅಧಿಕ ಸಾಧನೆ ಮಾಡಿದ್ದಾರೆ.

ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 34,984 ವಿದ್ಯಾರ್ಥಿಗಳು ಹಾಜರಾಗಿದ್ದು, 31,726 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಶೇ 34.10ರಷ್ಟು ವಿದ್ಯಾರ್ಥಿಗಳು ಉನ್ನತ ದರ್ಜೆಯಲ್ಲಿ ಶೇ 55.90 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಕ್ರೈಸ್ ಕಾರ್ಯ ನಿರ್ವಾಹಕ ನಿರ್ದೇಶಕ ಕಾಂತರಾಜು ತಿಳಿಸಿದ್ದಾರೆ.

ವೈದ್ಯಕೀಯ ಪ್ರವೇಶಕ್ಕೆ ಇಂದು 'ನೀಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನ ವೈದ್ಯಕೀಯ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ವತಿಯಿಂದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್-ಯುಜಿ) ರಾಜ್ಯದ 381 ಪರೀಕ್ಷಾ ಕೇಂದ್ರಗಳಲ್ಲಿ ಇಂದು (ಮೇ 4) ನಡೆಯಲಿದ್ದು, ಸಮಯಕ್ಕೆ ಕನಿಷ್ಠ ಎರಡು ಗಂಟೆಗಳ ಮೊದಲು ಪರೀಕ್ಷಾ ಕೇಂದ್ರಕ್ಕೆ ವರದಿ ಮಾಡಿಕೊಳ್ಳಬೇಕು.

ಮಧ್ಯಾಹ್ನ 2 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಪರೀಕ್ಷೆ ನಡೆಯಲಿದ್ದು, 1.49 ಲಕ್ಷ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ.



ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30ರ ಒಳಗೆ ಪ್ರವೇಶಾತಿ ಪತ್ರದೊಂದಿಗೆ ಕಾಲೇಜಿನಿಂದ ನೀಡಿರುವ ಗುರುತಿನ ಚೀಟಿ, ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಮತದಾರರ ಗುರುತಿನ ಚೀಟಿ ಅಥವಾ ಇತರೆ ಯಾವುದಾದರೂ ಅಂಗೀಕೃತ ಗುರುತಿನ ಚೀಟಿಯ ಜೊತೆ ಒಂದು ಪೋಸ್ಟ್ ಕಾರ್ಡ್ ಮತ್ತು ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳ ಸಹಿತ ಹಾಜರಾಗಬೇಕು. ನೋಂದಣಿ ಪ್ರಕ್ರಿಯೆ ಪೂರ್ಣಗೊಂಡ ವಿದ್ಯಾರ್ಥಿಗಳು ತಮ್ಮ ರಿಜಿಸ್ಟರ್ ನಂಬರ್ ಇರುವ ಕೊಠಡಿಗೆ ತೆರಳಬೇಕು.

ವಿದ್ಯಾರ್ಥಿಗಳನ್ನು ಎನ್‌ಟಿಎ ವತಿಯಿಂದ ನೇಮಿಸಿರುವ ಏಜೆನ್ಸಿಗಳು ನೋಂದಣಿ ಮಾಡಿಕೊಳ್ಳಲಿದ್ದು, ನಿಯೋಜಿತ ಪೊಲೀಸ್ ಸಿಬ್ಬಂದಿ ಸುರಕ್ಷತಾ ತಪಾಸಣೆ ನಡೆಸಲಿದ್ದಾರೆ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯವಾಗಿದ್ದು, ಪ್ರವೇಶ ಪತ್ರದಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ಪಾಲಿಸಬೇಕು.



ಹೊನ್ನಾಟ

ದ್ಯಾಮವ್ವ ಮತ್ತು ದುರುಗಮ್ಮ ಜಾತ್ರೆ ಪ್ರಯುಕ್ತ ಧಾರವಾಡ ತಾಲ್ಲೂಕಿನ ಯಾದವಾಡ ಗ್ರಾಮದಲ್ಲಿ ಭಕ್ತರು ಶನಿವಾರ ಹೊನ್ನಾಟ ಆಡಿದರು ಚಿತ್ರ: ಬಿ.ಎಂ. ಕೇದಾರನಾಥ

'ಲಿಂಗಾಯತ ಚಳವಳಿ' ಕಾರ್ಯಕ್ರಮದಲ್ಲಿ ಸಾಣೆಹಳ್ಳಿ ಪಂಡಿತಾರಾಧ್ಯ ಸ್ವಾಮೀಜಿ

ಲಿಂಗಾಯತ ಧರ್ಮದ ಮಾನ್ಯತೆಗೆ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಮತ್ತೆ ಹೋರಾಟ ಮಾಡುವುದು ಹೇಗೆ ಎಂಬುದರ ಬಗ್ಗೆ ಚಿಂತನ ಮಂಥನ ನಡೆಯಬೇಕು. ಜನರು ನಮ್ಮೊಂದಿಗಿದ್ದಾರೆ. ನಾವು ಸರಿಯಾದ ದಿಕ್ಕಿನಲ್ಲಿ ಹೆಜ್ಜೆ ಇಡಬೇಕು' ಎಂದು ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಜಿ.ಬಿ. ಪಾಟೀಲರ 'ಲಿಂಗಾಯತ ಚಳವಳಿ 2017–18' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'2017–18ರಲ್ಲಿ ಸುಮಾರು 9 ತಿಂಗಳು ಹೋರಾಟ ನಡೆಯಿತು. ಕ್ರಮೇಣ ಸತ್ವ ಬತ್ತತೊಡಗಿತು. ಸಂಘಟನೆ ವಿಘಟನೆಯಾಯಿತು. ರಾಜಕೀಯ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಅಲ್ಲೋಲ ಕಲ್ಲೋಲ ಉಂಟಾಯಿತು. ಬೆಂಬಲ ನೀಡಿದವರು ಹಿಂದಕ್ಕೆ ಸರಿದರು. ಹಿಂದೆ ಇದ್ದವರು ಮುಂದಕ್ಕೆ ಬಂದರು. ಅವಾಂತರಗಳಾದವು. ಹೋರಾಟಗಾರರು ಮಠಗಳಿಗೆ ಹೋದಾಗ ಯಾತನೆ ಅನುಭವಿಸಬೇಕಾಯಿತು. ಹೊತ್ತು ಬಂದ ಕಡೆ ಕೊಡೆ ಹಿಡಿಯುವ ಪ್ರವೃತ್ತಿಯನ್ನು ಮಠಾಧೀಶರು ಪ್ರದರ್ಶಿಸಿದರು. ಅವೆಲ್ಲ ಈ ಕೃತಿಯಲ್ಲಿ ದಾಖಲಾಗಿದೆ' ಎಂದರು.

'ಕಾವಿ, ಖಾದಿಗಳನ್ನು ಹೆಚ್ಚು ನೆಚ್ಚಿಕೊಳ್ಳಲು ಹೋಗದೇ ಜನಸಾಮಾನ್ಯರನ್ನು ನಂಬಿದರೆ ಹೋರಾಟದಲ್ಲಿ ಜಯಗಳಿಸಬಹುದು ಎಂಬುದನ್ನು 12ನೇ ಶತಮಾನದಲ್ಲಿಯೇ ಬಸವಣ್ಣ ತೋರಿಸಿಕೊಟ್ಟಿದ್ದಾರೆ. ಅದೇ ಮಾದರಿಯಲ್ಲಿ ಚಳವಳಿ ಕಟ್ಟಬೇಕು. ಹೋರಾಟ ನಡೆಸಲು 20 ಮಂದಿ ಸೇರಿ ರೂಪುರೇಷೆಗಳನ್ನು ಸಿದ್ಧಪಡಿಸಬೇಕು' ಎಂದು ಸಲಹೆ ನೀಡಿದರು.



ಜಿ.ಬಿ. ಪಾಟೀಲ ಅವರ 'ಲಿಂಗಾಯತ ಚಳುವಳಿ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು ಪ್ರಜಾವಾಣಿ ಚಿತ್ರ

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಮಾತನಾಡಿ, 'ಯಾವುದೇ ಧರ್ಮವನ್ನು ಸ್ವತಂತ್ರ ಧರ್ಮ ಎಂದು ಘೋಷಿಸಲು ಸಂವಿಧಾನದಲ್ಲಿ ಅವಕಾಶವಿಲ್ಲ. ಅಲ್ಪಸಂಖ್ಯಾತ ಧರ್ಮ ಎಂಬ ಮಾನ್ಯತೆ ನೀಡಲು ಅವಕಾಶವಿದೆ. ಬಸವಣ್ಣರನ್ನು ಧರ್ಮಗುರು ಎಂದು, ವಚನಗಳನ್ನು ಧರ್ಮಗ್ರಂಥವೆಂದು ಒಪ್ಪಿದವರೆಲ್ಲ ಲಿಂಗಾಯತರು' ಎಂದರು.

'ಬಸವಣ್ಣನನ್ನು ಓಡಿಸಿರುವ, ಶರಣರನ್ನು ಕೊಂದಿರುವ, ವಚನಗಳನ್ನು ಸುಟ್ಟು ಹಾಕಿರುವ ಶಕ್ತಿಗಳು ಈಗಲೂ ನಮ್ಮ ಸಮಾಜದಲ್ಲಿವೆ. ಅವುಗಳನ್ನು ಹೆಗಲ ಮೇಲೆ ಹೊತ್ತುಕೊಂಡು ಯಾವ ಹೋರಾಟ ಮಾಡಿದರೂ ಗುರಿ ಸಾಧಿಸಲಾಗದು' ಎಂದರು.

ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ಜಾಗತಿಕ ಲಿಂಗಾಯತ ಮಹಾಸಭೆ ಸಂಸ್ಥಾಪಕ ಎ.ಬಿ. ಪಾಟೀಲ, ಕರ್ನಾಟಕ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ, ಕನ್ನಡ ಅಭಿವೃದ್ಧಿ ಪ್ರಾಧಿಕಾರದಅಧ್ಯಕ್ಷಪುರುಷೋತ್ತಮಬಿಳಿಮಲೆ, ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಜಿ. ಪ್ರಶಾಂತ ನಾಯಕ, ಜಾಗತಿಕ ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಎಸ್.ಎಂ. ಜಾಮದಾರ, ಕೃತಿಕಾರ ಜಿ.ಬಿ. ಪಾಟೀಲ ಉಪಸ್ಥಿತರಿದ್ದರು.

'ವರ್ಣಾಶ್ರಮದ ಡಬ್ಬಿಯಲ್ಲಿ ಲಿಂಗಾಯತರಿಲ್ಲ'

'ಲಿಂಗಾಯತರನ್ನು ಹಿಂದೂಗಳು ಎಂದು ಹೇಳಿ ಹೇಳಿ ಜನರ ಮನಸ್ಸಿನಲ್ಲಿ ಅಚ್ಚೊತ್ತಿಸಲಾಗಿದೆ. ಆದರೆ, ಹಿಂದೂ ಧರ್ಮದ ವರ್ಣಾಶ್ರಮದ ನಾಲ್ಕು ಡಬ್ಬಿಗಳಲ್ಲಿ ಲಿಂಗಾಯತರಿಲ್ಲ. ಹಾಗಾಗಿ ಲಿಂಗಾಯತರು ಹಿಂದೂಗಳಲ್ಲ' ಎಂದು ಇಳಕಲ್ ಚಿತ್ತರಗಿ ಮಠದ ಗುರುಮಹಾಂತ ಸ್ವಾಮೀಜಿ ಹೇಳಿದರು.

'ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ಡಬ್ಬಿಗಳಲ್ಲಿ ಲಿಂಗಾಯತರು ಬ್ರಾಹ್ಮಣರಲ್ಲ, ಕ್ಷತ್ರಿಯರಲ್ಲ, ವೈಶ್ಯರಲ್ಲ. ಅವರನ್ನು ಶೂದ್ರ ಡಬ್ಬಿಯಲ್ಲಿ ಇರಿಸಲು ನೋಡಲಾಗುತ್ತಿದೆ. ವರ್ಣಾಶ್ರಮದ ನಿಯಮ ಪ್ರಕಾರ ಶೂದ್ರರಿಗೆ ವಿದ್ಯೆ ಪಡೆಯುವ, ದೇವರನ್ನು ಪೂಜಿಸುವ ಅಧಿಕಾರವಿಲ್ಲ. ಮೊದಲ ಮೂರು ಡಬ್ಬಿಯವರ ಸೇವಕರಾಗಿ ಇರಬೇಕು. ಬಸವಣ್ಣನವರು ಕೈಗೆ ಇಷ್ಟಲಿಂಗ ನೀಡಿ, ಡಬ್ಬಿಗಳ ನಿರ್ಬಂಧದಿಂದ ಬಿಡುಗಡೆಗೊಳಿಸಿ ಸ್ವತಂತ್ರ ಮನುಷ್ಯರನ್ನಾಗಿ ಮಾಡಿದ್ದಾರೆ' ಎಂದು ಹೇಳಿದರು.

'ದೇವರನ್ನು ಮುಟ್ಟಿದರೆ ಮಹಿಳೆ ಪವಿತ್ರ ಆಗಬೇಕಿತ್ತು. ಆದರೆ, ಶಬರಿಮಲೆಯಲ್ಲಿ ಮಹಿಳೆ ದೇವರನ್ನು ಮುಟ್ಟಿದರೆ ಮೈಲಿಗೆಯಾಯಿತಂತೆ. ಲಿಂಗಾಯತರಲ್ಲಿ ಇದೆಲ್ಲ ಇಲ್ಲ. ಹೆಣ್ಣುಮಕ್ಕಳು ಕೂಡ ಕೈಯಲ್ಲಿ ಇಷ್ಟಲಿಂಗ ಇಟ್ಟುಕೊಂಡು ಪೂಜೆ ಮಾಡಬಹುದು. ಹಿಂದೂಗಳು ಅವರ ಧರ್ಮ ಅವರು ಪಾಲನೆ ಮಾಡಲಿ ನಮ್ಮದೇನು ವಿರೋಧವಿಲ್ಲ. ಆದರೆ, ಲಿಂಗಾಯತರು ಮಾತ್ರ ಲಿಂಗಾಯತ ಧರ್ಮವನ್ನೇ ಪಾಲನೆ ಮಾಡಬೇಕು. ಜಾತಿ ಗಣತಿ ಬಂದರೆ ಧರ್ಮದ ಕಾಲಂನಲ್ಲಿ ಹಿಂದೂ ಬದಲು ಲಿಂಗಾಯತ ಎಂದೇ ತುಂಬಬೇಕು' ಎಂದು ಸಲಹೆ ನೀಡಿದರು.


ಜಿಲ್ಲಾಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸೂಚನೆ

ಕಂದಾಯ ಗ್ರಾಮ: ಜೂನ್‌ಗೆ ಅಧಿಸೂಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೂನ್ ತಿಂಗಳ ಅಂತ್ಯದೊಳಗೆ ರಾಜ್ಯದ ಎಲ್ಲ 3,614 ಕಂದಾಯ ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಹೊರಡಿಸಿ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿಗಳ ಜತೆಗೆ ಶನಿವಾರ ವಿಡಿಯೊ ಸಂವಾದ ನಡೆಸಿದ ಅವರು, 'ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ಕಡುಬಡವರಿಗೆ ಶಾಶ್ವತ ಪರಿಹಾರ ಒದಗಿಸಬೇಕು ಎಂಬ ಉದ್ದೇಶದಿಂದಲೇ ಕಂದಾಯ ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಹೊರಡಿಸುವ ನೀತಿಯನ್ನು 2017ರಲ್ಲಿ ರೂಪಿಸಲಾಗಿತ್ತು. ಆದರೆ, ಹಲವು ವರ್ಷಗಳ ನಂತರವೂ ಈ ಕೆಲಸ ಪೂರ್ಣವಾಗಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಕೃಷ್ಣ ಬೈರೇಗೌಡ


'ರಾಜ್ಯದಲ್ಲಿ 3,614 ಕಂದಾಯ ಗ್ರಾಮಗಳು ಇದ್ದು, ಹಿಂದಿನ ಸರ್ಕಾರದ ಅವಧಿಯಲ್ಲಿ ಅಧಿಸೂಚನೆ ಹೊರಡಿಸಿ 1,400 ಗ್ರಾಮಗಳನ್ನು ರಚಿಸಲಾಗಿದೆ. ನಮ್ಮ ಸರ್ಕಾರದ ಅವಧಿಯಲ್ಲಿ 1,200 ಗ್ರಾಮಗಳನ್ನು ರಚಿಸಲಾಗಿದೆ. ಅಂತಿಮ ಅಧಿಸೂಚನೆ ಆಗದ1,014ಗ್ರಾಮಗಳಿವೆ.ಈಕೆಲಸವನ್ನು ಶೀಘ್ರ ಮುಗಿಸಬೇಕು' ಎಂದರು.

'ಜುಲೈನಿಂದ ಜನಗಣತಿ ಆರಂಭವಾಗುವ ಸಾಧ್ಯತೆ ಇದೆ. ಹಾಗೆ ಆದರೆ, ಆನಂತರ ಅಧಿಸೂಚನೆ ಹೊರಡಿಸಲು ಆಗುವುದಿಲ್ಲ. ಹೀಗಾಗಿ ಜೂನ್ ಅಂತ್ಯದೊಳಗೇ ಎಲ್ಲ ಗ್ರಾಮಗಳಿಗೂ ಅಧಿಸೂಚನೆ ಹೊರಡಿಸಿ, ಜುಲೈ ನಂತರ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಬೇಕು' ಎಂದು ಸೂಚಿಸಿದರು.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಕಂದಾಯ ಆಯುಕ್ತ ಸುನೀಲ್ ಕುಮಾರ್ ಮತ್ತು ಭೂ ಮಾಪನಾ ಇಲಾಖೆ ಆಯುಕ್ತ ಮಂಜುನಾಥ್ ಅವರು ಸಭೆಯಲ್ಲಿ ಉಪಸ್ಥಿತರಿದ್ದರು.

1 ಲಕ್ಷ ಜನರಿಗೆ ಹಕ್ಕುಪತ್ರ

'ಅಂತಿಮ ಅಧಿಸೂಚನೆ ಹೊರಡಿಸಲಾದ 2,600 ಗ್ರಾಮಗಳ 1 ಲಕ್ಷ ಫಲಾನುಭವಿಗಳಿಗೆ ಇದೇ ಮೇ 20ರಂದು ಹಕ್ಕುಪತ್ರ ವಿತರಿಸುತ್ತೇವೆ' ಎಂದು ಕೃಷ್ಣ ಬೈರೇಗೌಡ ಅವರು ಹೇಳಿದರು.



'ರಾಜ್ಯ ಸರ್ಕಾರ ಎರಡು ವರ್ಷ ಪೂರೈಸಿದ ಸಂಬಂಧ ಹೊಸಪೇಟೆಯಲ್ಲಿ ಸಾಧನಾ ಸಮಾವೇಶ ಆಯೋಜಿಸಲಾಗಿದೆ. ಒಟ್ಟು 1.41 ಲಕ್ಷ ಫಲಾನುಭವಿಗಳಿದ್ದು, ಈವರೆಗೆ 92,719 ಹಕ್ಕುಪತ್ರಗಳನ್ನು ಸಿದ್ದಪಡಿಸಿದ್ದೀರಿ. ಉಳಿದವರ ಹಕ್ಕುಪತ್ರಗಳನ್ನೂ ಸಿದ್ದಪಡಿಸಿ' ಎಂದು ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ಕೋಮು ಹಿಂಸೆ ನಿಗ್ರಹಕ್ಕೆ ಪಡೆ

ಒಂದನೇ ಪುಟದಿಂದ...

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹಸಚಿವ, 'ನಕ್ಸಲ್ ನಿಗ್ರಹ ಪಡೆ (ಎಎನ್‌ಎಫ್) ಮಾದರಿಯಲ್ಲಿ ಕೋಮು ಹಿಂಸೆ ನಿಗ್ರಹ ಕಾರ್ಯಪಡೆಯನ್ನು ಪ್ರತ್ಯೇಕವಾಗಿ ರಚಿಸುತ್ತೇವೆ. ಇದು ಪೊಲೀಸರ ಸಹಯೋಗದಲ್ಲಿ ಕೆಲಸ ಮಾಡಲಿದೆ. ಐಜಿಪಿ ದರ್ಜೆಯ ಅಧಿಕಾರಿ ಇದರ ನೇತೃತ್ವ ವಹಿಸಲಿದ್ದಾರೆ. ಕೋಮು ಚಟುವಟಿಕೆಗಳನ್ನು ನಡೆಸುವವರು ಮತ್ತು ಅದನ್ನು ಬೆಂಬಲಿಸುವವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವ ಅಧಿಕಾರವನ್ನು ಈ ಕಾರ್ಯಪಡೆಗೆ ನೀಡುತ್ತೇವೆ. ಎರಡು ತಿಂಗಳಲ್ಲಿ ಇದು ಕಾರ್ಯರೂಪಕ್ಕೆ ಬರಲಿದೆ' ಎಂದರು.

ರೌಡಿ ಶೀಟರ್ ಸುಹಾಸ್ ಶೆಟ್ಟಿ ಹತ್ಯೆ ಬಳಿಕ ಈ ಜಿಲ್ಲೆಗಳಲ್ಲಿ ಕೋಮು ಹಿಂಸೆ ಮತ್ತೆ ಮರುಕಳಿಸಿದೆ ಎಂಬ ಭಾವನೆ ಜನರಲ್ಲಿ ಬಂದಿರಬಹುದು. ಜನ ಸಮುದಾಯ ಇದನ್ನು ಇಷ್ಟಪಡುವುದಿಲ್ಲ. ಈ ಜಿಲ್ಲೆಗಳು ಶಾಂತಿಯಿಂದ ಇರಬೇಕು, ಜನ ಶಾಂತಿಯಿಂದ ಬದುಕಬೇಕು. ಇಲ್ಲಿ ಬಂಡವಾಳ ಹೂಡಿಕೆ ಆಗಬೇಕು. ಜನರಿಗೆ ಉದ್ಯೋಗ ಸಿಗಬೇಕು ಎಂದು ಪೊಲೀಸ್ ಇಲಾಖೆ ಮತ್ತು ಸರ್ಕಾರ ಬಯಸುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಎರಡು ವರ್ಷಗಳಿಂದ ಎಲ್ಲ ರೀತಿಯ ಕ್ರಮ ತೆಗದುಕೊಂಡಿದ್ದೆವು. ಗುಂಪು ಹಲ್ಲೆ ನಡೆಸಿ ಕೇರಳದ ವಯನಾಡಿನ ಅಶ್ರಫ್‌ನನ್ನು ಕೊಲೆ ಮಾಡಿದ್ದು ಹಾಗೂ ಸುಹಾಸ್ ಶೆಟ್ಟಿ ಹತ್ಯೆ ಕೋಮು ಸೌಹಾರ್ದಕ್ಕೆ ಸವಾಲು ಆಗಿವೆ ಎಂದರು.

'ಸುಹಾಸ್ ಶೆಟ್ಟಿ ಕೊಲೆ ಪ್ರಕರಣದಲ್ಲಿ ಒಟ್ಟು 8 ಆರೋಪಿಗಳನ್ನು ಹಾಗೂ ಅಶ್ರಫ್ ಹತ್ಯೆ ಪ್ರಕರಣದಲ್ಲಿ 21 ಆರೋಪಿಗಳನ್ನು ಬಂಧಿಸಲಾಗಿದೆ' ಎಂದರು.

ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್.ಹಿತೇಂದ್ರ, ಮಂಗಳೂರು ಪೊಲೀಸ್ ಕಮಿಷನರ್ ಅನುಪಮ ಅಗ್ರವಾಲ್, ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್, ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಸಭೆಯಲ್ಲಿ ಭಾಗವಹಿಸಿದ್ದರು.

ಎಂಟು ಆರೋಪಿಗಳ ಬಂಧನ

ಒಂದನೇ ಪುಟದಿಂದ...



ಸಫ್ವಾನ್ ಮೇಲೆ 2023ರಲ್ಲಿ ಸುರತ್ಕಲ್‌ನಲ್ಲಿ ಸುಹಾಸ್ ಶೆಟ್ಟಿ ಸಹಚರ ಪ್ರಶಾಂತ್ ಹಾಗೂ ಧನರಾಜ್ ಮತ್ತಿತರರು ಹಲ್ಲೆ ನಡೆಸಿದ್ದರು. ಸುಹಾಸ್ ಶೆಟ್ಟಿ ತನ್ನನ್ನು ಕೊಲೆ ಮಾಡಬಹುದು ಎಂಬ ಭಯ ಸಫ್ವಾನ್‌ಗೆ ಇತ್ತು. 2022ರಲ್ಲಿ ಸುರತ್ಕಲ್‌ನಲ್ಲಿ ನಡೆದಿದ್ದ ಫಾಝಿಲ್ ಹತ್ಯೆಯಲ್ಲಿ ಸುಹಾಸ್ ಶೆಟ್ಟಿ ಪ್ರಮುಖ ಆರೋಪಿಯಾಗಿದ್ದ. ಆ ಕಾರಣಕ್ಕೆ ಸುಹಾಸ್ ಶೆಟ್ಟಿ ಕೊಲೆ ಸಂಚು ರೂಪಿಸಿದ್ದ ಸಫ್ವಾನ್, ಫಾಜಿಲ್ ಸೋದರ ಆದಿಲ್ ಮೆಹರೂಫ್‌ನನ್ನು ಸಂಪರ್ಕಿಸಿದ್ದ. ಸುಹಾಸ್ ಶೆಟ್ಟಿ ಹತ್ಯೆಗೆ ಆದಿಲ್ ₹ 5 ಲಕ್ಷ ನೀಡಲು ಒಪ್ಪಿದ್ದ, ಆ ಪೈಕಿ ₹ 3 ಲಕ್ಷ ನೀಡಿದ್ದ ಎಂದರು.

'ಕೊಲೆ ಆರೋಪಿ ನಿಯಾಜ್‌ಗೆ ನಾಗರಾಜ್ ಮತ್ತು ರಂಜಿತ್ ಸ್ನೇಹಿತರು. ಈ ಕೃತ್ಯಕ್ಕೆ ಅವರನ್ನೂ ಬಳಸಿಕೊಳ್ಳಲಾಗಿದೆ. ಅವರಿಬ್ಬರು ಕೊಲೆಗೆ ನೆರವಾಗಲು ಎರಡು ದಿನಗಳ ಮುಂಚಿತವಾಗಿಯೇ ಸಫ್ವಾನ್ ಮನೆಯಲ್ಲಿ ವಾಸ್ತವ್ಯವಿದ್ದರು. ಸುಹಾಸ್ ಶೆಟ್ಟಿಯ ಚಲನವಲನಗಳನ್ನು ಗಮನಿಸಿ, ಹೊಂಚುಹಾಕಿ ಮೇ 1ರಂದು ರಾತ್ರಿ ಎಲ್ಲರೂ ಸೇರಿ ಕೊಲೆ ಮಾಡಿದ್ದಾರೆ' ಎಂದು ಕಮಿಷನರ್ ತಿಳಿಸಿದರು.

ಇದು ಪ್ರತೀಕಾರದ ಹತ್ಯೆಯೇ ಎಂಬ ಪ್ರಶ್ನೆಗೆ, 'ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಳಿಕ ಪೊಲೀಸ್ ಕಸ್ಟಡಿಗೆ ಪಡೆಯುತ್ತೇವೆ. ಅವರ ವಿಚಾರಣೆ ಬಳಿಕ ಹತ್ಯೆಯ ಸಮಗ್ರ ವಿವರ ಸಿಗಲಿದೆ' ಎಂದರು.

‘ಸುಪ್ರೀಂ’ಗೆ ಸಿಇಸಿ ವರದಿ ಸಲ್ಲಿಕೆ • ಮಿತಿ ಸಂಪೂರ್ಣ ತೆರವು ಮಾಡುವ ‘ಫಿಮಿ’ ವಾದಕ್ಕೆ ನಕಾರ

ಅದಿರು ಉತ್ಪಾದನೆ: ಏರಿಕೆಗೆ ಶಿಫಾರಸು

• ಹರಿಶಂಕರ್ ಆರ್.



ಬಳ್ಳಾರಿ ಜಿಲ್ಲೆಯ ಸಂಡೂರಿನ ರಾಮನಮಲೈ ಅರಣ್ಯ ಪ್ರದೇಶದಲ್ಲಿ ವಿಐಎಸ್‌ಎಲ್ ಗಣಿಗಾರಿಕೆ ನಡೆಸಲು ಉದ್ದೇಶಿಸಿರುವ ಜಾಗದ ಪಕ್ಕದಲ್ಲೇ ಮತ್ತೊಂದು ಕಂಪನಿಯ ಗಣಿಗಾರಿಕೆ ಕಾರ್ಯ ನಡೆದಿರುವುದು

ಬಳ್ಳಾರಿ: ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಇರುವ ಎಲ್ಲಾ ಕಬ್ಬಿಣದ ಅದಿರು ಗಣಿ ಗುತ್ತಿಗೆಗಳಿಗೆ 57 ದಶಲಕ್ಷ ಮೆಟ್ರಿಕ್ ಟನ್ (ಎಂಎಂಟಿ) ಏಕೀಕೃತ ವಾರ್ಷಿಕ ಉತ್ಪಾದನಾ ಮಿತಿಯನ್ನು ನಿಗದಿಪಡಿಸಲು ಕೇಂದ್ರದ ಉನ್ನತಾಧಿಕಾರ ಸಮಿತಿಯು (ಸಿಇಸಿ) ಸುಪ್ರೀಂ ಕೋರ್ಟ್‌ಗೆ ಶಿಫಾರಸು ಮಾಡಿದೆ.

2011ರ ಅಕ್ರಮ ಗಣಿಗಾರಿಕೆ ಬೆಳವಣಿಗೆ ಬಳಿಕ ಪರಿಸರ ಸಂರಕ್ಷಣೆ ಮತ್ತು ಮುಂದಿನ ಪೀಳಿಗೆಗೆ ನೈಸರ್ಗಿಕ ಸಂಪತ್ತು ಉಳಿಸಲು ಜಿಲ್ಲೆಗಳು ಮತ್ತು ಗಣಿಗಳಿಗೆ ಉತ್ಪಾದನಾ ಮಿತಿ ವಿಧಿಸಲಾಗಿತ್ತು.

ಅದರಂತೆ, ಸದ್ಯ ಬಳ್ಳಾರಿ ಜಿಲ್ಲೆಗೆ (ವಿಜಯನಗರ ಸೇರಿ) ವಾರ್ಷಿಕ 35 ಎಂಎಂಟಿ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಿಗೆ ವಾರ್ಷಿಕ 15 ಎಂಎಂಟಿ ಸೇರಿ ಒಟ್ಟಾರೆ ರಾಜ್ಯದಲ್ಲಿ 50 ಎಂಎಂಟಿ ಉತ್ಪಾದನೆಗೆ ಮಿತಿ ಇದೆ. ಈ ಮೊದಲು ಇದು 30 ಎಂಎಂಟಿ ಇತ್ತು.

ಎಲ್ಲ ಗಣಿಗಳ ಈ ಉತ್ಪಾದನಾ ಮಿತಿ ಮತ್ತು ‘ಒಪ್ಪಿತ ವಾರ್ಷಿಕ ಗರಿಷ್ಠ ಉತ್ಪಾದನೆ’ ಮಿತಿ (ಎಂಪಿಎಪಿ) ತೆರವಿಗೆ ಕೋರಿ ‘ಭಾರತೀಯ ಖನಿಜ ಕೈಗಾರಿಕೆಗಳ ಒಕ್ಕೂಟ (ಫಿಮಿ) ಸುಪ್ರೀಂ ಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯನ್ನು ಪರಿಗಣಿಸಿದ್ದ ಸುಪ್ರೀಂ ಕೋರ್ಟ್, ವಿಸ್ತೃತ ವರದಿ ಸಲ್ಲಿಸಲು ಸಿಇಸಿಗೆ ಆದೇಶಿಸಿತ್ತು. ಅದರಂತೆ ಸಿಇಸಿ ಈಚೆಗೆ ಸುಪ್ರೀಂ ಕೋರ್ಟ್‌ಗೆ ಈಚೆಗೆ ವರದಿ ಸಲ್ಲಿಸಿದೆ.

‘ಜಿಲ್ಲೆಗಳಿಗೆ ಮತ್ತು ಗಣಿ ಗುತ್ತಿಗೆಗಳಿಗೆ ವಿಧಿಸಲಾಗಿರುವ ಅದಿರು ಉತ್ಪಾದನಾ ಮಿತಿಯನ್ನು ಒಮ್ಮೆಲೇ ತೆರವು ಮಾಡುವ ಬದಲು ವೈಜ್ಞಾನಿಕವಾಗಿ, ಹಂತಹಂತವಾಗಿ ಮಿತಿ ಸಡಿಲಗೊಳಿಸಬೇಕು’ ಎಂದು ಸಿಇಸಿ ತನ್ನ ವರದಿಯಲ್ಲಿ ತಿಳಿಸಿದೆ.

ಸದ್ಯ ಕಾರ್ಯನಿರ್ವಹಿಸುತ್ತಿರುವ ‘ಎ’ ಮತ್ತು ‘ಬಿ’ ವರ್ಗದ ಒಟ್ಟಾರೆ ಮಿತಿ ಮತ್ತು ಹರಾಜಾದ ಸಿ-ವರ್ಗದ ಗುತ್ತಿಗೆಗಳ ಒಟ್ಟು ಉತ್ಪಾದನೆಯನ್ನು ಒಳಗೊಂಡಂತೆ ಉತ್ಪಾದನಾ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವವನ್ನು ಸಿಇಸಿ ಸುಪ್ರೀಂ ಕೋರ್ಟ್‌ನ ಮುಂದಿಟ್ಟಿದೆ.

ಈಗಿರುವ ಒಟ್ಟಾರೆ ಉತ್ಪಾದನಾ ಮಿತಿಯನ್ನು ಹೆಚ್ಚಿಸಬೇಕು ಎಂದು ಸಿಇಸಿ ಶಿಫಾರಸು ಮಾಡಿದ್ದರೂ, ಗಣಿ ಗುತ್ತಿಗೆಗಳ ಎಂಪಿಎಪಿಯನ್ನು ಸಂಪೂರ್ಣವಾಗಿ ತೆರವು ಮಾಡುವುದನ್ನು ಅದು ವಿರೋಧಿಸಿದೆ. ಅದಕ್ಕೆ ಹಲವು ಕಾರಣಗಳನ್ನೂ ಸಿಇಸಿ ನೀಡಿದೆ.

ಗಣಿಗಳ ಉತ್ಪಾದನಾ ಮಿತಿಯನ್ನು ಹೆಚ್ಚಿಸಿದರೆ, ಅದು ವ್ಯಾಪಕ ಒತ್ತುವರಿಗೆ ಕಾರಣ ಆಗಬಹುದು. ಡಂಪಿಂಗ್, ಉತ್ಪಾದನಾ ಹೊರೆ ನಿರ್ವಹಿಸಲು ತೊಂದರೆಯಾಗಬಹುದು. ವಾಯು ಮಾಲಿನ್ಯದ ಮಿತಿ ‘ಪಿಎ10’ಗೂ ಹೆಚ್ಚುವ ಸಾಧ್ಯತೆಗಳಿರುತ್ತವೆ. ಉತ್ಪಾದನೆಯಾದ ಅದಿರಿನ ಸಾಗಣೆಗೆ ಸಾರಿಗೆ ಮೂಲ ಸೌಕರ್ಯಗಳ ಕೊರತೆ ಎದುರಾಗಬಹುದು. ಟ್ರಕ್‌ಗಳ ಓಡಾಟ ಹೆಚ್ಚಾಗಬಹುದು, ಜತೆಗೆ, ಪರಿಸರ ನಾಶಕ್ಕೆ ಕಾರಣವಾಗಬಹುದು ಎಂದು ಉಲ್ಲೇಖಿಸಿರುವ ಸಿಇಸಿ, ಗಣಿವಾರು ಮಿತಿ ಹೆಚ್ಚಿಸುವುದು ಬೇಡ ಎಂದು ಪ್ರತಿಪಾದಿಸಿದೆ.

ಜತೆಗೆ, ನಾಲ್ಕು ಜಿಲ್ಲೆಗಳಲ್ಲಿ ದಾಸ್ತಾನಾಗಿರುವ ಅದಿರನ್ನು ಮುಂದಿನ ಪೀಳಿಗೆಗೂ ತಲುಪಿಸುವ ಅಗತ್ಯವನ್ನು ಹೇಳಿರುವ ಸಿಇಸಿ, ಅತ್ಯಂತ ಪ್ರಜ್ಞಾಪೂರ್ವಕವಾಗಿ ಅದಿರನ್ನು ಹೊರತೆಗೆಯಬೇಕಾಗಿದೆ ಎಂದು ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

‘ಫಿಮಿ’ ಹೇಳುವುದೇನು?

- 2011ರ ಕಾಲದ ಅಕ್ರಮ ಗಣಿಗಾರಿಕೆ ಅಂತ್ಯವಾಗಿದೆ. ಪರಿಸ್ಥಿತಿ ಈಗ ಸಹಜವಾಗಿದೆ.
- ಕಾನೂನು ಕೂಡ ಈಗ ಬಿಗಿಯಾಗಿದೆ
- ಇಡೀ ದೇಶದಲ್ಲಿ ಉತ್ಪಾದನೆಗೆ ಮಿತಿ ವಿಧಿಸಿರುವುದು ಕರ್ನಾಟಕದಲ್ಲಿ ಮಾತ್ರ
- ಕಬ್ಬಿಣದ ಅದಿರು ಉತ್ಪಾದನೆ ಸುಸ್ಥಿರವಾಗಿದೆ



ಮುಂದಿನ ಪೀಳಿಗೆಗೂ ಅದಿರು ನಿಕ್ಷೇಪ ಸಂರಕ್ಷಿಸಿಡಲು ಸದ್ಯ ಇರುವ ಅದಿರು ಉತ್ಪಾದನೆ ಮಿತಿಯನ್ನು 4 ಜಿಲ್ಲೆಗಳಿಗೆ ಸೇರಿ 20 ದಶಲಕ್ಷ ಟನ್‌ಗೆ ಇಳಿಸಬೇಕು

ಶ್ರೀಶೈಲ ಆಲದಹಳ್ಳಿ
ಜನಸಂಗ್ರಾಮ ಪರಿಷತ್



ರಥೋತ್ಸವ

ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಬಸವೇಶ್ವರ ದೇವಸ್ಥಾನದ ಜಾತ್ರೆ ಅಂಗವಾಗಿ ಶನಿವಾರ ನಡೆದ ರಥೋತ್ಸವದಲ್ಲಿ ಅಪಾರ ಭಕ್ತರು ಪಾಲ್ಗೊಂಡಿದ್ದರು

ಎಸಿಜೆ ಪತ್ರಿಕೋದ್ಯಮ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಚೆನ್ನೈ: ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ ನೀಡುವ ಎಸಿಜೆ ಪತ್ರಿಕೋದ್ಯಮ ಪ್ರಶಸ್ತಿಯನ್ನು ಶನಿವಾರ ಘೋಷಿಸಲಾಯಿತು.

ಹೇಮಂತ್ ಗೈರೋಲಾ ಅವರು, ತನಿಖಾ ಪತ್ರಿಕೋದ್ಯಮ ವಿಭಾಗದಲ್ಲಿ ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ–2024 ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸಾಮಾಜಿಕ ಪರಿಣಾಮ ಪತ್ರಿಕೋದ್ಯಮ ವಿಭಾಗದಲ್ಲಿ ನೀಡಲಾಗುವ ‘ಕೆ.ಪಿ. ನಾರಾಯಣ ಕುಮಾರ್ ಸ್ಮಾರಕ ಪ್ರಶಸ್ತಿ’ಯು ವಂದನಾ ಮೆನನ್ ಮತ್ತು ಶಂಶೀರ್ ಯೂಸಫ್, ಮೋನಿಕಾ ಝಾ, ಶ್ರೀರಾಮ್ ವಿಠ್ಠಲಮೂರ್ತಿ ಅವರಿಗೆ ಜಂಟಿಯಾಗಿ ಸಂದಿದೆ.

‘ಆಶೀಷ್ ಯೆಚೂರಿ ಸ್ಮಾರಕ ಪ್ರಶಸ್ತಿ’ಯು ಛಾಯಾಚಿತ್ರ ಪತ್ರಕರ್ತ ಪಳನಿಕುಮಾರ್ ಎಂ. ಅವರಿಗೆ ಸಂದಿದೆ.

ತನಿಖಾ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತರಿಗೆ ₹2 ಲಕ್ಷ, ಸಾಮಾಜಿಕ ಪರಿಣಾಮ ಪ್ರಶಸ್ತಿ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತರಿಗೆ ₹1 ಲಕ್ಷ ನಗದು ಮತ್ತು ಸ್ಮರಣಿಕೆ ನೀಡಲಾಗುತ್ತದೆ.

ಅಂಬೇಡ್ಕರ್ ಸೋಲಿಸಿದ್ದು ಡಾಂಗೆ ಸಾವರ್ಕರ್: ಮಲ್ಲಿಕಾರ್ಜುನ ಖರ್ಗೆ

ಪ್ರಜಾವಾಣಿ ವಾರ್ತೆ



ಕಲಬುರಗಿಯ ಜಿಲ್ಲೆ ಅಫಜಲಪುರ ತಾಲ್ಲೂಕಿನ ಗೊಬ್ಬುರ (ಬಿ) ಗ್ರಾಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿದರು ಪ್ರಜಾವಾಣಿ ಚಿತ್ರ

ಕಲಬುರಗಿ: ‘ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಕಾಂಗ್ರೆಸ್ ಎಂದು ಪ್ರಧಾನಿ ಸೇರಿದಂತೆ ಬಿಜೆಪಿಯ ಹಲವು ಮುಖಂಡರು ಟೀಕಿಸುತ್ತಿದ್ದಾರೆ. ಆದರೆ, ತಮ್ಮ ಸೋಲಿಗೆ ಕಮ್ಯುನಿಸ್ಟ್ ಪಕ್ಷದ ನಾಯಕ ಎಸ್.ಎ. ಡಾಂಗೆ ಹಾಗೂ ಹಿಂದುತ್ವ ಪ್ರತಿಪಾದಕ ವಿ.ಡಿ. ಸಾವರ್ಕರ್ ಕಾರಣ ಎಂದು ಸ್ವತಃ ಅಂಬೇಡ್ಕರ್ ಅವರೇ ಹೇಳಿಕೊಂಡಿದ್ದಾರೆ’ ಎಂದು ಎಐಸಿಸಿ ಅಧ್ಯಕ್ಷ, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಪ್ರತಿಪಾದಿಸಿದರು.

ಅಫಜಲಪುರ ತಾಲ್ಲೂಕಿನ ಗೊಬ್ಬುರ (ಬಿ) ಗ್ರಾಮದಲ್ಲಿ ಶನಿವಾರ ಬಿ.ಆರ್. ಅಂಬೇಡ್ಕರ್ ಪುತ್ಥಳಿ ಅನಾವರಣಗೊಳಿಸಿದ ಅವರು, ‘ನನ್ನ ಸೋಲಿಗೆ ಇಬ್ಬರೂ ನಾಯಕರು ಕಾರಣ ಎಂದು ಅಂಬೇಡ್ಕರ್ ಅವರು ತಮ್ಮ ಸ್ನೇಹಿತ ಕಮಲ ಕಾಂತ್ ಚಿತಲೆ ಅವರಿಗೆ ಬರೆದ ಪತ್ರದಲ್ಲಿ ಬಹಿರಂಗಪಡಿಸಿದ್ದಾರೆ’ ಎಂದು ಪತ್ರದ ಪ್ರತಿಯನ್ನು ಸಭೆಯಲ್ಲಿ ಪ್ರದರ್ಶಿಸಿದರು.

‘ಆಗಿನ ಪ್ರಧಾನಿ ಜವಹರಲಾಲ್ ನೆಹರೂ ಅವರಿಗೆ ಅಂಬೇಡ್ಕರ್ ಅವರ ಪ್ರತಿಭೆಯ ಬಗ್ಗೆ ಮಾಹಿತಿ ಇದ್ದುದರಿಂದಲೇ ಅವರನ್ನು ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಮಾಡಿದ್ದರು. ಕಾನೂನು ಸಚಿವರನ್ನಾಗಿ ಮಾಡಿಕೊಂಡಿದ್ದರು. ಬಿಜೆಪಿಯವರು ಇದನ್ನೆಲ್ಲ ಗಮನಿಸದೇ ಕಾಂಗ್ರೆಸ್ ಬಗ್ಗೆ ಟೀಕೆ ಮಾಡುತ್ತಿದ್ದಾರೆ’ ಎಂದು ಖರ್ಗೆ ಹರಿಹಾಯ್ದರು.

ಕೇಂದ್ರ ನಡೆಸಲು ಉದ್ದೇಶಿಸಿರುವ ಜಾತಿ ಜನಗಣತಿ ಕುರಿತು ಪ್ರತಿಕ್ರಿಯಿಸಿದ ಅವರು, ‘ಜಾತಿಗಣತಿ ನಡೆಸಲು ರಾಹುಲ್ ಗಾಂಧಿ ಮತ್ತು ನಾನು ಆಗ್ರಹಿಸಿದಾಗ ಸಮಾಜವನ್ನು ಒಡೆಯಲು ಇಂತಹ ಬೇಡಿಕೆ ಇಡುತ್ತಿದ್ದಾರೆ ಎಂದಿದ್ದರು. ಈಗ ಮೋದಿಯವರೇ ಜಾತಿ ಗಣತಿಗೆ ಒಪ್ಪಿದ್ದಾರೆ. ನಮ್ಮ ಮನವಿಗೆ ಓಗೊಟ್ಟಿದ್ದಾರೆ’ ಎಂದು ಹೇಳಿದರು.

ಸಂಸದ, ಶಾಸಕರ ಉಪಸ್ಥಿತಿಯಲ್ಲಿ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷರ ಆರೋಪ

‘ಸುಹಾಸ್ ಶೆಟ್ಟಿ ಹತ್ಯೆ: ತನಿಖೆಯಲ್ಲಿ ಷಡ್ಯಂತ್ರ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ಆರೋಪಿಗಳ ಬಂಧನ ಮತ್ತು ತನಿಖೆಯಲ್ಲಿ ಷಡ್ಯಂತ್ರದ ಸಂದೇಹ ಇದೆ’ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಕುಂಪಲ ಶನಿವಾರ ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಅವರು, ‘ಬಾಡಿಗೆ ಹಂತಕರಿಂದ ಕೃತ್ಯ ನಡೆದಿದೆ ಎಂದು ಪೊಲೀಸ್ ಕಮಿಷನರ್ ಹೇಳಿದ್ದಾರೆ. ಬಂಧಿತರಲ್ಲಿ ಇಬ್ಬರು ಹಿಂದೂಗಳ ಹೆಸರೂ ಇದೆ. ಇದು ತನಿಖೆಯ ಹಾದಿ ತಪ್ಪಿಸುವ ತಂತ್ರ ಎಂಬ ಬಲವಾದ ಶಂಕೆ ಇದೆ’ ಎಂದರು.

‘ಸುಹಾಸ್ ಕೊಲೆ ತನಿಖೆಯ ಕುರಿತು ಪತ್ರಿಕಾಗೋಷ್ಠಿ ನಡೆಸಿದ ಗೃಹಸಚಿವರು ಅದಕ್ಕೂ ಮೊದಲು ಮುಸ್ಲಿಂ ಮುಖಂಡರನ್ನು ಭೇಟಿ ಮಾಡಿದ್ದಾರೆ. ಆದರೆ ಜಿಲ್ಲೆಯ ಹಿಂದೂ ಮುಖಂಡರು, ಸಂಸದರು, ಶಾಸಕರನ್ನು ಮಾತನಾಡಿಸಲಿಲ್ಲ. ಫಾಝಿಲ್ ಕೊಲೆ ಆರೋಪಿಗಳನ್ನು ಬಂಧಿಸಿದ ನಂತರ ಮುಖ ಕಾಣಿಸುವ ಚಿತ್ರಗಳನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಗಿದೆ. ಸುಹಾಸ್ ಕೊಲೆ ಆರೋಪಿಗಳಿಗೆ ಮುಸುಕು ಹಾಕಲಾಗಿದೆ. ಈ ಪ್ರಕರಣದಲ್ಲಿ ಪೊಲೀಸರಿಗೆ ಯಾರದಾದರೂ ಭಯ ಇದೆಯೇ’ ಎಂದು ಪ್ರಶ್ನಿಸಿದರು.

‘ಸುಹಾಸ್ ಕೊಲೆಗೆ ಪೊಲೀಸರ ನಿರ್ಲಕ್ಷ್ಯವೂ ಕಾರಣ. ಸುಹಾಸ್ ಅವರನ್ನು ಮುಗಿಸುವುದಾಗಿ ತಿಂಗಳ ಹಿಂದೆಯೇ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹಾಕಲಾಗಿತ್ತು. ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಆಗ ವಿಚಾರಣೆ ನಡೆಸಿದ್ದರೆ ಈ ಕೊಲೆಯನ್ನು ತಪ್ಪಿಸಬಹುದಾಗಿತ್ತು. ಆಗ ಪೊಲೀಸರು ಸುಹಾಸ್ ಅವರನ್ನೇ ಕರೆಸಿ ತೊಂದರೆ ಕೊಟ್ಟಿದ್ದಾರೆ. ಕೊಲೆ ಆದ ನಂತರವೂ ಸಂಭ್ರಮಿಸಿ ಸ್ಟೇಟಸ್ ಹಾಕಿದವರ ಮೇಲೆ ಕ್ರಮಕೈಗೊಳ್ಳಲಿಲ್ಲ. ಸುಹಾಸ್ ಕೊಲೆಗೆ ಬಜಪೆ ಪೊಲೀಸ್ ಠಾಣೆಯ ಕೆಲವರು ಸಹಾಯ ಮಾಡಿರುವ ಸಂದೇಹ ಇದೆ. ಇಲ್ಲವಾದರೆ ಜನನಿಬಿಡ ಪ್ರದೇಶದಲ್ಲಿ ರಾಜಾರೋಷವಾಗಿ ಕೊಚ್ಚಿ ಕೊಲ್ಲಲು ಹೇಗೆ ಸಾಧ್ಯ’ ಎಂದು ಅವರು ಪ್ರಶ್ನಿಸಿದರು.

‘ಕೊಲೆ ನಡೆದಾಗ ಸ್ಥಳದಲ್ಲಿದ್ದ ಇಬ್ಬರು ಮಹಿಳೆಯರು ಯಾರು ಎಂಬುದಕ್ಕೆ ಇನ್ನೂ ಉತ್ತರ ಸಿಗಲಿಲ್ಲ. ಅವರನ್ನು ಬಂಧಿಸಲೂ ಇಲ್ಲ. ರಾಜ್ಯದ ಪೊಲೀಸರಿಂದ ನಿಷ್ಪಕ್ಷಪಾತ ತನಿಖೆ ಆಗುವ ಬಗ್ಗೆ ನಂಬಿಕೆ ಇಲ್ಲ. ತನಿಖೆಯನ್ನು ಎನ್‌ಐಎಗೆ ವಹಿಸಬೇಕು. ಕೊಲೆಗೆ ಬೆಂಬಲ ಕೊಟ್ಟವರ ವಿವರವನ್ನೂ ಬಿಡುಗಡೆ ಮಾಡಬೇಕು’ ಎಂದು ಆಗ್ರಹಿಸಿದರು.

ಖಾದರ್ ಬಣ್ಣ ಬಯಲು: ‘ಸುಹಾಸ್ ಶೆಟ್ಟಿ ಹತ್ಯೆ ಆರೋಪಿಗಳ ಬಂಧನಕ್ಕೆ ಮೊದಲೇ, ‘ಮಹಮ್ಮದ್ ಫಾಝಿಲ್ ಕುಟುಂಬದವರು ಈ ಕೃತ್ಯದಲ್ಲಿ ಭಾಗಿಯಾಗಿಲ್ಲ’ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿಕೆ ನೀಡಿದ್ದರು. ಈ ಮೂಲಕ ತಾವು ಧರ್ಮಾಂಧ ಎಂಬುದನ್ನು ಅವರು ಸಾಬೀತು ಮಾಡಿದ್ದಾರೆ’ ಎಂದು ಸತೀಶ್ ಕುಂಪಲ ದೂರಿದರು.

‘ಫಾಝಿಲ್ ಸೋದರ ಆದಿಲ್ ಮೆಹರೂಫನೇ ಸುಹಾಸ್ ಹತ್ಯೆ ಪ್ರಕರಣದ ಆರೋಪಿ ಎಂದು ಗೃಹಸಚಿವರು ಹಾಗೂ ಪೊಲೀಸ್ ಕಮಿಷನರ್ ತಿಳಿಸಿದ್ದಾರೆ. ಅದಕ್ಕೂ ಹಿಂದೆಯೇ ವಿಧಾನಸಭಾಧ್ಯಕ್ಷರೇ ಅರೋಪಿಗೆ ಕ್ಲೀನ್ ಚಿಟ್ ಕೊಟ್ಟಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಪೊಲೀಸರು ತನಿಖೆಯನ್ನು ಸರಿಯಾದ ಹಾದಿಯಲ್ಲಿ ಕೊಂಡೊಯ್ಯಲು ಹೇಗೆ ಸಾಧ್ಯ’ ಎಂದು ಕುಂಪಲ ಪ್ರಶ್ನಿಸಿದರು.

ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಾಸಕರಾದ ವೇದವ್ಯಾಸ ಕಾಮತ್, ಹರೀಶ್ ಪೂಂಜ, ರಾಜೇಶ್ ನಾಯಕ್ ಉಳಿಪಾಡಿಗುತ್ತು, ಡಾ.ಭರತ್ ಶೆಟ್ಟಿ, ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ ಪತ್ರಿಕಾಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

‘ಕೋಮು ಹಿಂಸೆ ನಿಗ್ರಹ ಕಾರ್ಯಪಡೆ’ ರಚಿಸುವುದಾಗಿ ಗೃಹಸಚಿವರು ತಿಳಿಸಿದ್ದಾರೆ. ಇದು ಹಿಂದೂಗಳ ನಿಗ್ರಹ ಪಡೆ ಆಗುವ ಸಾಧ್ಯತೆ ಹೆಚ್ಚು

ಸತೀಶ್ ಕುಂಪಲ
ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ

ಯು.ಟಿ.ಖಾದರ್ ತನಿಖೆಯ ದಿಕ್ಕು ತಪ್ಪಿಸುವ ಕುತಂತ್ರ ಮಾಡುತ್ತಿದ್ದಾರೆ. ಹೀಗಾಗಿ, ನಿಷ್ಪಕ್ಷಪಾತ ತನಿಖೆಗಾಗಿ ಅವರು ವಿಧಾನಸಭಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕು

ಡಾ.ವೈ.ಭರತ್ ಶೆಟ್ಟಿ
ಶಾಸಕ

ಚೂರಿ ಇರಿತ, ಬಸ್‌ಗೆ ಕಲ್ಲು: 11 ಜನರ ಬಂಧನ

ಮಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಗುರುವಾರ ತಡರಾತ್ರಿ ಮತ್ತು ಶುಕ್ರವಾರ ನಸುಕಿನಲ್ಲಿ ನಡೆದಿದ್ದ ಮೂರು ಚೂರಿ ಇರಿತ, ಹಲ್ಲೆ, ಬಸ್‌ಗಳಿಗೆ ಕಲ್ಲು ತೂರಿದ ಪ್ರಕರಣಗಳಲ್ಲಿ ಒಟ್ಟು 11 ಆರೋಪಿಗಳನ್ನು ಬಂಧಿಸಲಾಗಿದೆ.

ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ಸುದ್ದಿ ಸ್ಥಳೀಯ ಯುಟ್ಯೂಬ್ ಚಾನಲ್‌ನಲ್ಲಿ ಲೈವ್ ಬರುತ್ತಿದ್ದಾಗ ಪ್ರಚೋದನಕಾರಿಯಾಗಿ ಕಮೆಂಟ್ ಮಾಡಿದ ಯುವಕನನ್ನು ಪತ್ತೆ ಹಚ್ಚಿದ್ದು, ಆತನಿಗೆ ನೋಟಿಸ್ ಜಾರಿಮಾಡಲಾಗಿದೆ ಎಂದು ಪೊಲೀಸ್ ಕಮಿಷನರ್ ತಿಳಿಸಿದ್ದಾರೆ.

384 ಹುದ್ದೆಗಳ ನೇಮಕಾತಿ ಮುಖ್ಯ ಪರೀಕ್ಷೆ

ಕೊನೆ ಕ್ಷಣದವರೆಗೂ ಪ್ರವೇಶ ಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ ‘ಎ’ ಮತ್ತು ಗ್ರೂಪ್ ‘ಬಿ’ ವೃಂದದ 384 ಹುದ್ದೆಗಳ ನೇಮಕಾತಿಗೆ ಆರಂಭವಾದ ಮುಖ್ಯಪರೀಕ್ಷೆಗೆ ಹಾಜರಾಗಲು ಕೋರ್ಟ್ ಅನುಮತಿ ಪಡೆದ ಅಭ್ಯರ್ಥಿಗಳಿಗೆ ಕರ್ನಾಟಕ ಲೋಕಸೇವಾ ಆಯೋಗ ಪರೀಕ್ಷಾ ಕೇಂದ್ರದ ಬಳಿಯೂ ಪ್ರವೇಶ ಪತ್ರ ನೀಡಿತು.

ಪೂರ್ವಭಾವಿ ಪರೀಕ್ಷೆಯಲ್ಲಿ ಅರ್ಹತೆ ಪಡೆಯದಿದ್ದರೂ ಮುಖ್ಯಪರೀಕ್ಷೆ ಬರೆಯಲು 500ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ಕೋರ್ಟ್ ಅನುಮತಿ ನೀಡಿದ್ದು, ಅನುಮತಿ ಪಡೆದ ಅಭ್ಯರ್ಥಿಗಳಿಗೆ ಬೆಂಗಳೂರಿನ ಮೈಸೂರು ರಸ್ತೆಯ ಕಸ್ತೂರಬಾ ನಗರದ ಬಿಬಿಎಂಪಿ ಸಂಯೋಜಿತ ಪಿಯು ಕಾಲೇಜಿನಲ್ಲಿ ಪರೀಕ್ಷೆ ಆಯೋಜಿಸಲಾಗಿತ್ತು.

ಮುಖ್ಯ ಪರೀಕ್ಷೆ ಬರೆಯಲು ಕೋರ್ಟ್‌ನಿಂದ ಶುಕ್ರವಾರ ಅನುಮತಿ ಪಡೆದುಕೊಂಡಿದ್ದ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಶುಕ್ರವಾರ ರಾತ್ರಿಯವರೆಗೂ ಶುಲ್ಕ ಪಾವತಿಸಿದರು. ಅವರಿಗೆ ಕೆಪಿಎಸ್‌ಸಿ ಕಚೇರಿಯಲ್ಲಿ ತಡರಾತ್ರಿವರೆಗೂ ಪ್ರವೇಶ ಪತ್ರ ನೀಡಲಾಗಿತ್ತು. ರಾತ್ರಿ ಪಡೆಯಲು ಸಾಧ್ಯವಾಗದವರಿಗೆ ಬೆಳಿಗ್ಗೆ ಪರೀಕ್ಷಾ ಕೇಂದ್ರದಲ್ಲೇ ವಿತರಿಸಲಾಯಿತು.

ಕಡ್ಡಾಯ ಕನ್ನಡ ಬೆಳಿಗ್ಗೆ 10ರಿಂದ 12ರವರೆಗೆ, ಕಡ್ಡಾಯ ಇಂಗ್ಲಿಷ್ ಮಧ್ಯಾಹ್ನ 2ರಿಂದ 4ರವರೆಗೆ ನಡೆಯಿತು.

‘ಕೋರ್ಟ್ ಅಂತಿಮ ಕ್ಷಣದಲ್ಲಿ ಆದೇಶ ನೀಡಿದ ಕಾರಣ ತಡರಾತ್ರಿವರೆಗೂ ಕೆಲಸ ಮಾಡಿದೆವು. ಎಲ್ಲರಿಗೂ ಅವಕಾಶ ನೀಡಿದೆವು. ಈ ಪ್ರಕ್ರಿಯೆ ಸಾಕಷ್ಟು ಟೀಕೆಗಳಿಗೆ ಕಾರಣವಾಯಿತು. ಆದರೆ, ಕೋರ್ಟ್ ಆದೇಶ ಪಾಲನೆ ಅನಿವಾರ್ಯವಾಗಿತ್ತು’ ಎಂದು ಕೆಪಿಎಸ್‌ಸಿ ಅಧಿಕಾರಿಯೊಬ್ಬರು ಹೇಳಿದರು.

ಅಭ್ಯರ್ಥಿಗಳ ಆಕ್ರೋಶ: ಮುಖ್ಯ ಪರೀಕ್ಷೆಯ ಪ್ರವೇಶ ಪತ್ರ ಪಡೆಯಲು ಹಲವು ಅಭ್ಯರ್ಥಿಗಳು ಕೆಪಿಎಸ್‌ಸಿ ಕಚೇರಿ ಬಳಿ ರಾತ್ರಿ 12.30ರವರೆಗೂ ಪರದಾಟ ನಡೆಸಿದ್ದಾರೆ. ದೂರದ ಊರುಗಳಿಂದ ತಡರಾತ್ರಿ ಬಂದಿದ್ದ ಮಹಿಳಾ ಅಭ್ಯರ್ಥಿಗಳು, ಅಂಗವಿಕಲರು ಪ್ರವೇಶ ಪತ್ರ ಸಿಗದ ಕಾರಣ ತೊಂದರೆ ಅನುಭವಿಸಿದರು.

‘ಕೋರ್ಟ್ ಬೆಳಿಗ್ಗೆಯೇ ತೀರ್ಪು ನೀಡಿದ್ದರೂ ಕೆಪಿಎಸ್‌ಸಿ ರಾತ್ರಿ 12ಕ್ಕೆ ಅರ್ಜಿ ಬಿಡುಗಡೆ ಮಾಡಿದೆ. ಬೆಂಗಳೂರಿನಲ್ಲೇ ಪ್ರತ್ಯೇಕ ಪರೀಕ್ಷಾ ಕೇಂದ್ರ ತೆರೆದಿದೆ. ಮಹಿಳೆಯರು ಅಷ್ಟು ಸಮಯದಲ್ಲಿ ಬಂದು ಹೇಗೆ ಪ್ರವೇಶ ಪತ್ರ ಪಡೆಯಬೇಕು. ಕೆಲವರು ತಡರಾತ್ರಿ ಬಂದರೂ ಅವರಿಗೆ ನೀಡದೆ, ಪರೀಕ್ಷಾ ಕೇಂದ್ರದ ಬಳಿ ನೀಡುವುದಾಗಿ ವಾಪಸ್ ಕಳುಹಿಸಿದರು’ ಎಂದು ಮಹಿಳಾ ಅಭ್ಯರ್ಥಿಯೊಬ್ಬರು ಅಳಲು ತೋಡಿಕೊಂಡರು.

ಸಾಮಾನ್ಯ ಅಧ್ಯಯನ ಪರೀಕ್ಷೆ ನಾಳೆ

ಮೇ 5ರಂದು ಬೆಳಿಗ್ಗೆ 10ರಿಂದ 1, ಸಾಮಾನ್ಯ ಅಧ್ಯಯನ- 1; ಮೇ 7ರಂದು ಬೆಳಿಗ್ಗೆ 9ರಿಂದ 12, ಸಾಮಾನ್ಯ ಅಧ್ಯಯನ-2; ಮೇ 7ರಂದು ಮಧ್ಯಾಹ್ನ 2ರಿಂದ 5, ಸಾಮಾನ್ಯ ಅಧ್ಯಯನ-3; ಮೇ 9ರಂದು ಬೆಳಿಗ್ಗೆ 9ರಿಂದ 12, ಸಾಮಾನ್ಯ ಅಧ್ಯಯನ-4; ಮೇ 9ರಂದು ಮಧ್ಯಾಹ್ನ 2 ಗಂಟೆಯಿಂದ 5 ಗಂಟೆಯವರೆಗೆ ನಡೆಯಲಿದೆ.

ಗುಂಡು ತಗುಲಿ ಮೃತಪಟ್ಟ 21 ದಿನದ ಬಳಿಕ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಐದು ವರ್ಷದ ಬಾಲಕಿಯ ಮೇಲೆ ದೌರ್ಜನ್ಯವೆಸಗಿ ಕೊಲೆ ಮಾಡಿದ್ದ ಪ್ರಕರಣದ ಆರೋಪಿ ರಿತೇಶಕುಮಾರ್ ಶವದ ಅಂತ್ಯಕ್ರಿಯೆ ಶನಿವಾರ ನಗರದ ಬಿಡ್ನಾಳದ ಸ್ಮಶಾನದಲ್ಲಿ ನಡೆಯಿತು.

‘ಕೆಎಂಸಿ–ಆರ್‌ಐ ಶವಾಗಾರದ ಫ್ರೀಜರ್‌ನಲ್ಲಿ 21 ದಿನದಿಂದ ಇಡಲಾಗಿದ್ದ ಶವ ಕೊಳೆಯುವ ಸ್ಥಿತಿಗೆ ತಲುಪಿತ್ತು. ಆದಷ್ಟು ಬೇಗ ಅಂತ್ಯಕ್ರಿಯೆ ಮಾಡಡಲು ವೈದ್ಯರು ಹಾಗೂ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಪೊಲೀಸರಿಗೆ ವರದಿ ಸಲ್ಲಿಸಿದ್ದರು’ ಎಂದು ಕೆಎಂಸಿ–ಆರ್‌ಐ ನಿರ್ದೇಶಕ ಎಸ್.ಎಫ್. ಕಮ್ಮಾರ್ ತಿಳಿಸಿದ್ದಾರೆ.

ಏಪ್ರಿಲ್ 13ರಂದು ಬಾಲಕಿಗೆ ಚಾಕೊಲೇಟ್ ಆಸೆ ತೋರಿಸಿ, ದೌರ್ಜನ್ಯ ಎಸಗಿ ಕೊಲೆ ಮಾಡಿದ್ದ ಆರೋಪದಡಿ ರಿತೇಶಕುಮಾರ್ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿತ್ತು. ವಶದಲ್ಲಿದ್ದಾಗ ಪೊಲೀಸರ ಮೇಲೆ ಹಲ್ಲೆ ನಡೆಸಿ, ಪರಾರಿಯಾಗಲು ಯತ್ನಿಸಿದ್ದ. ಆತ್ಮ-ರಕ್ಷಣೆಗೆ ಪೊಲೀಸರು ಹಾರಿಸಿದ ಗುಂಡು ತಗುಲಿ ಮೃತಪಟ್ಟಿದ್ದ. ಇದನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿತ್ತು. ‘ಶವ ಪ್ರಮುಖ ಸಾಕ್ಷ್ಯ. ಇದರ ನಾಶಕ್ಕೆ ಅವಕಾಶ ನೀಡಬಾರದು’ ಎಂದು ಕೋರಲಾಗಿತ್ತು.

‘ಸಾಕಷ್ಟು ಸಾಕ್ಷ್ಯ ಸಂಗ್ರಹಿಸಿದ್ದು, ಶವವನ್ನು ಸುಡುವುದಿಲ್ಲ, ಮಣ್ಣು ಮಾಡಲಾಗುವುದು’ ಎಂದು ಸರ್ಕಾರವು ತಿಳಿಸಿತ್ತು. ಅಧಿಕಾರಿಗಳ ಸಮ್ಮುಖದಲ್ಲಿ ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಶವವನ್ನು ಮಣ್ಣು ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪತ್ತೆಯಾಗದ ವಾರಸ್ದಾರರು: ರಿತೇಶಕುಮಾರ್ ಸಂಬಂಧಿಕರ ಪತ್ತೆಗೆ ಪೊಲೀಸರು ಬಿಹಾರಕ್ಕೆ ತೆರಳಿದ್ದರು. ಉತ್ತರ ಪ್ರದೇಶ, ಮಧ್ಯಪ್ರದೇಶ, ಜಾರ್ಖಂಡ ಮತ್ತು ಸುತ್ತಮುತ್ತಲಿನ ರಾಜ್ಯಗಳಿಗೂ ಭೇಟಿ ನೀಡಿದ್ದರು. ಯಾರೂ ಸಿಗಲಿಲ್ಲ.

ಸೋನು ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿಮಾನಿಯೊಬ್ಬರ ಕನ್ನಡಾಭಿಮಾನವನ್ನು ಪಹಲ್ಗಾಮ್ ಘಟನೆಗೆ ಹೋಲಿಕೆ ಮಾಡಿದ ಘಟನೆಗೆ ಸಂಬಂಧಿಸಿದಂತೆ ಬಾಲಿವುಡ್ ಗಾಯಕ ಸೋನು ನಿಗಮ್ ವಿರುದ್ಧ ಆವಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ನಗರ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಎ.ಧರ್ಮರಾಜ ಅವರ ದೂರು ಆಧರಿಸಿ, ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 351(2)(ಕ್ರಿಮಿನಲ್ ಬೆದರಿಕೆ), 353 (ಸಾರ್ವಜನಿಕವಾಗಿ ಕಿರಿಕಿರಿ ಉಂಟು ಮಾಡುವ ಹೇಳಿಕೆಗಳು), 352(1)(ಉದ್ದೇಶ ಪೂರ್ವಕವಾಗಿ ಅವಮಾನ) ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ .

‘ಸೋನು ನಿಗಮ್ ಅವರು ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿಯಲ್ಲಿ ಏಪ್ರಿಲ್ 25 ಮತ್ತು 26 ರಂದು ನಡೆದ ಸಂಗೀತ ಕಾರ್ಯಕ್ರಮದಲ್ಲಿ ಆಕ್ಷೇಪಾರ್ಹ ಮತ್ತು ಭಾವನೆಗಳನ್ನು ಕೆರಳಿಸುವ ಹೇಳಿಕೆ ನೀಡಿದ್ದಾರೆ. ಅವರ ಹೇಳಿಕೆಗಳು ವಿಡಿಯೊದಲ್ಲಿ ದಾಖಲಾಗಿದ್ದು, ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಕನ್ನಡಗರಿಗೆ ಅವಮಾನ ಮಾಡಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಧರ್ಮರಾಜ ಒತ್ತಾಯಿಸಿದ್ದರು.

ಖಾಸಗಿ ಸಂಸ್ಥೆಯೊಂದು ಆಯೋಜಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಸೋನು ನಿಗಮ್ ಕನ್ನಡ ಕುರಿತು ಆಡಿದ ಮಾತು ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಯುವಕನೊಬ್ಬ ಕನ್ನಡ ಹಾಡಿಗಾಗಿ ಒತ್ತಾಯ ಮಾಡಿದಾಗ ಅದನ್ನು ಪಹಲ್ಗಾಮ್ ದಾಳಿಗೆ ತಳಕು ಹಾಕಿ ಗಾಯಕ ಮಾತನಾಡಿರುವುದು ಆಕ್ರೋಶಕ್ಕೆ ಕಾರಣವಾಗಿದೆ.

‘ಬೇಡಿಕೆಯಿಡಲಿಲ್ಲ, ಬೆದರಿಸಿದರು’

‘ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕನ್ನಡ ಹಾಡು ಹೇಳುವಂತೆ ನನಗೆ ಒತ್ತಾಯಿಸಿದ್ದಲ್ಲ. ಅವರ ವರ್ತನೆಯು ಬೆದರಿಸುವ ರೀತಿಯಲ್ಲಿತ್ತು’ ಎಂದು ಗಾಯಕ ಸೋನು ನಿಗಮ್ ಹೇಳಿದ್ದಾರೆ.

ವಿವಾದದ ಬಗ್ಗೆ ಶನಿವಾರ ಇನ್‌ಸ್ಟಾಗ್ರಾಂ ಖಾತೆಯಲ್ಲಿ ವಿಡಿಯೊ ಪೋಸ್ಟ್ ಮಾಡಿರುವ ಅವರು, ‘ಕನ್ನಡ... ಕನ್ನಡ... ಎಂದು ಕೂಗುತ್ತಿದ್ದ ಆ ನಾಲ್ಕೈದು ಮಂದಿ ಗೂಂಡಾಗಳಂತಿದ್ದರು. ಕಾರ್ಯಕ್ರಮಕ್ಕೆ ಅಡ್ಡಿಪಡಿಸಬೇಡಿ ಎಂದು ಹಲವರು ಅವರನ್ನು ತಡೆಯಲು ಪ್ರಯತ್ನಿಸಿದ್ದಾರೆ. ಪಹಲ್ಗಾಮ್ ದಾಳಿಯ ಸಮಯದಲ್ಲಿ ಉಗ್ರರು ಅಲ್ಲಿದ್ದ ಜನರ ಭಾಷೆ ಕೇಳಲಿಲ್ಲ ಎಂಬುದನ್ನು ನಾಲ್ಕೈದು ಮಂದಿಗೆ ನೆನಪಿಸಬೇಕಾಗಿತ್ತು, ಕನ್ನಡಿಗರು ತುಂಬಾ ಒಳ್ಳೆಯ ಜನರು’ ಎಂದಿದ್ದಾರೆ.

‘ಕನ್ನಡ ಹಾಡು ಹೇಳುವಂತೆ ಅವರು ಬೇಡಿಕೆಯಿಡಲಿಲ್ಲ, ಬದಲು ಬೆದರಿಕೆ ಹಾಕಿದ್ದಾರೆ. ಆ ರೀತಿ ಬೆದರಿಕೆ ಹಾಕಲು ಅವಕಾಶ ನೀಡುವುದಿಲ್ಲ ಎಂದು ಅವರಿಗೆ ಗೊತ್ತುಪಡಿಸುವುದು ಮುಖ್ಯವಾಗಿದೆ. ಪ್ರೀತಿಯ ಭೂಮಿಯಲ್ಲಿ ದ್ವೇಷದ ಬೀಜಗಳನ್ನು ಬಿತ್ತುವ ಜನರು ನಿಮ್ಮ ಸುತ್ತಮುತ್ತ ಇರಬಾರದು’ ಎಂದು ಹೇಳಿದ್ದಾರೆ.

ದಾವಣಗೆರೆ, ಬಳ್ಳಾರಿ, ಶಿವಮೊಗ್ಗದ ವಿವಿಧೆಡೆ ಗುಡುಗು ಸಹಿತ, ಜೋರು ಮಳೆ

ಮಳೆ: ಕೃಷಿಗೆ ಪೂರಕ, ರೈತರ ಸಂತಸ

ಪ್ರಜಾವಾಣಿ ವಾರ್ತೆ



ದಾವಣಗೆರೆ ಜಿಲ್ಲೆ ಕಡರನಾಯ್ಕನಹಳ್ಳಿಯಲ್ಲಿ ಅಡಿಕೆ ತೋಟದಲ್ಲಿ ಮಳೆ ನೀರು ನಿಂತಿರುವುದು

ದಾವಣಗೆರೆ/ಬಳ್ಳಾರಿ: ರಾಜ್ಯದಲ್ಲಿ ದಾವಣಗೆರೆ, ಬಳ್ಳಾರಿ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಯ ವಿವಿಧೆಡೆ ಶನಿವಾರ ಉತ್ತಮ ಮಳೆಯಾಗಿದೆ.

ದಾವಣಗೆರೆ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಶನಿವಾರ ನಸುಕಿನಿಂದ ಸಿಡಿಲು–ಗುಡುಗು ಬಿರುಗಾಳಿ ಸಹಿತ ಭಾರಿ ಮಳೆ ಸುರಿಯಿತು. ತೋಟಗಾರಿಕೆ ಬೆಳೆಗಳಿಗೆ ಅನುಕೂಲವಾಗಿದ್ದು, ಕಟಾವು ಹಂತದ ಭತ್ತದ ಬೆಳೆ ನಷ್ಟವಾಗಿದೆ.

ತಡರಾತ್ರಿ 2.30ರ ವೇಳೆಗೆ ಆರಂಭವಾದ ಮಳೆ ಬೆಳಿಗ್ಗೆ 8 ಗಂಟೆವರೆಗೂ ಸಾಧಾರಣವಾಗಿ ಸುರಿಯಿತು. ಶನಿವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ ಜಿಲ್ಲೆಯಲ್ಲಿ ಸರಾಸರಿ 3 ಸೆಂ.ಮೀ. ಮಳೆ ಸುರಿದಿದೆ.

ಜಿಲ್ಲೆಯ ನ್ಯಾಮತಿ, ಹೊನ್ನಾಳಿ, ಮಾಯಕೊಂಡ, ಸಂತೇಬೆನ್ನೂರು, ಕಡರನಾಯ್ಕನಹಳ್ಳಿ ಸೇರಿದಂತೆ ಹಲವೆಡೆ ಮಳೆಯಾಗಿದ್ದು, ಕೆಲವೆಡೆ ತೋಟಗಾರಿಕೆ ಬೆಳೆಗಳು, ಭತ್ತದ ಬೆಳೆಗೂ ಹಾನಿಯಾಗಿದೆ. ಬಸವಾಪಟ್ಟಣದಲ್ಲಿ ಕೆಲ ವಿದ್ಯುತ್ ಕಂಬಗಳು ಉರುಳಿವೆ.

ಶಿವಮೊಗ್ಗ ವರದಿ: ಶಿವಮೊಗ್ಗ ನಗರ ಮಾತ್ರವಲ್ಲದೆ ಜಿಲ್ಲೆಯ ಸಾಗರ, ತುಮರಿ, ಹೊಸನಗರ, ರಿಪ್ಪನ್‌ಪೇಟೆ ಭಾಗದಲ್ಲಿ ಬೆಳಗಿನ ಜಾವ ಶೀತಗಾಳಿ, ಗುಡುಗು ಸಹಿತ ಮಳೆ ಸುರಿದಿದೆ. ಮಳೆಯಿಂದ ಸೆಕೆಯ ಬಿಸುಪು ತಗ್ಗಿತು.

ಮಳೆ ಸುರಿದ ಕಾರಣ ಅಡಿಕೆ ತೋಟಗಳಿಗೆ ನೀರಿನ ಲಭ್ಯತೆ ಜೊತೆಗೆ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳಿಗೆ ನೆಲ ಹದ ಮಾಡಿಕೊಳ್ಳಲು ಅನುಕೂಲವಾಗಿದ್ದು, ರೈತಾಪಿ ವರ್ಗದ ಸಂತಸಕ್ಕೆ ಕಾರಣವಾಗಿದೆ.

ಚಿತ್ರದುರ್ಗ ವರದಿ: ಜಿಲ್ಲೆಯ ಮೊಳಕಾಲ್ಮುರು ತಾಲ್ಲೂಕಿನ ವಿವಿಧೆಡೆ, ರಾಯಪುರ, ಬಿ.ಜಿ.ಕೆರೆ, ರಾಂಪುರ, ದೇವಸಮುದ್ರ ಭಾಗದಲ್ಲಿ ಹದ ಮಳೆಯಾಗಿದೆ. ಹಿರಿಯೂರು, ಚಳ್ಳಕೆರೆ, ಹೊಸದುರ್ಗ ತಾಲ್ಲೂಕುಗಳಲ್ಲೂ ಸಾಧಾರಣ ಮಳೆ ಸುರಿಯಿತು.

ಬಳ್ಳಾರಿ/ಹೊಸಪೇಟೆ ವರದಿ: ಬಳ್ಳಾರಿ, ವಿಜಯನಗರ ಜಿಲ್ಲೆಯ ವಿವಿಧೆಡೆ ಶನಿವಾರ ಬೆಳಗಿನ ಜಾವದವರೆಗೆ ಧಾರಾಕಾರ ಮಳೆ ಸುರಿಯಿತು.

ಬಳ್ಳಾರಿ ಜಿಲ್ಲೆಯ ಕಂಪ್ಲಿ, ಕುರುಗೋಡು, ಸಿರುಗುಪ್ಪ ಮತ್ತು ಸಂಡೂರು ವ್ಯಾಪ್ತಿ ಹಾಗೂ ವಿಜಯನಗರ ಜಿಲ್ಲೆಯ ಹೊಸಪೇಟೆ, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದೆ.

ಚಿಕ್ಕಮಗಳೂರು ವರದಿ: ನಗರದಲ್ಲಿ ಶನಿವಾರ ಸಂಜೆ ಗುಡುಗು ಸಿಡಿಲು ಸಹಿತ ಮಳೆ ಅಬ್ಬರಿಸಿತು. ಅರ್ಧ ಗಂಟೆಗೂ ಹೆಚ್ಚು ಕಾಲ ಆಲಿಕಲ್ಲು ಸಹಿತ ಸುರಿದ ಮಳೆಯಿಂದಾಗಿ ಪ್ರಮುಖ ರಸ್ತೆಗಳು ಜಲಾವೃತಗೊಂಡವು.

ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ನಗರದ ರಸ್ತೆಗಳು ನದಿಯಂತಾಗಿದ್ದು, ವಾಹನ ಸವಾರರು ಪರದಾಡಿದರು.

‘ಮಾಹಿತಿ ನೀಡದೇ ಕ್ಷೇತ್ರಕ್ಕೆ ಬರಬೇಡಿ’

ಸಚಿವರಿಗೆ ಏರುಧ್ವನಿಯಲ್ಲಿ ‘ಕೈ’ ಕಾರ್ಯಕರ್ತನ ಆಗ್ರಹ

ಪ್ರಜಾವಾಣಿ ವಾರ್ತೆ



ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಕಾಂಗ್ರೆಸ್ ಕಾರ್ಯಕರ್ತನ ನಡುವೆ ವಾಗ್ವಾದ ನಡೆಯಿತು

ಲಿಂಗಸುಗೂರು (ರಾಯಚೂರು ಜಿಲ್ಲೆ): ‘ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಗಮನಕ್ಕೆ ತರದೇ ಕ್ಷೇತ್ರಕ್ಕೆ ಬರುತ್ತೀರಿ ಅಂದರೆ ಪಕ್ಷಕ್ಕೆ ಏನು ಬೆಲೆ ಉಳಿತು?’ ಎಂದು ಕಾರ್ಯಕರ್ತರೊಬ್ಬರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರನ್ನು ಇಲ್ಲಿ ಪ್ರಶ್ನಿಸಿದರು.

ಕಾರ್ಯಕರ್ತರೊಬ್ಬರ ಏರುಧ್ವನಿಯಲ್ಲಿ ಹೀಗೆ ಪ್ರಶ್ನಿಸಿದಾಗ ಸಚಿವರು ಕಸಿವಿಸಿಗೊಂಡರು.

ಉಟಗನೂರು ಗ್ರಾಮದಲ್ಲಿ ಧಾರ್ಮಿಕ ಕಾರ್ಯಕ್ರಮಕ್ಕಾಗಿ ಕಲಬುರಗಿಯಿಂದ ಬರುತ್ತಿದ್ದಾಗ ಮಾರ್ಗಮಧ್ಯೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕೆಲಹೊತ್ತು ವಿಶ್ರಾಂತಿ ಪಡೆದ ಸಚಿವರು ಹೊರಡುವಾಗ ಈ ಘಟನೆ ನಡೆಯಿತು.

‘ಬ್ಲಾಕ್ ಅಧ್ಯಕ್ಷರು, ಕಾರ್ಯಕರ್ತರಿಗೆ ಮಾಹಿತಿ ನೀಡದೇ ಏಕೆ ಬಂದಿದ್ದೀರಿ? ಇನ್ಮೇಲೆ ಕ್ಷೇತ್ರಕ್ಕೆ ಬರಬೇಕಾದರೆ ಬ್ಲಾಕ್ ಅಧ್ಯಕ್ಷರು ಹಾಗೂ ಕಾರ್ಯಕರ್ತರ ಗಮನಕ್ಕೆ ತಂದೇ ಬರಬೇಕು. ಇಲ್ಲದಿದ್ದರೆ ಇಲ್ಲಿಗೆ ಬರಲೇಬೇಡಿ’ ಎಂದು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ತಾಲ್ಲೂಕು ಸಮಿತಿ ಸದಸ್ಯ ಹಾಗೂ ಕಾಂಗ್ರೆಸ್ ಕಾರ್ಯಕರ್ತ ಗದ್ದೆನಗೌಡ ಪಾಟೀಲ ಏರುಧ್ವನಿಯಲ್ಲಿ ಆಕ್ಷೇಪಿಸಿದರು.

ಇದರಿಂದ ಸಿಡಿಮಿಡಿಗೊಂಡ ಸಚಿವರು, ‘ನೀನು ಯಾರಯ್ಯ ಕೇಳೋಕೆ? ಇದು ಪಕ್ಷದ ಕಚೇರಿಯಲ್ಲ, ಪ್ರವಾಸಿ ಮಂದಿರ. ಗೌರವದಿಂದ ಮಾತಾಡೋದನ್ನು ಕಲಿ’ ಎಂದು ಗದರಿಸಿದರು. ಕೆಲ ಸಮಯ ಇಬ್ಬರ ನಡುವೆ ವಾಗ್ವಾದ ನಡೆಯಿತು.

ಡಿವೈಎಸ್ಪಿ ದತ್ತಾತ್ರೇಯ ಕರ್ನಾಡ್ ಅವರು ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಗೋಮಾಂಸ ವಶ

ವಡೋದರಾ (ಪಿಟಿಐ): ಮುಂಬೈಗೆ ಹೋಗಬೇಕಿದ್ದ ಎಕ್ಸ್‌ಪ್ರೆಸ್ ರೈಲಿನ ಪಾರ್ಸೆಲ್ ಬೋಗಿಯಲ್ಲಿದ್ದ 1,283 ಕೆ.ಜಿ ಗೋಮಾಂಸವನ್ನು ನಗರದ ರೈಲು ನಿಲ್ದಾಣದಲ್ಲಿ ಗುಜರಾತ್ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಬುಧವಾರ ಸಂಜೆ ಗೋಲ್ಡನ್ ಟೆಂಪಲ್ ಎಕ್ಸ್‌ಪ್ರೆಸ್‌ನಲ್ಲಿ ವಶಕ್ಕೆ ಪಡೆದಿದ್ದು, ಇದಕ್ಕೆ ಸಂಬಂಧಿಸಿದಂತೆ ಇಬ್ಬರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಪಂಜಾಬ್‌ನ ಅಮೃತಸರದಿಂದ ಸಾಗಿಸುತ್ತಿದ್ದ 1,283 ಕೆ.ಜಿ ಮಾಂಸವನ್ನು ವಶಪಡಿಸಿಕೊಳ್ಳಲಾಯಿತು. ನಂತರ ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಯಿತು. ವರದಿಯಲ್ಲಿ ಗೋಮಾಂಸ ಎಂಬುದು ದೃಢಪಟ್ಟ ಬಳಿಕ ಇಬ್ಬರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪಶ್ಚಿಮ ರೈಲ್ವೆಯ ವಡೋದರಾ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿ ಸರೋಜ್ ಕುಮಾರಿ ಮಾಹಿತಿ ನೀಡಿದ್ದಾರೆ.

ಗೋಮಾಂಸ ಕಳುಹಿಸಿದ್ದ ಹಾಗೂ ಅದನ್ನು ಪಡೆಯಬೇಕಿದ್ದ ವಿಜಯ್ ಸಿಂಗ್ ಹಾಗೂ ಜಾಫರ್ ಶಬೀರ್ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು, ಇವರ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಸರೋಜ್ ತಿಳಿಸಿದ್ದಾರೆ.



ಕೃಷಿಯೆಡೆಗೆ ಮಠದ ನಡಿಗೆ
9


ಬಂಗಾರದ ಹೊಸ್ತಿಲಲ್ಲಿ ಕಾಂತಾವರ ಕನ್ನಡ ಸಂಘ
10


ಮಾಚು ಪಿಚುವಿಗೆ ಮನಸೋತಾಗ...
11

ಹಾರುವ ಹಕ್ಕಿಗೆ ಗೂಡು ಕಟ್ಟುವ ನಿತ್ಯಾನಂದ

ಇವರು ಹಕ್ಕಿಗಳ ಮೇಲಿನ ಪ್ರೀತಿಯಿಂದಾಗಿಯೇ ಉದ್ಯೋಗ ತೊರೆದರು. ಊರಿಗೆ ಬಂದು ತೋಟ ಮಾಡಿ ಪಕ್ಷಿಗಳ ಮೆಚ್ಚಿನ ತಾಣವನ್ನಾಗಿಸಿದರು. 'ಗುಬ್ಬಚ್ಚಿ ಗೂಡು' ಸಂಸ್ಥೆ ಕಟ್ಟಿ ಶಾಲಾ ಮಕ್ಕಳಲ್ಲಿ ಅರಿವು ಮೂಡಿಸುತ್ತಿದ್ದಾರೆ.


ಮಣ್ಣಿನಿಂದ ತಯಾರಿಸಿದ ಹಕ್ಕಿ ಗೂಡು ಕಟ್ಟುತ್ತಿರುವ ನಿತ್ಯಾನಂದ ಶೆಟ್ಟಿ

ಪ.ರಾಮಕೃಷ್ಣ ಶಾಸ್ತ್ರಿ

ನಿತ್ಯಾನಂದ ಶೆಟ್ಟಿ, ಅವರ ಪತ್ನಿ ರಮ್ಯಾ ದಶಕದಿಂದಲೂ ಹಕ್ಕಿಗಳಿಗೆ ನೀರಿಡುವ, ಕಾಳು ಕೊಡುವ, ಮೊಟ್ಟೆಯಿಡಲು ಗೂಡು ನಿರ್ಮಿಸುವ ಕಾಯಕದಲ್ಲಿ ತೊಡಗಿದ್ದಾರೆ. ಸರ್ಕಾರಿ ಶಾಲೆಗಳಿಗೆ ತೆರಳಿ ಮಕ್ಕಳಲ್ಲಿ ಪಕ್ಷಿ ಸಂರಕ್ಷಣೆಯ ಆಶಯವನ್ನು ಬಿತ್ತುವುದು, ತಮ್ಮದೇ ಖರ್ಚಿನಲ್ಲಿ ಕಾಳು ನೀಡುವುದು, ನೀರಿಡಲು ಮಣ್ಣಿನ ಪಾತ್ರೆಗಳನ್ನು ಕೊಡುವುದು, ಮೊಟ್ಟೆಯಿಡಲು ಮಣ್ಣಿನಗೂಡುಗಳನ್ನು ನೀಡುವುದನ್ನು ಮಾಡುತ್ತಿದ್ದಾರೆ. ನಿಸರ್ಗದಲ್ಲಿ ಸಸ್ಯ ಸಂರಕ್ಷಣೆಗೆ ಪೂರಕವಾಗಿರುವ ಪಕ್ಷಿ ಸಂಕುಲದ ರಕ್ಷಣೆಯ ಕಾಳಜಿ ಇವರದು. ಅದಕ್ಕೆಂದೇ 'ಗುಬ್ಬಚ್ಚಿ ಗೂಡು' ಸಂಸ್ಥೆಯನ್ನು ಕಟ್ಟಿದ್ದಾರೆ.

ನಿತ್ಯಾನಂದ ಶೆಟ್ಟಿ, ಬಂಟ್ವಾಳ ತಾಲ್ಲೂಕಿನ ಬದ್ಯಾರು ಗ್ರಾಮದವರು. ಅರ್ಥಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಕಂಪನಿಯೊಂದರಲ್ಲಿ ಉದ್ಯೋಗ ಮಾಡುತ್ತಿದ್ದರು. ಆದರೆ ಹಕ್ಕಿಗಳ ಮೇಲಿನ ಅಕ್ಕರೆಗಾಗಿ ಉದ್ಯೋಗ ಬಿಟ್ಟ ಬಂದು ಕೃಷಿ ಕಾಯಕದಲ್ಲಿ ತೊಡಗಿಕೊಂಡರು.

ಅಮ್ಮ ಸುಮತಿ ಬಾಲ್ಯದಲ್ಲೇ ಕಲಿಸಿದ್ದ ಪಕ್ಷಿ ರಕ್ಷಣೆಯ ಪಾಠ ಮನಸ್ಸಿನಲ್ಲಿ ಆಳವಾಗಿ ಬೇರೂರಿತ್ತು. ಅಮ್ಮ ಬೇಸಿಗೆಯಲ್ಲಿ ಪಕ್ಷಿಗಳಿಗಾಗಿ ಮನೆಯ ಮುಂದೆ ನೀರಿನ ಪಾತ್ರೆಯಿಡುತ್ತಿದ್ದರು. ಹಿತ್ತಲಿನಲ್ಲಿ ಕಾಳುಗಳನ್ನಿಡುತ್ತಿದ್ದರು. ಐದನೇ ತರಗತಿಯಲ್ಲಿ ಓದುತ್ತಿದ್ದಾಗಲೇ ನಿತ್ಯಾನಂದರಿಗೆ ಪಕ್ಷಿ ಪ್ರೇಮ ಆರಂಭವಾಗಿ ಹೆಮ್ಮರವಾಗಿ ಬೆಳೆಯಿತು. ಪುಸ್ತಕಗಳ ಓದಿನಿಂದ ಪ್ರಕೃತಿಗೂ, ಪಕ್ಷಿಗಳಿಗೂ ಇರುವ ಅವಿನಾಭಾವ ಸಂಬಂಧ ಅರ್ಥವಾಯಿತು. ಪರಾಗಸ್ಪರ್ಶದಿಂದ ತೊಡಗಿ ಬೀಜ ಪ್ರಸಾರ ಮಾಡುವುದರ ಜೊತೆಗೆ ಕೀಟಗಳನ್ನೂ ಭಕ್ಷಿಸುವ ಅವುಗಳಿಂದ ಭೂಮಿಗೆ ಸಿಗುವ ಪ್ರಯೋಜನಗಳು ಎಷ್ಟು ಅನನ್ಯ ಎಂಬುದೂ ಗೊತ್ತಾಯಿತು.

ಹೀಗಾಗಿ ನಿತ್ಯಾನಂದರ ಹಿತ್ತಲು ಪಕ್ಷಿಗಳಿಗೆ ನಿತ್ಯ ಆನಂದ ನೀಡುವ ತಾಣವಾಯಿತು. ಅಪ್ಪ–ಅಮ್ಮ ಇಬ್ಬರೂ ಅಕಾಲಿಕವಾಗಿ ನಿಧನರಾದರು. ಅಮ್ಮನ ನೆನಪಿಗಾಗಿ ನಿತ್ಯಾನಂದ ತಮ್ಮ ಕೃಷಿ ಭೂಮಿಯ ಎರಡು ಎಕರೆ ಪ್ರದೇಶದ ಕಲ್ಲುಬಂಡೆಗಳ ಮೇಲೆ ಹೊಸ ಮಣ್ಣು ಹರಡಿ ಅದರ ಮೇಲೆ ಕುಂಟಳೆ, ಸಪೋಟ, ಪಪ್ಪಾಯಿ, ನೇರಳೆ ಇನ್ನಿತರ ಹಣ್ಣುಗಳ, ಹೂವಿನಗಿಡಗಳನ್ನು ನೆಟ್ಟು ಬೆಳೆಸಿದರು. ಇದುವರೆಗೆ ಕಂಡರಿಯದ ಪಕ್ಷಿಗಳು ಹಣ್ಣಿಗಾಗಿ ಬರುವುದು ನೋಡಿ ಅವುಗಳಿಗೆ ಕುಡಿಯಲು ನೀರು, ತಿನ್ನಲು ಕಾಳುಗಳನ್ನಿರಿಸಿದರು. ಅಲ್ಲಿ ಪಕ್ಷಿಗಳ ಚಿಲಿಪಿಲಿ ನಿತ್ಯ ನಾದವಾಗಿ ಹೊರಹೊಮ್ಮಿತು. ಮೊಟ್ಟೆಯಿಡಲಿ ಎಂದು ಮುಳಿಹುಲ್ಲಿನಿಂದ ಗೂಡುಗಳನ್ನು ತಯಾರಿಸಿ ಮರಗಳಿಗೆ ಜೋತಾಡಿಸಿದರು. ಕೆಲವು ಪಕ್ಷಿಗಳು ಗೂಡಿನಲ್ಲಿ ಮೊಟ್ಟೆಯಿಟ್ಟು ಸಂಸಾರ ಬೆಳೆಸುವುದು ಕಂಡು ಅವುಗಳ ಜೀವನ ಚಕ್ರವನ್ನು ಮಸೂರದಲ್ಲಿ ಸೆರೆಹಿಡಿಯಲೆಂದೇ ಛಾಯಾಗ್ರಹಣವನ್ನು ಹವ್ಯಾಸವನ್ನಾಗಿ ಮಾಡಿಕೊಂಡರು.


ಹೂಹಣ್ಣಿನ ಗಿಡಗಳು ಹಾಗೂ ಮಣ್ಣಿನ ಗೂಡುಗಳೊಂದಿಗೆ ಮಕ್ಕಳು

ಬಾನಾಡಿಗಳ ಕುರಿತು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಸುವ ಸಂಕಲ್ಪ ಮಾಡಿದರು. ಸರ್ಕಾರಿ ಶಾಲೆಗಳನ್ನು ಹುಡುಕಿಕೊಂಡು ಹೋಗಿ ಮಕ್ಕಳಿಗೆ ಪಾಠ ಮಾಡಿದರು. ಶಾಲೆ ಅಂಗಳದ ಮರಗಳಲ್ಲಿ ಮಾತ್ರವಲ್ಲ, ವಿದ್ಯಾರ್ಥಿಗಳ ಮನೆಯ ಮರಗಿಡಗಳಲ್ಲೂ ಹಕ್ಕಿಗಳಿಗೆ ಕುಡಿಯುವ ನೀರಿಡಲು ಮಣ್ಣಿನ ಪಾತ್ರೆಗಳನ್ನು ನೀಡಿದರು. ಕುಂಬಾರರ ಮೂಲಕ ಸಾವಿರಾರು ಇಂತಹ ಪರಿಕರಗಳನ್ನು ಮಾಡಿಸಿ ಶಾಲೆ ಮಕ್ಕಳಿಗೆ ಹಂಚಿದರೂ ಬಿಡಿಗಾಸನ್ನೂ ಪಡೆಯಲಿಲ್ಲ. ಹಕ್ಕಿಗಳಿಗೆ ಆಹಾರವಾಗುವ ಹಣ್ಣಿನ ಗಿಡಗಳನ್ನು ನೆಟ್ಟು ಬೆಳೆಸುವಂತೆ ಗಿಡಗಳನ್ನೂ ನೀಡಿದರು. 'ಶ್ರದ್ಧೆಯಿಂದ ಪಕ್ಷಿಗಳಿಗೆ ನೀರು ಮತ್ತು ಆಹಾರ ಕೊಡಿ. ಅದೇ ನನಗೆ ಪ್ರತಿಫಲ' ಎಂದರು.

ನಿತ್ಯಾನಂದರ ಪ್ರಕೃತಿ ಪ್ರೇಮಕ್ಕೆ ಆಕರ್ಷಿತರಾಗಿ ಅವರೊಂದಿಗೆ ಮಕ್ಕಳಿಗೆ ಪಕ್ಷಿ ಪ್ರೀತಿಯ ಬೋಧನೆ ನೀಡಲು ಬಂದವರು ಸುಳ್ಯದ ರಮ್ಯಾ. ಇವರು ಸ್ನಾತಕೋತ್ತರ ಪದವೀಧರೆ. ಕಡೆಗೆ ಜಾತಿಯ ಸಣ್ಣ ತೆರೆ ಅಡ್ಡ ಬಂದರೂ ಅದನ್ನು ಕಿತ್ತೆಸೆದು ಇಬ್ಬರೂ ಬದುಕಿನ ಜೋಡಿ ಹಕ್ಕಿಗಳಾದರು. ಬಳಿಕ ಇಬ್ಬರ ಪಕ್ಷಿ ಪ್ರೀತಿಯ ಯಾನ ಇನ್ನಷ್ಟು ಊರುಗಳಿಗೆ ವಿಸ್ತರಿಸಿ ಈಗ ಬೇಸಿಗೆಯುದ್ದಕ್ಕೂ ನಿರಂತರ ಮುಂದುವರೆಯುತ್ತಿದೆ.

ನಿತ್ಯಾನಂದರ ಕಾಯಕದಿಂದ ವಿದ್ಯಾರ್ಥಿಗಳು ಹಕ್ಕಿಗೆ ನೀರು, ಕಾಳು ಇಡುತ್ತಿದ್ದಾರೆ. ಮನೆಯ ಸಮೀಪದ ಪಕ್ಷಿಗಳ ತೋಟದಲ್ಲಿ ಪಕ್ಷಿಗಳು ನಿತ್ಯ ವಾಸ ಮಾಡುವಂತೆ ಹುಲ್ಲಿನಗೂಡುಗಳನ್ನು ಬಹುಸಂಖ್ಯೆಯಲ್ಲಿ ತೂಗಾಡಿಸಬೇಕು, ನೀರಿನ ಕೊಳಗಳ ನಿರ್ಮಾಣ, ಪಕ್ಷಿ ವೀಕ್ಷಣೆಗೆ ಬರುವ ಮಕ್ಕಳಿಗಾಗಿ ಜೋಕಾಲಿಗಳನ್ನು ನಿರ್ಮಿಸಬೇಕು ಎನ್ನುವ ಕನಸು ನಿತ್ಯಾನಂದ ದಂಪತಿಯದು.

ನಿರಪರಾಧಿ ಸುರೇಶನ ದುಮ್ಮಾನ...

ಇವೆರಡೂ ಬಂಧನದಿಂದ ಬಿಡುಗಡೆಗೆ ಹಂಬಲಿಸಿದ ಕಥೆಗಳು. ನಮ್ಮದೇ ನೆಲದ ಕೊಡಗು ಜಿಲ್ಲೆಯವರಾದ ಅಮಾಯಕ ಸುರೇಶ, ಪೊಲೀಸರ ತಪ್ಪಿನಿಂದಾಗಿ ಪತ್ನಿಯ ಕೊಲೆ ಪ್ರಕರಣದಲ್ಲಿ ಜೈಲುಪಾಲಾಗಿ ನೊಂದವರು. ಕೋರ್ಟ್ ಅವರು ನಿರಪರಾಧಿ ಎಂದು ಬಂಧನದಿಂದ ಮುಕ್ತಗೊಳಿಸಿದೆ. ಇನ್ನೊಂದು ಪಕ್ಕದ ಕೇರಳ ರಾಜ್ಯದಲ್ಲಿ ಸೀಲ್ ಆಗಿರುವ ಬಟ್ಟೆ ಅಂಗಡಿಯಲ್ಲಿ ಆಕಸ್ಮಿಕವಾಗಿ ಸಿಲುಕಿ ಹೊರಬರಲು ಪರದಾಡುತ್ತಿದ್ದ ಗುಬ್ಬಚ್ಚಿಯ ಬಿಡುಗಡೆ ಪ್ರಸಂಗ. ಮನಮಿಡಿಯುವ ಈ ಕಥನಗಳು ಓದಿಗಾಗಿ...

ಕೆ.ನರಸಿಂಹಮೂರ್ತಿ


'ನೀನು ನಿರಪರಾಧಿ, ಹೆಂಡತಿಯ ಕೊಲೆ ಮಾಡಿಲ್ಲ. ಪೊಲೀಸರೇ ನಿನ್ನನ್ನು ಈ ಪ್ರಕರಣದಲ್ಲಿ ಸಿಲುಕಿಸಿದ್ದಾರೆ ಎಂದು ಮೈಸೂರು ಕೋರ್ಟು ಹೇಳಿತು. ಆದರೆ ಆ ಕೆಲಸ ಮೊದಲೇ ಮಾಡಿದ್ದರೆ, ಯಾವ ತಪ್ಪೂ ಮಾಡದ ನಾನು ಇಷ್ಟೊಂದು ಹಿಂಸೆ, ನೋವು, ಅವಮಾನ, ಜೈಲುವಾಸ ಅನುಭವಿಸಬೇಕಾದ ಪರಿಸ್ಥಿತಿ ಬರುತ್ತಿರಲಿಲ್ಲ...'

ಕೊಡಗಿನ ಕುಶಾಲನಗರದ ಬಸವನಹಳ್ಳಿಯಲ್ಲಿ ಪರಿಶಿಷ್ಟ ವರ್ಗಗಳ ಇಲಾಖೆಯು ಆದಿವಾಸಿಗಳಿಗಾಗಿ ನಿರ್ಮಿಸಿಕೊಟ್ಟಿರುವ ಪುನರ್ವಸತಿ ಬಡಾವಣೆಯ 125ನೇ ನಂಬರಿನ ಚಿಕ್ಕಮನೆಯ ಪಡಸಾಲೆಯಲ್ಲಿ ಕುಳಿತು ಹೀಗೆ ಹೇಳುವಾಗ 35ರ ಜೇನುಕುರುಬರ ಸುರೇಶ್ ಮುಂದಿನ ಮಾತುಗಳಿಗಾಗಿ ತಡಕಾಡುತ್ತಿದ್ದರು.

ಏಪ್ರಿಲ್ 23ರಂದು ಮೈಸೂರಿನ 5ನೇ ಜಿಲ್ಲಾ ಹೆಚ್ಚುವರಿ ಮತ್ತು ಸೆಷನ್ಸ್ ನ್ಯಾಯಾಲಯವು ಅವರನ್ನು ನಿರಪರಾಧಿ ಎಂದು ಘೋಷಿಸಿದೆ. ಈ ಖುಷಿ, ಸಮಾಧಾನವನ್ನೂ ಮೀರಿ ಮಾಡದ ತಪ್ಪಿಗೆ ಅನುಭವಿಸಿದ ಜೈಲುವಾಸ, ಅದೇ ಕಾರಣಕ್ಕೆ ಅವಮಾನ ಅನುಭವಿಸಿದ ಸಂಕಟಗಳೇ ಅವರನ್ನು ಕಾಡುತ್ತಿವೆ.

ಹೆಂಡತಿ ಬಿಟ್ಟು ಹೋಗಿದ್ದರೂ, ಹಾಸಿಗೆ ಹಿಡಿದಿರುವ ಆಕೆಯ ತಾಯಿ ಗೌರಿ ಅವರನ್ನೂ ಸುರೇಶ್ ಆರೈಕೆ ಮಾಡುತ್ತಿದ್ದಾರೆ. 'ಮಗ ಆರೋಪ ಮುಕ್ತನಾಗಿ ಮನೆಗೆ ಬಂದರೂ, ಅಮಾಯಕನ ಮೇಲೆ ಸುಳ್ಳು ಆರೋಪ ಹೊರಿಸಿದ ಪೊಲೀಸರಿಗೆ ಶಿಕ್ಷೆ ಏಕೆ ಆಗಿಲ್ಲ' ಎಂದು ಅಸಮಾಧಾನದಿಂದ ತಂದೆ ಗಾಂಧಿ ಕುದಿಯುತ್ತಿದ್ದರು. ತಾಯಿ ಮುತ್ತಮ್ಮ ಮನೆ ಕೆಲಸದಲ್ಲಿ ಮುಳುಗಿದ್ದರು. ಸುರೇಶನ ಮಗ ಕೃಷ್ಣ ಕಾಫಿ ತೋಟಕ್ಕೆ ಕೆಲಸಕ್ಕೆ ಹೋಗಲು ಸಿದ್ಧನಾಗುತ್ತಿದ್ದ. ಮಗಳು ಕೀರ್ತಿ ಪಡಸಾಲೆಯ ಬಳಿ ಪಾತ್ರೆ ತೊಳೆಯುತ್ತಿದ್ದಳು.

'ಪತ್ನಿ ಮಲ್ಲಿಗೆ ಮನೆಬಿಟ್ಟು ಹೋಗಿದ್ದಳು. ಹುಡುಕಿ ಸಾಕಾಗಿ, ಕೊನೆಗೆ ಹುಡುಕಿಕೊಡಿ ಎಂದು ಕಂಪ್ಲೇಂಟು ಕೊಟ್ಟರೆ, ನೀನೇ ಅವಳನ್ನು ಕೊಂದಿದ್ದೀಯಾ ಅಂತ ಪೊಲೀಸರು ಕೊಡಬಾರದ ಹಿಂಸೆ ಕೊಟ್ಟರು. ಠಾಣೆಯಿಂದ ಠಾಣೆಗೆ ಅಲೆದಾಡಿಸಿದರು. ಮಹಜರಿನ ಹೆಸರಿನಲ್ಲಿ, ಅಪರಿಚಿತ ಶವ ಸಿಕ್ಕ ಜಾಗಕ್ಕೂ ಕರೆದೊಯ್ದರು. 'ನಮ್ಮಪ್ಪ ಅಂಥವನಲ್ಲ' ಎಂದು ನನ್ನ ಮಕ್ಕಳು ಹೇಳಿದರೂ, ಹೆಣ್ಣು ಕೊಟ್ಟ ಅತ್ತೆಯೇ 'ನನ್ನ ಅಳಿಯ ಅಂಥವನಲ್ಲ' ಎಂದರೂ ನಂಬಲಿಲ್ಲ. ಆದರೆ, ಪೊಲೀಸರು ಏನೇ ಪಿಚ್ಚರು ಮಾಡಿ, ಕೊಲೆ ಕೇಸಲ್ಲಿ ನನ್ನನ್ನು ಸಿಕ್ಕಿಸಿದರೂ ಪಾರಾಗಿ ಬರುವೆ ಎಂಬ ನಂಬಿಕೆ ಇತ್ತು' ಎಂದರು.


ನಿರಪರಾಧಿ ಎಂದು ನ್ಯಾಯಾಲಯ ಘೋಷಿಸಿದ ನಂತರ ಮನೆಮಂದಿಯೊಂದಿಗೆ ಸುರೇಶ್ ಸಂತಸದ ಕ್ಷಣ. ತಾಯಿ ಮುತ್ತಮ್ಮ, ತಂದೆ ಗಾಂಧಿ ಮತ್ತು ಮಗಳು ಕೀರ್ತಿಯೊಂದಿಗೆ...
ಚಿತ್ರಗಳು: ರಂಗಸ್ವಾಮಿ

'2020ರ ಅಕ್ಟೋಬರ್‌ನಲ್ಲಿ ಹೆಂಡತಿ ಮಲ್ಲಿಗೆ ಕಾಣೆಯಾದ ಬಗ್ಗೆ ಪೊಲೀಸರಿಗೆ ದೂರು ಕೊಟ್ಟೆ. ಆಕೆ ಜೀವಂತವಾಗಿಯೇ ಇದ್ದಾಳೆ ಎಂದು ಪದೇಪದೇ ಹೇಳುತ್ತಿದ್ದೆ. ಆಕೆ ಇರುವ ಸ್ಥಳಗಳ ಬಗ್ಗೆ ಹಲವು ಬಾರಿ ಮಾಹಿತಿ ಕೊಟ್ಟೆ. ನನ್ನನ್ನೂ ಕರೆದೊಯ್ಯುತ್ತಿದ್ದರು. ಆದರೆ ಸರಿಯಾಗಿ ತನಿಖೆ ಮಾಡಲಿಲ್ಲ. ಎಲ್ಲೋ ಮಹಿಳೆಯ ಶವ ಸಿಕ್ಕಿದರೆ, ಅದು ನನ್ನ ಹೆಂಡತಿಯದ್ದೇ ಎಂದು, ನಾನೇ ಆಕೆಯನ್ನು ಕೊಂದು ಎಸೆದೆನೆಂದು ಕಥೆ ಕಟ್ಟಿದರು. ಅದೇ ಆರೋಪದಲ್ಲಿ ನಾನು ಒಂದೂ ಮುಕ್ಕಾಲು ವರ್ಷ ಜೈಲಿನಲ್ಲಿರಬೇಕಾಯಿತು. ಕೊನೆಗೂ ನಾನು ಆಕೆಯನ್ನು ಕೊಲೆ ಮಾಡಿಲ್ಲ ಎಂದು ಸಾಬೀತುಪಡಿಸಲು ಆಕೆಯೇ ಪ್ರತ್ಯಕ್ಷ ಬರಬೇಕಾಯಿತು. ಪೊಲೀಸರು ಮಾಡಿದ್ದ ಪಿಚ್ಚರು ಫೇಲ್ ಆಯಿತು. ನಾನಿದನ್ನು ಇಲ್ಲಿಗೇ ಬಿಡುವುದಿಲ್ಲ' ಎಂದು ಇಡೀ ಪ್ರಕರಣವನ್ನು ಬಿಚ್ಚಿಟ್ಟರು.

'ಶವ ನನ್ನ ಹೆಂಡತಿಯದ್ದಲ್ಲ. ಅವಳು ಬದುಕಿದ್ದಾಳೆ. ಅವಳ ಪ್ರಿಯಕರ ಗಣೇಶ್‌ನನ್ನು ಪತ್ತೆ ಮಾಡಿ ಎಂದರೂ ಕೇಳದೆ, ಯಾವುದೇ ಸಂಬಂಧವಿಲ್ಲದ ಆ ತಲೆ ಬುರುಡೆ ಸೇರಿದಂತೆ ಮೂಳೆಗಳನ್ನು ನನ್ನ ಕೈಯಿಂದಲೇ ಹೂಳಿಸಿದರು' ಎಂದು ವ್ಯಥೆಪಟ್ಟರು.

'ಅಷ್ಟು ವರ್ಷ ನನ್ನನ್ನ ಒಳಗೇ ಕೂರಿಸಿದರೆಂದರೆ ಸುಳ್ಳಿಗೇ ಇಲ್ಲಿ ಬೆಲೆ. ಸತ್ಯಕ್ಕಲ್ಲ. ಪೊಲೀಸರೇ ಆಗಲಿ, ಯಾರೇ ಆಗಲಿ, ನ್ಯಾಯವಾಗಿ ಕೆಲಸ ಮಾಡಿದರೆ ಯಾರಿಗೂ ಅನ್ಯಾಯವಾಗಲ್ಲ' ಎಂದು ಹೇಳುವಾಗ ಸುರೇಶ್ ಕಣ್ಣಲ್ಲಿ ನೀರು ಕಂಡೂ ಕಾಣದಂತೆ ಜಿನುಗಿತು.

'ಜೈಲಿಗೆ ಹೋಗಿ ಬಂದಿರೋದ್ರಿಂದ ನನಗೂ ಜೀವನ ಇಲ್ಲ, ಮಕ್ಕಳಿಗೂ ಜೀವನ ಇಲ್ಲ. ಹಂಗೇ ಇದ್ದೀವಿ. ಮನೇಲಿ ಅಡುಗೆ ನಾನೇ ಮಾಡಬೇಕು. ತೋಟದಲ್ಲಿ ಕೂಲಿ ಕೆಲಸಾನೂ ಮಾಡಬೇಕು. ನರಕದಲ್ಲಿ ಅನುಭವಿಸೋದನ್ನೆಲ್ಲ ಈ ಜಲ್ಮಕ್ಕೆ ಇಲ್ಲೇ ಅನುಭವಿಸಿದ್ದೀನಿ' ಎಂದು ಮೌನವಾದರು.

ಕೊಲೆ ಕೇಸಾ, ನೀನೂ ನಮ್ಮೋನೇ !

'ಜೈಲಿಗೆ ಹೋದಾಗ ದಿಕ್ಕೇ ತೋಚಲಿಲ್ಲ. ಮೊದಲು ಒಂದು ಚಿಕ್ಕ ರೂಂಗೆ ಹಾಕಿದರು. ನಾಲ್ಕು ಗೋಡೆ ಬಿಟ್ಟರೆ ಬೇರೆ ಏನೂ ಇಲ್ಲ. ಏನಾಗುತ್ತೋ ಅಂತ ಭಯ ಶುರುವಾಯಿತು. ಆಮೇಲೆ ಬೇರೆ ಕೈದಿಗಳಿದ್ದ ಕಡೆಗೆ ಕಳಿಸಿದರು. ಅಲ್ಲಿದ್ದವರು ಕೊಲೆ ಕೇಸು ಎಂದು ತಿಳಿದ ಮೇಲೆ, 302ನಾ, ನೀನೂ ನಮ್ಮ ಕಡೆಯವನೇ ಬಿಡು ಎಂದು ಹೇಳಿ ನಕ್ಕರು. ಅವರ ಮಾತಿನಿಂದ ಕಸಿವಿಸಿಯಾದರೂ ಏನೂ ಮಾಡುವಂತಿರಲಿಲ್ಲ' ಎಂದು ಜೈಲುವಾಸದ ದಿನಗಳನ್ನು ಸುರೇಶ್ ನೆನಪಿಸಿಕೊಂಡರು.

'ಹೆಂಡ್ತಿಯನ್ನು ಹೆಂಗೋ ಕೊಲೆ ಮಾಡ್ದೆ' ಅಂತ ಪೊಲೀಸರು, ಕೈದಿಗಳು ಎಲ್ಲರೂ ಕೇಳೋರು. ಕೊಲೆ ಮಾಡಿಲ್ಲ ಎಂದರೆ ನಂಬುತ್ತಿರಲಿಲ್ಲ. ಕೊಲೆ ಮಾಡದೆ ಹೆಂಗೋ ಬಂದೆ ಎಂಬ ಅವರ ಮಾತಿಗೆ ಏನು ಹೇಳಬೇಕೆಂದೇ ಗೊತ್ತಾಗ್ತಿರಲಿಲ್ಲ. ನನ್ನ ಪಾಡಿಗೆ ನಾನಿರುತ್ತಿದ್ದೆ. ಕೊನೆಗೆ ಒಳ್ಳೆಯವನೆಂದು ಅಡುಗೆ ಮನೆಗೆ ಕಳಿಸಿದರು. ಅಲ್ಲಿ ಕೊಂಚ ಸಮಾಧಾನವಾಯಿತು.'

10ನೇ ಪುಟಕ್ಕೆ...



ಜಾಮೀನಿಗಾಗಿ ಪರದಾಟ..

'ಮಗ ಜೈಲುಪಾಲಾದ ಮೇಲೆ ಪೊಲೀಸರೇ ವಕೀಲರೊಬ್ಬರನ್ನು ಗೊತ್ತುಪಡಿಸಿದ್ದರು. ಆದರೆ ಅವರು ನಾಲ್ಕು ಲಕ್ಷ ರೂಪಾಯಿ ತರುವಂತೆ ಹೇಳಿದರು. ನಾವು ಬಡವರೆಂದು ಹೇಳಿದರೂ ಕೇಳಿಸಿಕೊಳ್ಳಲಿಲ್ಲ. ನಂತರ ನಾನು ಅವರ ಬಳಿಗೆ ಹೋಗಲಿಲ್ಲ. ಹೀಗೇ ಇರುವಾಗ ಪೊಲೀಸರೊಬ್ಬರು ಮೈಸೂರಿನ ವಕೀಲರಾದ ಪಾಂಡು ಪೂಜಾರಿಯವರ ಫೋನ್ ನಂಬರ್ ಕೊಟ್ಟರು. ದೇವರೇ ನನ್ನನ್ನು ಅವರ ಬಳಿಗೆ ನೂಕಿದನೇನೋ ಅನ್ನಿಸುತ್ತದೆ. ಅವರೇ ನಮ್ಮ ಪಾಲಿನ ದೇವರು..'

ಸುರೇಶ್ ಅವರ ತಂದೆ ಗಾಂಧಿಯವರ ಮಾತುಗಳಲ್ಲಿ ಅಪರಿಮಿತ ಕೃತಜ್ಞತೆ ಹೊಳೆಯಿತು.

'ಈ ವಕೀಲರು ನಮ್ಮಿಂದ ಇದುವರೆಗೆ ಒಂದು ರೂಪಾಯಿ ಪಡೆದಿಲ್ಲ. ಬದಲಿಗೆ ಅವರೇ ನಮಗೆ ಆಗಾಗ ಹಣ ಕೊಟ್ಟು ನೆರವಾಗಿದ್ದಾರೆ. ಒಮ್ಮೆ ವಿಚಾರಣೆ ಮುಗಿದ ಮೇಲೆ, ಮಾರನೇ ದಿನವೂ ಕೋರ್ಟ್‌ಗೆ ಬರಬೇಕಾಗಿತ್ತು. ನಾವು ಮನೆಯವರೆಲ್ಲರೂ ಮತ್ತೆ ಹಾಡಿಗೆ ಹೋಗಿ ವಾಪಸು ಬರುವುದು ಕಷ್ಟವಾಗುತ್ತದೆ ಎಂದಾಗ, ವಕೀಲರೇ ಹೋಟೆಲ್‌ನಲ್ಲಿ ರೂಂ ಮಾಡಿಕೊಟ್ಟಿದ್ದರು. ಕಾರಿನಲ್ಲಿ ಊರಿಗೆ ಕಳಿಸಿಕೊಟ್ಟರು' ಎಂದು ಕಣ್ಣೀರಾದರು ಗಾಂಧಿ.

'ಜಾಮೀನಿಗೆ ಶ್ಯೂರಿಟಿ ಹಾಕಲು ಜನ ಸಿಗಲಿಲ್ಲ. ಎಲ್ಲೆಲ್ಲೋ ಹುಡುಕಾಡಿದೆ. ನಂತರ, ವಕೀಲರು ಒಬ್ಬರನ್ನು ಕರೆಸಿದರು. ತನ್ನ ಹೆಸರಿನಲ್ಲಿದ್ದ ಪಹಣಿ ಇಟ್ಟು ಪತ್ನಿ ಜಾಮೀನು ಹಾಕಿದಳು' ಎಂದರು.

ಒಂದು ಗುಬ್ಬಚ್ಚಿಗೆ ಮಿಡಿದ ಕೋಟಿ ಹೃದಯಗಳು...

ಅಬ್ದುಲ್ ರಹಿಮಾನ್

ಉಳಿಕ್ಕಲ್... ಕೇರಳದ ಕಣ್ಣೂರು ಜಿಲ್ಲೆಯ ಇರಿಟ್ಟಿ ತಾಲ್ಲೂಕಿನ ವೈತೂರು ಗ್ರಾಮ ಪಂಚಾಯಿತಿಯಲ್ಲಿರುವ ಗ್ರಾಮ. ಏಪ್ರಿಲ್ 10 ರಂದು ಅಲ್ಲಿನ ಅಂಗಡಿಯೊಂದರ ಮುಂದೆ ನಿಂತು, ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಾದ ಕೆ.ಟಿ. ನಿಸಾರ್ ಅಹಮದ್ ಅವರು ಆಡಿದ ಮಾತುಗಳು ಪುಟ್ಟ ಜೀವಿಯೊಂದರ ಬದುಕು, ಸ್ವಾತಂತ್ರ್ಯದ ಮೌಲ್ಯ ಸಾರುತ್ತಿತ್ತು.

'ಕಾನೂನಿನ ಹೆಸರಿನಲ್ಲಿ ಯಾವುದೇ ಜೀವಿಯ ಬದುಕುವ ಹಕ್ಕು ಕಸಿದುಕೊಳ್ಳಬಾರದು. ಪ್ರತಿಯೊಂದು ಜೀವಿಯ ಪ್ರಾಣ ಬೆಲೆಯುಳ್ಳದ್ದು. ಊರಿನವರೆಲ್ಲ ಸೇರಿ ಒಂದು ಜೀವವನ್ನು ರಕ್ಷಿಸುವ ಮಹತ್ಕಾರ್ಯ ಮಾಡಿದ್ದೀರಿ..'


ಹೊರಬರಲಾರದೆ ಗಾಜಿನ ಕೋಣೆಯೊಳಗೆ ಗುಬ್ಬಚ್ಚಿಯ ಪರದಾಟ

ಅವರ ಬಾಯಿಂದ ಈ ಮಾತುಗಳು ಬರುವಾಗ ಅವರ ಸುತ್ತ ಊರಿನ ಹತ್ತು ಸಮಸ್ತರು ಸೇರಿದ್ದರು. ಗ್ರಾಮ ಪಂಚಾಯಿತಿಯ ಸಿಬ್ಬಂದಿ ಸ್ಥಳದಲ್ಲಿದ್ದರು. ಪುಟ್ಟ ಮಕ್ಕಳು 'ಜಡ್ಜ್ ಸಾಹೇಬ'ರ ಮುಖವನ್ನೇ ದಿಟ್ಟಿಸುತ್ತಿದ್ದರು. ಅಲ್ಲಿ ಸೇರಿದ್ದವರ ಮುಖದಲ್ಲಿ ಸಾರ್ಥಕ ಭಾವವಿತ್ತು, ಸಂತಸದ ಹೊನಲು ಹರಿಯುತ್ತಿತ್ತು. ಪುಟ್ಟ ಗುಬ್ಬಚ್ಚಿಯೊಂದರ ಪ್ರಾಣ ರಕ್ಷಣೆಗೆ ಇಡೀ ಊರೇ ಟೊಂಕ ಕಟ್ಟಿ, ಹೈಕೋರ್ಟ್ ಕದ ಬಡಿದ ಅಪರೂಪದ ಘಟನೆ ಇದು. ಗುಬ್ಬಚ್ಚಿಯ ರಕ್ಷಣೆಗೆ ಗ್ರಾಮಸ್ಥರು ತೋರಿದ ಕಾಳಜಿ ನ್ಯಾಯಧೀಶರ ಮೆಚ್ಚುಗೆಗೆ ಪಾತ್ರವಾಗಿತ್ತು.

ಉಳಿಕ್ಕಲ್‌ನಲ್ಲೊಂದು ಬಟ್ಟೆ ಅಂಗಡಿ. ಅದರ ಮಾಲೀಕತ್ವಕ್ಕಾಗಿ ಇಬ್ಬರ ನಡುವೆ ತಕರಾರು. ಪ್ರಕರಣ ಹೈಕೋರ್ಟ್‌ವರೆಗೂ ತಲುಪಿತ್ತು. ಅಂತಿಮ ಆದೇಶದವರೆಗೂ ಅಂಗಡಿಯನ್ನು ಸೀಲ್ ಮಾಡಬೇಕು ಎಂದು ಕೋರ್ಟ್ ಆದೇಶಿಸಿ ವರ್ಷವೇ ಉರುಳಿತ್ತು. ಇಡೀ ಪ್ರಕರಣದ ಕೇಂದ್ರ ಬಿಂದು ಇದೇ 'ಮುಚ್ಚಿದ ಅಂಗಡಿ'. ಗುಬ್ಬಚ್ಚಿ ಎರಡನೇ ಬಾರಿಗೆ ಸ್ವಾತಂತ್ರ್ಯದ ಸಿಹಿ ಉಂಡಿದ್ದು ಇಲ್ಲಿಂದಲೇ.

ಅಂಗಡಿಯ ಇನ್ನೊಂದು ಪಕ್ಕದಲ್ಲಿ ಬಟ್ಟೆಗಳ ಪ್ರದರ್ಶನಕ್ಕಾಗಿ ಗೋಡೆಗೆ ತಾಗಿಕೊಂಡಂತೆ ಗಾಜಿನ ಬೃಹತ್ ಕೋಣೆ ಇದೆ. ಅದರೊಳಗೆ ಗುಬ್ಬಚ್ಚಿ ಹೇಗೋ ಸಿಲುಕಿಕೊಂಡಿತ್ತು. ಗೋಡೆ ಹಾಗೂ ಗಾಜಿನ ನಡುವೆ ಇರುವ ಸಣ್ಣದೊಂದು ಸಂದಿನ ಮೂಲಕ ಒಳಗೆ ಸೇರಿಕೊಂಡಿದೆ ಎನ್ನುವುದು ಜನರ ಊಹೆ ಆಗಿತ್ತು.

ಒಂದು ವರ್ಷಕ್ಕೂ ಮಿಕ್ಕಿ ಮುಚ್ಚಿಯೇ ಇರುವ ಸ್ಥಿತಿಯಲ್ಲಿ ಅಂಗಡಿ ಇದ್ದುದರಿಂದ ಯಾರ ಗಮನವೂ ಅತ್ತ ಕಡೆ ಇರಲಿಲ್ಲ. ಅಚಾನಕ್ಕಾಗಿ ಯಾರದ್ದೋ ಕಣ್ಣಿಗೆ ಗಾಜಿನೊಳಗೆ ಬಂಧಿಯಾಗಿರುವ ಗುಬ್ಬಚ್ಚಿ ಕಾಣಿಸಿತು. ಗುಬ್ಬಚ್ಚಿಯ ಪರದಾಟ, ಅಸಹಾಯಕತೆ ಊರಿಡೀ ಸುದ್ದಿಯಾಗುವಾಗ ಎರಡು ದಿನಗಳು ಕಳೆದಿದ್ದವು.

ಕೆಲವರು ಬಂದು ಗುಬ್ಬಚ್ಚಿಯನ್ನು ರಂಧ್ರದ ಮೂಲಕ ಹೊರತೆಗೆಯುವ ಪ್ರಯತ್ನ ಮಾಡಿ ಸೋತರು. ರಂಧ್ರದೊಳಗೆ ಪೈಪ್ ತೂರಿಸಿ ಅದನ್ನು ಹೊರಗೆ ಕರೆತರುವ ಯತ್ನವೂ ವಿಫಲವಾಯಿತು. ಅದೇ ರಂಧ್ರದ ಮೂಲಕ ಅದಕ್ಕೆ ಆಹಾರ, ನೀರು ನೀಡಿದರು. ಗುಬ್ಬಚ್ಚಿಯ ವಿಚಾರ ಬಾಯಿಂದ ಬಾಯಿಗೆ ಹರಡಿ ಅದನ್ನು ನೋಡಲೆಂದು ಜನ ನೆರೆದರು. ಬಿಸಿಲಿಗೆ ಕಾದ ಗಾಜಿನ ಶಾಖಕ್ಕೆ ಚಡಪಡಿಸುವ ಗುಬ್ಬಚ್ಚಿಯ ಅಸಹಾಯಕತೆಗೆ ಊರವರು ಮರುಗಿದರು.

ಈ ವಿಚಾರ ವಕೀಲ ಚಂದ್ರನ್ ಕೆ.ಎ. ಅವರಿಗೆ ಗೊತ್ತಾಯಿತು. ಪ್ರಾಣಿ ಪ್ರಿಯರೂ ಆಗಿರುವ ಅವರು ಕೂಡಲೇ ಸ್ಥಳಕ್ಕೆ ಧಾವಿಸಿ, ಗುಬ್ಬಚ್ಚಿ ರಕ್ಷಣೆಗೆ ಮುಂದಾದರು. ಕೋರ್ಟ್ ಆದೇಶಾನುಸಾರ ಅಂಗಡಿ ಸೀಲ್ ಆಗಿದ್ದರಿಂದ ಅದರ ಬಾಗಿಲು ತೆರೆಯುವಂತಿರಲಿಲ್ಲ. ಹೀಗೆ ಇನ್ನೆರಡು ದಿನ ಕಳೆದರೆ ಗುಬ್ಬಚ್ಚಿ ಉಸಿರು ಚೆಲ್ಲುತ್ತಿತ್ತು. ಕೂಡಲೇ ಗ್ರಾಮಸ್ಥರನ್ನು ಸೇರಿಸಿಕೊಂಡು ಗ್ರಾಮ ಪಂಚಾಯಿತಿಗೆ ತೆರಳಿ ಘಟನೆ ವಿವರಿಸಿದರು. ಕಾನೂನಿನ ತೊಡಕು ಇದ್ದಿದ್ದರಿಂದ ಪಂಚಾಯಿತಿ ಸಿಬ್ಬಂದಿ ಅಸಹಾಯಕತೆ ವ್ಯಕ್ತಪಡಿಸಿದರು. ಮಾಧ್ಯಮಗಳಿಗೆ ವಿಷಯ ಮುಟ್ಟಿಸಿದ ಚಂದ್ರನ್ ಅವರ ತಂಡ, ತಕ್ಷಣ ಜಿಲ್ಲಾಧಿಕಾರಿಯವರನ್ನು ಸಂಪರ್ಕಿಸಿತು.

ಮಾಧ್ಯಮಗಳಲ್ಲಿ ವರದಿ ಪ್ರಸಾರವಾಗುತ್ತಲೇ, ಗುಬ್ಬಚ್ಚಿ ನೋಡಲು ಬರುವವರ ಸಂಖ್ಯೆ ಹೆಚ್ಚಾಯಿತು. ಪೇಟೆಗೆ ಬಂದವರೆಲ್ಲಾ ಟಿ.ವಿಯಲ್ಲಿ ಕಂಡ ಗುಬ್ಬಚ್ಚಿಯನ್ನು ನೋಡಲು ಬಂದರು. ಬರುವ ಮಕ್ಕಳದ್ದು ಕುತೂಹಲದ ನೋಟ. ಗಾಜಿನೊಳಗೆ ಅತ್ತಿಂದಿತ್ತ ಹಾರಾಡುತ್ತಾ ಬಂಧಿಯಾಗಿದ್ದ ಗುಬ್ಬಚ್ಚಿಯನ್ನು ಮೊಬೈಲ್‌ನಲ್ಲಿ ಸೆರೆಹಿಡಿಯುವವರ ಸಂಖ್ಯೆಯೂ ಕಡಿಮೆ ಇರಲಿಲ್ಲ. ಉಳಿಕ್ಕಲ್‌ನ ಅಂಗಡಿಯಲ್ಲಿ ಬಂಧಿಯಾಗಿದ್ದ ಗುಬ್ಬಚ್ಚಿಯ ಅಸಹಾಯಕ ಕೂಗು ಸಾಮಾಜಿಕ ಜಾಲತಾಣಗಳಲ್ಲಿಯೂ ಹರಿದಾಡಿತು.

'ಸೆರೆಯಾದ ಗುಬ್ಬಚ್ಚಿ ವಿಷಯ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದಂತೆಯೇ, ಜಿಲ್ಲಾ ಮೃಗ ಸಂರಕ್ಷಣಾ ವೇದಿಕೆಯ ಮುಖ್ಯಸ್ಥರೂ ಆಗಿರುವ ಜಿಲ್ಲಾಧಿಕಾರಿ, ಇರಿಟ್ಟಿ ತಹಶೀಲ್ದಾರರಿಂದ ವರದಿ ಕೇಳಿದರು. ಅವರು ಮಾಹಿತಿ ಬಯಸಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸಿದರು. ಪಂಚಾಯಿತಿ ಸಿಬ್ಬಂದಿ ಮಾಹಿತಿ ಒದಗಿಸಿದ್ದಲ್ಲದೆ, ನಮ್ಮಿಂದ ಲಿಖಿತ ಮನವಿಯನ್ನೂ ಪಡೆದುಕೊಂಡರು' ಎಂದು ಗುಬ್ಬಚ್ಚಿಯ ಸಂರಕ್ಷಣೆಯ ಮುಂದಾಳತ್ವ ವಹಿಸಿದ್ದ ಚಂದ್ರನ್ ವಿವರಿಸಿದರು.

ವರದಿ ಬಂದ ಕೂಡಲೇ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಾದ ನಿಸಾರ್ ಅಹಮದ್ ಅವರನ್ನು ಸಂಪರ್ಕಿಸಿದ ಜಿಲ್ಲಾಧಿಕಾರಿ ಅರುಣ್ ಕೆ. ವಿಜಯನ್, ಘಟನೆ ಬಗ್ಗೆ ಮಾಹಿತಿ ನೀಡಿದರು. ಹೈಕೋರ್ಟ್ ಆದೇಶ ಪ್ರಕಾರ ಅಂಗಡಿ ಸೀಲ್ ಆಗಿದ್ದರಿಂದ ಅವರು ಹೈಕೋರ್ಟ್‌ಗೆ ತಿಳಿಸಿದರು. ಗುಬ್ಬಚ್ಚಿಯ ರಕ್ಷಣೆಗೆ ಗ್ರಾಮಸ್ಥರು ತೋರಿದ ಉಮೇದನ್ನೂ ವಿವರಿಸಿದರು. ಸೆಷನ್ಸ್ ನ್ಯಾಯಾಧೀಶರ ಸಮ್ಮುಖದಲ್ಲಿ ಅಂಗಡಿ ಬಾಗಿಲನ್ನು ತೆರೆದು ಗುಬ್ಬಚ್ಚಿಯನ್ನು ಬಂಧಮುಕ್ತಗೊಳಿಸಬೇಕು ಎಂದು ಹೈಕೋರ್ಟ್ ನಿರ್ದೇಶಿಸಿತು. ಊರಲ್ಲಿ ಸಂಭ್ರಮ, ಇದರ ಹಿಂದೆ ಓಡಾಡಿದವರಲ್ಲಿ ಸಾರ್ಥಕ ಭಾವ.

ಮರುದಿನ ಬೆಳಿಗ್ಗೆಯೇ ಎಲ್ಲಾ ಕಾರ್ಯೋತ್ತಡಗಳನ್ನು ಬದಿಗಿರಿಸಿ 50 ಕಿ.ಮೀ ದೂರದಿಂದ ಉಳಿಕ್ಕಲ್‌ಗೆ ಬಂದ ನ್ಯಾ. ನಿಸಾರ್ ಅಹಮದ್ ಅವರಿಗೆ ಸೇರಿದ್ದ ಊರಿನ ನೂರಾರು ಜನರ ಸ್ವಾಗತ ಲಭಿಸಿತು.

10ನೇ ಪುಟಕ್ಕೆ...


ಮುಚ್ಚಿದ ಅಂಗಡಿಯ ಗಾಜಿನ ಕೋಣೆಯೊಳಗೆ ಬಂಧಿಯಾಗಿರುವ ಗುಬ್ಬಚ್ಚಿ

ಕೃಷಿಯೆಡೆಗೆ ಮಠದ ನಡಿಗೆ

ಸ್ವರ್ಣವಲ್ಲೀ ಮಠದಲ್ಲಿ 2007ರಿಂದ ಕೃಷಿ ಜಯಂತಿ ನಡೆಯುತ್ತಿದೆ. ಮಕ್ಕಳಿಗೆ ಎಳವೆಯಲ್ಲಿಯೇ ಕೃಷಿಯಲ್ಲಿ ಆಸಕ್ತಿ ಮೂಡಿಸುತ್ತಿರುವ ಈ ಕಾರ್ಯಕ್ರಮದಲ್ಲಿ ಎಲೆ, ಬೀಜಗಳನ್ನು ಗುರುತಿಸುವಂಥ ಕೃಷಿ ಸಂಬಂಧಿ ಅನೇಕ ಸ್ಪರ್ಧೆಗಳು ನಡೆಯುತ್ತವೆ. ಸಾಧಕ ರೈತರನ್ನು ಗೌರವಿಸಲಾಗುತ್ತದೆ. ದೇಶದ ವಿವಿಧ ಭಾಗಗಳ ಕೃಷಿ ತಜ್ಞರ ಉಪನ್ಯಾಸಗಳೂ ಇದರ ಭಾಗವಾಗಿದೆ. ಈ ಸಲ ಮೇ 10 ಮತ್ತು 11ರಂದು ಕಾರ್ಯಕ್ರಮ ನಡೆಯಲಿದೆ.

ರಾಜೇಂದ್ರ ಹೆಗಡೆ

ಇನ್ನೂ ಅಕ್ಷರಾಭ್ಯಾಸವಿಲ್ಲದ ಪುಟ್ಟ ಮಕ್ಕಳಿಗೆ ವಿವಿಧ ಎಲೆ, ಬೀಜಗಳನ್ನು ಗುರುತಿಸಿ ಸ್ಪರ್ಧೆ ಗೆದ್ದ ಭಾವ, ಎಲ್ಲರಿಗಿಂತ ಹೆಚ್ಚು ಚಾಲಿ ಅಡಿಕೆ ಸುಲಿದೆನೆಂಬ ಕೃಷಿ ಮಹಿಳೆಯೊಬ್ಬರ ಸಂಭ್ರಮ, ರಸಪ್ರಶ್ನೆಯಲ್ಲಿ ಭಾಗಿಯಾದ ಪ್ರೌಢಶಾಲಾ ಮಕ್ಕಳಿಗೆ ಕೃಷಿಯೆಡೆಗಿನ ಜ್ಞಾನ ವೃದ್ಧಿಸಿಕೊಂಡ ಹೆಮ್ಮೆ, ಕೃಷಿಯನ್ನೇ ನಂಬಿ ಬದುಕು ರೂಪಿಸಿಕೊಂಡು ಇತರರಿಗೆ ಮಾದರಿಯಾದೆ ಎಂಬ ರೈತರ ಸಾರ್ಥಕತೆ.... ಇಂಥ ವಿಶಿಷ್ಟ ಕೃಷಿ ಸಂಸ್ಕೃತಿ ಅನಾವರಣಕ್ಕೆ ವೇದಿಕೆಯಾಗಿರುವುದು ಸ್ವರ್ಣವಲ್ಲೀ ಮಠದಲ್ಲಿ ನಡೆಯುವ ಕೃಷಿ ಜಯಂತಿ.

ಎಳವೆಯಲ್ಲಿಯೇ ಕೃಷಿಯೆಡೆ ಆಸಕ್ತಿ ಮೂಡಿಸುವ ಪ್ರಯತ್ನದ ಭಾಗವಾಗಿ ಈ ಮಠವು 2007ರಿಂದ ಕೃಷಿ ಜಯಂತಿಯನ್ನು ಆಯೋಜಿಸುತ್ತಿದೆ. ಈ ಮೂಲಕ ಮಠದ ಆವರಣಕ್ಕೆ ಸೀಮಿತವಾಗಿ ಶಾಸ್ತ್ರೀಯವಾಗಿ ಸಂಪನ್ನಗೊಳ್ಳುತ್ತಿದ್ದ ಆಚರಣೆಯೊಂದು ಎಲ್ಲ ವರ್ಗದವರನ್ನು, ಎಲ್ಲ ವಯಸ್ಸಿನವರನ್ನು ಒಂದುಗೂಡಿಸಿ ಕೃಷಿ ಕ್ಷೇತ್ರದ ತಲ್ಲಣಗಳ ನಿವಾರಣಾ ಪ್ರಯತ್ನ ಮಾದರಿಯಾಗಿ ಗುರುತಿಸಿಕೊಂಡಿದೆ. ಒಂದೂವರೆ ದಶಕಗಿಂತಲೂ ಹೆಚ್ಚು ಸಮಯದಿಂದ ಕೃಷಿ ಕ್ಷೇತ್ರದ ಪುನರುತ್ಥಾನದ ಕಾರ್ಯ ಸಾಗಿದೆ.

ಕೃಷಿ ಜಯಂತಿ ಅಂಗವಾಗಿ ಅಂಗನವಾಡಿ ಹಾಗೂ ಬಾಲವಾಡಿ ಮಕ್ಕಳಿಗೆ ತರಕಾರಿ ಗುರುತಿಸುವ ಸ್ಪರ್ಧೆ ನಡೆಯುತ್ತದೆ. ಆರಂಭದಲ್ಲಿ ಕಡಿಮೆ ಮಕ್ಕಳು ಪಾಲ್ಗೊಳ್ಳುತ್ತಿದ್ದವು. ಈಗೀಗ ನೂರಾರು ಮಕ್ಕಳು ಭಾಗವಹಿಸುತ್ತಿವೆ ಕೆಲ ಮಕ್ಕಳು ಒಂದೆರಡು ತರಕಾರಿ ಗುರುತಿಸಿದರೆ, ಕೆಲವು ಎಲ್ಲವನ್ನೂ ಗುರುತಿಸುವಷ್ಟು ಚುರುಕಾಗಿವೆ. ಈ ಸ್ಪರ್ಧೆಯಲ್ಲಿ ಗೆದ್ದವರಿಗೆ ಜಯಂತಿಯ ಸಭಾ ವೇದಿಕೆಯಲ್ಲಿ ಗೌರವಿಸಲಾಗುತ್ತದೆ.

'ಒಂದರಿಂದ ನಾಲ್ಕನೇ ತರಗತಿಯ ಮಕ್ಕಳಿಗೆ ಕಾಳು, ಬೀಜಗಳನ್ನು ಗುರುತಿಸುವ, 5ರಿಂದ 7ನೇ ತರಗತಿಯ ಮಕ್ಕಳಿಗೆ ವಿವಿಧ ಸಸ್ಯಗಳ ಎಲೆಗಳನ್ನು ಗುರುತಿಸುವ ಸ್ಪರ್ಧೆ ನಡೆಸಲಾಗುತ್ತಿದೆ. ಕಳೆದ ವರ್ಷಗಳಲ್ಲಿ ಪಾಲ್ಗೊಂಡವರು ಪ್ರಸಕ್ತ ವರ್ಷ ಸ್ಪರ್ಧೆ ಗೆಲ್ಲುವ ಸಲುವಾಗಿ ಪೂರ್ವ ತಯಾರಿ ಮಾಡಿಕೊಂಡು ಬರುತ್ತಾರೆ. ಆ ಮೂಲಕ ಕೃಷಿಯೆಡೆಗೆ ಅವರ ಸುಪ್ತ ಮನಸ್ಸು ಕೆಲಸ ಮಾಡುತ್ತಿರುತ್ತದೆ. ವರ್ಷದಿಂದ ವರ್ಷಕ್ಕೆ ಮಕ್ಕಳಲ್ಲಿನ ಗುರುತಿಸುವಿಕೆ ಪಕ್ವ ಆಗುತ್ತಿದೆ. ಇದು ಜಯಂತಿ ಆಚರಣೆಗೆ ಉದ್ದೇಶ ಈಡೇರುವ ಭಾಗವಾಗಿದೆ' ಎಂದು ಸಂಘಟಕರಲ್ಲಿ ಒಬ್ಬರಾದ ರತ್ನಾಕರ ಬಾಡಲಕೊಪ್ಪ ಹೇಳಿದರು.

ಶಿಕ್ಷಣ ಇಲಾಖೆಯ ಶಿರಸಿ ಶೈಕ್ಷಣಿಕ ಜಿಲ್ಲೆಯ ಸಹಕಾರದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕೃಷಿ ರಸಪ್ರಶ್ನೆ ಸ್ಪರ್ಧೆ ಹಾಗೂ ಕೃಷಿ ವಿಜ್ಞಾನ ಮಾದರಿ ಸ್ಪರ್ಧೆ, ಪ್ರದರ್ಶನ ನಡೆಯುತ್ತದೆ. ಮಕ್ಕಳು ಅತ್ಯುತ್ಸಾಹದಿಂದ ಪಾಲ್ಗೊಳ್ಳುತ್ತಾರೆ. ಕೇಳುವ ಪ್ರಶ್ನೆಗಳಿಗೆ ಥಟ್ ಅಂಥ ಉತ್ತರಿಸುವಷ್ಟು ಪ್ರೌಢ ಹಂತಕ್ಕೆ ಮಕ್ಕಳು ತಲುಪಿದ್ದಾರೆ. ತಾಲ್ಲೂಕು, ಜಿಲ್ಲೆ, ರಾಜ್ಯ ಮಟ್ಟದ ಸ್ಪರ್ಧೆಗಳು ನಡೆಯುತ್ತವೆ. ಇಲ್ಲಿ ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಪರಿಸರ, ಪ್ರಾಣಿ, ಪಕ್ಷಿ, ಜಲಮೂಲ, ಹವಾಮಾನ, ಅರಣ್ಯ, ಆಹಾರಗಳ ಕುರಿತು ಪ್ರಶ್ನೆಗಳಿರುತ್ತವೆ. ಕಡಿಮೆ ಅವಧಿಯಲ್ಲಿ ಹೆಚ್ಚು ಸಾಧನೆ ತೋರಿದವರಿಗೆ ಬಹುಮಾನ ನೀಡಲಾಗುತ್ತದೆ.

ಅಡಿಕೆ ಸುಲಿಯುವ ಸ್ಪರ್ಧೆಯಲ್ಲಿ ಮಹಿಳೆಯರ ಉತ್ಸಾಹ





ಕೃಷಿ ಜಯಂತಿ ಪ್ರಯುಕ್ತ ಕಾಯಿ ಸುಲಿಯುವ ಸ್ಪರ್ಧೆಯಲ್ಲಿ ಭಾಗಿಯಾದ ರೈತರು

ಕೃಷಿ ಜಯಂತಿ ಅಂಗವಾಗಿ ಮಠದ ವಿವಿಧ ಅಂಗಸಂಸ್ಥೆಗಳಿಂದ ರೈತರು, ರೈತ ಕುಟುಂಬದವರಿಗಾಗಿ ಸ್ಪರ್ಧೆ, ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಇವುಗಳ ಜತೆ ಕೃಷಿ ಕ್ಷೇತ್ರದ ಸಾಧಕರಿಗೆ ಕೃಷಿ ಕಂಠೀರವ, ಕೃಷಿಕ ಮಹಿಳೆ, ಅವಿಭಕ್ತ ಕೃಷಿ ಕುಟುಂಬ, ಕೃಷಿ ಕುಶಲಕರ್ಮಿ ಪ್ರಶಸ್ತಿ ನೀಡಿ ಸನ್ಮಾನಿಸಲಾಗುತ್ತದೆ. ಜಯಂತಿ ಪೂರ್ವದಲ್ಲಿ ಆಮೂಲಾಗ್ರ ಪರಿಶೀಲಿಸಿ ಉತ್ತಮರನ್ನು ಆಯ್ಕೆ ಮಾಡಿ ಈ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಆ ಮೂಲಕ ಸಾಮಾಜಿಕವಾಗಿ ಕೃಷಿಕರನ್ನೂ ಗೌರವದಿಂದ ಕಾಣುವ ಕೆಲಸ ಆಗುತ್ತಿದೆ.

ಇದರ ಜತೆಗೆ ಮಠದ ಮಾತೃಮಂಡಲದ ಸಹಕಾರದಲ್ಲಿ ಮಹಿಳೆಯರಿಗಾಗಿಯೇ ಕೃಷಿ ಸಂಬಂಧಿತ ಪರಿಕರಗಳಿಂದ ಸ್ಥಳದಲ್ಲೇ ಆರತಿ ತಾಟು ತಯಾರಿಸುವ ಸ್ಪರ್ಧೆ, ಏಕ್ ಮಿನಿಟ್ ಸ್ಪರ್ಧೆ, ಕೃಷಿ ಪದಬಂಧ, ಚಾಲಿ ಸುಲಿಯುವ, ಪುರುಷರಿಗೆ ತೆಂಗಿನಕಾಯಿ ಸುಲಿಯುವ, ಶಂಖನಾದ ಸ್ಪರ್ಧೆ ಹಾಗೂ 55 ವರ್ಷ ಮೇಲ್ಪಟ್ಟ ಪುರುಷ ಹಾಗೂ ಮಹಿಳೆಯರಿಗೆ ಕೃಷಿ ಸಂಬಂಧಿ ಛದ್ಮವೇಷ ಸ್ಪರ್ಧೆ ನಡೆಸಲಾಗುತ್ತದೆ. ನೂರಾರು ಕೃಷಿಕರು ಇದರಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದಾರೆ. ಇವುಗಳ ಜತೆ ರೈತರಿಗೆ ಆಧುನಿಕ, ಸಾಂಪ್ರಾಯಿಕ ಬೇಸಾಯದ ಬಗ್ಗೆ ಬೆಂಗಳೂರು, ದೆಹಲಿಯಿಂದ ಕೃಷಿ ತಜ್ಞರು ಬಂದು ಉಪನ್ಯಾಸ ನೀಡುತ್ತಾರೆ. ಒಟ್ಟಾರೆ ಕೃಷಿ ಜಯಂತಿ ಅಂಗವಾಗಿ ನಡೆಯುವ ಎಲ್ಲ ಕಾರ್ಯಕ್ರಮಗಳು ರೈತರಿಗೆ ಮೀಸಲು. ಶಾಸ್ತ್ರೀಯ ಆಚರಣೆಗಳ ಪರಿಧಿಯಲ್ಲೇ ಇದ್ದಿದ್ದ ನರಸಿಂಹ ಜಯಂತಿ ಸಂಭ್ರಮ ಈಗೀಗ ಕೃಷಿ ಜಯಂತಿಯ ಕಾರಣದಿಂದ ಸುತ್ತಲಿನ ಐದಾರು ಜಿಲ್ಲೆಗಳ ರೈತರು ತಮ್ಮ ಕೃಷಿ ಸಾಧನೆಗಳನ್ನು ಹಂಚಿಕೊಳ್ಳುವ ವೇದಿಕೆಯಾಗಿ ಮಾರ್ಪಟ್ಟಿದೆ.

'ಎರಡು ದಿನ ನಡೆಯುವ ಕೃಷಿ ಜಯಂತಿಯಲ್ಲಿ ಸ್ಪರ್ಧೆಗಳ ಆಯೋಜನೆಯ ಕಾರಣ ಯುವ ಪೀಳಿಗೆ ಪಾಲ್ಗೊಳ್ಳುವಿಕೆ ಹೆಚ್ಚುತ್ತಿದೆ. ನಾಲ್ಕು ವರ್ಷದವರಿಂದ ಎಂಬತ್ತು ವರ್ಷದವರಿಗೆ ಕೇವಲ ಕೃಷಿಯೆಡೆ ತಿಳಿವಳಿಕೆ ಪಡೆಯಲು ಇದು ದಾರಿಯಾಗಿದೆ. ಆರಂಭದಲ್ಲಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಉತ್ತೇಜಿಸುವುದು, ಹಂತಹಂತವಾಗಿ ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಲ್ಲಿ ಪ್ರೋತ್ಸಾಹಿಸಲಾಗುತ್ತದೆ' ಎಂಬುದು ಮಠದ ಪ್ರಮುಖರ ಅಭಿಪ್ರಾಯ.

ಬೆಳೆಗಳಿಗೆ ರೋಗಬಾಧೆ, ಅಸ್ಥಿರ ಬೆಲೆ, ಸಾಲ ಬಾಧೆ, ಕೃಷಿ ಕೂಲಿಗಳ ಸಮಸ್ಯೆಗಳಿಂದ ಹತಾಶೆಯಲ್ಲಿರುವ ಕೃಷಿ ಕ್ಷೇತ್ರಕ್ಕೆ ಪುನಶ್ಚೇತನ ತುಂಬುವ ಆಶಯದಿಂದ ನಿರಂತರವಾಗಿ ಕೃಷಿ ಜಯಂತಿ ಆಚರಿಸಲಾಗುತ್ತದೆ' ಎಂದು ಮಠದ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳುತ್ತಾರೆ.

'ಜನಮಾನಸದಲ್ಲಿ ಅಧ್ಯಾತ್ಮದ ಬಗೆಗೆ ಒಲವು ಮೂಡಿಸುವುದು ಧಾರ್ಮಿಕ ಶ್ರದ್ಧಾ ಕೇಂದ್ರಗಳ ಮುಖ್ಯ ಆಶಯ. ಆದರೆ ರೈತರ ಹಿತವೂ ಮುಖ್ಯ. ಮಠದ ಶಿಷ್ಯವರ್ಗದ್ದು ಬಹುತೇಕ ಕೃಷಿ ಮೂಲವಾಗಿದ್ದು, ವರ್ತಮಾನದಲ್ಲಿ ಕೃಷಿ ವಲಯದಲ್ಲಿ ಹಲವು ಸಂಕಷ್ಟಗಳು ಇವೆ. ಇವುಗಳಿಗೆ ಪರಿಹಾರೋಪಾಯ ಹುಡುಕುವುದು ಕೂಡ ಮಠದ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಕೃಷಿ, ಕೃಷಿಕರಿಗಾಗಿಯೇ ಜಯಂತಿ ಸಂಘಟಿಸಲಾಗುತ್ತಿದೆ' ಎನ್ನುತ್ತಾರೆ ಅವರು.





ಮಿಸ್ಟರ್ ಬೋಗೀಸ್ ನಾಟಕದ ದೃಶ್ಯ

ರಂಗಭೂಮಿ

ದುರಾಸೆ ಗಡಿಯ ಮಿಸ್ಟರ್ ಬೋಗೀಸ್

ಎ. ಎನ್. ಪ್ರಸನ್ನ

ಧಾರ್ಮಿಕ ರಾಜಕೀಯ ಸಾಂಸ್ಕೃತಿಕ ಮುಂತಾದ ಕ್ಷೇತ್ರಗಳಲ್ಲಿ ದುರಾಸೆ ಹೆಚ್ಚು ಪ್ರತ್ಯಕ್ಷವಾಗಿರುತ್ತದೆ. ಅದು ಎಲ್ಲ ಬಗೆಯ ಮೌಲ್ಯಗಳನ್ನು, ಸಂಬಂಧಗಳನ್ನು ಬಲಿಗೊಡುವುದು ಸಾಮಾನ್ಯ. ಲಜ್ಜೆಯಿಲ್ಲದ ಅದಕ್ಕೆ ತನ್ನ ಉದ್ದೇಶ ಪೂರೈಸಿಕೊಳ್ಳಲು ಜಾಣತನವೇ ಆಯುಧ. ತಾನು ಬಯಸಿದ್ದೆಲ್ಲವನ್ನು ಪಡೆದು ಮಿತಿ ಮೀರಿದ ಗೆಲುವಿನಿಂದ ಬೀಗುವ ಅದು ಅಂತಿಮವಾಗಿ ಕೊನೆಗೊಳ್ಳುವ ರೀತಿಯನ್ನು ಅನನ್ಯವಾಗಿ ಪ್ರಸ್ತುತಪಡಿಸುವ ನಾಟಕ 'ಮಿಸ್ಟರ್ ಬೋಗೀಸ್'. ಒಟ್ಟಾರೆಯಾಗಿ ದುರಾಸೆಯನ್ನು ಕುರಿತು ಜನಸಮುದಾಯ ಧೃತಿಗೆಡಬೇಕಾಗಿಲ್ಲವೆಂಬ ಸಂದೇಶವನ್ನು ಮನಗಾಣಿಸುತ್ತದೆ.

ಇಂಗ್ಲೆಂಡಿನ ರೋಆಲ್ಡ್ ದಾಹ್ಲ್‌ನ ಪಾರ್ಸನ್ಸ್ ಪ್ಲೆಶರ್ ಕಥೆಯನ್ನು (ಅನುವಾದ: ಸಂತೋಷ್ ಕೌಲಗಿ) ಆಧರಿಸಿದ ನಾಟಕರೂಪ ಇತ್ತೀಚೆಗೆ ರಂಗಶಂಕರದಲ್ಲಿ ಪ್ರದರ್ಶನಗೊಂಡಿತು. ಇದರ ರಚನೆ, ವಿನ್ಯಾಸ, ನಿರ್ದೇಶನ ಎಚ್.ಕೆ.ದ್ವಾರಕನಾಥ್ ಅವರದು.

ಬೋಗೀಸ್ ಸ್ಥಿತಿವಂತನಲ್ಲ. ಮೇಲ್ವರ್ಗದವನೂ ಅಲ್ಲ. ಅದನ್ನು ಹೊಂದುವುದಕ್ಕಾಗಿಯೇ ಅವನಿಗೆ ದುರಾಸೆಯ ಗೀಳು. ಅವನು ಬಹಳ ಬೆಲೆ ಬಾಳುವ ಪುರಾತನ ವಸ್ತುಗಳನ್ನು ಅತಿ ಕಡಿಮೆ ಕ್ರಯಕ್ಕೆ ಕೊಂಡುಕೊಂಡು ವಾರಕ್ಕೊಮ್ಮೆ ಹರಾಜು ಹಾಕಿ ಅತಿ ಹೆಚ್ಚು ಗಳಿಸುವ ಅಭ್ಯಾಸ ಮಾಡಿಕೊಂಡಿರುತ್ತಾನೆ. ಈ ವ್ಯಕ್ತಿಯ ಮನಸ್ಸು ವರ್ತಿಸುವ ಮತ್ತು ಅವನನ್ನು ಬೆಂಬಲಿಸುವ ರೀತಿಯನ್ನು ರೂಪಕದ ರೀತಿಯಲ್ಲಿ ಮಹದೇವ್ ಪಾತ್ರವನ್ನು ಬಳಸಿಕೊಳ್ಳಲಾಗಿದೆ.

ಸಂಬಂಧಗಳ ಮಹತ್ವವನ್ನು ಕಡೆಗಣಿಸುವ ಅವನು ಒಂಟಿಯಾಗಿ ಬಾಳುತ್ತಿರುವ ತನ್ನ ತಾಯಿಯನ್ನು ಕೂಡ ಬಹಳ ಕಾಲದಿಂದ ಭೇಟಿಯಾಗಿರುವುದಿಲ್ಲ. ಮೊದಲ ದೃಶ್ಯದಲ್ಲಿಯೇ ಇಡೀ ರಂಗಸ್ಥಳದ ಮೇಲೆ ಅವನ ತಾಯಿಯನ್ನಷ್ಟೇ ಬೆಳಗಿದ ಬೆಳಕು ಆಕೆಯ ವಿಷಾದ ಮನಸ್ಥಿತಿಯನ್ನು ಬಿಂಬಿಸುತ್ತದೆ. ಆ ಭಾವಕ್ಕೆ ಪೂರಕವಾಗಿ ಮೆಲು ಸಂಗೀತವಿದೆ. ಇದರಿಂದ ಸ್ಫುರಿಸುವ ನೋವಿನ ಎಳೆಯೊಂದು ಪ್ರೇಕ್ಷಕರನ್ನು ಸುತ್ತುವರಿಯುತ್ತದೆ.

ಆನಂತರದ ದೃಶ್ಯದಲ್ಲಿನ ರಂಗಸಜ್ಜಿಕೆ ನಾಟಕದ ಆಧಾರವಾಗಿ ತೋರುತ್ತದೆ. ಉಳಿದ ದೃಶ್ಯಗಳಲ್ಲಿ ತ್ವರಿತಗತಿಯಲ್ಲಿ ಅಷ್ಟಿಷ್ಟು ಮಾರ್ಪಾಡಾಗುತ್ತದೆ. ಇಷ್ಟಲ್ಲದೆ ಆಯಾ ದೃಶ್ಯದ ಪಾತ್ರಗಳು ಅವುಗಳ ಭಾಗವೆನಿಸಿದಂತೆ ಕಾಣುತ್ತವೆ. ಇದಕ್ಕೆ ಪಾತ್ರಗಳು ಅವುಗಳೊಂದಿಗೆ ನಡೆದುಕೊಳ್ಳುವ ಬಗೆ ವಿಶೇಷವೆನಿಸುತ್ತದೆ. ಹೀಗೆ ಬದಲಾಗುವ ರಂಗಸಜ್ಜಿಕೆ ಅಂತಿಮವಾಗಿ ಬೋಗೀಸ್‌ನ ಮನಸ್ಥಿತಿಯನ್ನು ಬಿಂಬಿಸುವಂತೆ ಅಂದಗೆಟ್ಟು ನೆಲಸಮವಾಗುತ್ತದೆ.

ನಾಟಕ ಮುಂದುವರಿದಂತೆ ಅವನು ದುರಾಸೆಯ ಮೆಟ್ಟಿಲುಗಳನ್ನು ಹತ್ತುತ್ತ ಹೋಗುತ್ತಾನೆ. ಸುತ್ತಲ ಹಳ್ಳಿಗಳಿಗೂ ಅವನ ಹುಡುಕಾಟ ಹಬ್ಬುತ್ತದೆ. ಮೊದಲಿಗಿಂತಲೂ ಹೆಚ್ಚು ಪುರಾತನ ವಸ್ತುಗಳ ಹುಡುಕಾಟದಲ್ಲಿ ತೊಡಗುತ್ತಾನೆ. ಪ್ರಾರಂಭದಲ್ಲಿ ಅವನನ್ನು ಅನುಮಾನಿಸಿದವರು, ಆದರಿಸಿದವರು ಅವನ ಜಾಣತನದ ಮಾತುಗಾರಿಕೆಗೆ ಬಲಿಯಾಗುತ್ತಾರೆ. ಇವುಗಳ ವ್ಯಂಗ್ಯವೆಂದರೆ ತಾವು ಕಳೆದುಕೊಂಡದ್ದೇನು, ಅವುಗಳ ಬೆಲೆ ಈಗ ಎಷ್ಟಿರಬಹುದು ಎನ್ನುವುದರ ಕಿಂಚಿತ್ ಅರಿವು ಆ ಮುಗ್ಧರಿಗೆ, ಅಮಾಯಕರಿಗೆ ಇಲ್ಲದಿರುವುದು. ಎಲ್ಲವನ್ನೂ ಬೋಗೀಸ್ ನ ಮಾತು, ವರ್ತನೆಗಳು ನುಂಗಿ ಹಾಕಿರುತ್ತದೆ.

ಇವೆಲ್ಲವೂ ತಲೆಕೆಳಗಾಗುವ ಪ್ರಸಂಗ ಜರುಗುತ್ತದೆ. ಅದೊಂದು ಮನೆಯಲ್ಲಿ ಅತ್ಯಂತ ಪುರಾತನವಾದ, ಅತಿ ಹೆಚ್ಚು ಬೆಲೆ ಬಾಳುವ ಮೇಜೊಂದನ್ನು ಕನಿಷ್ಠ ಕ್ರಯಕ್ಕೆ ಕೊಳ್ಳಲು ಮನೆಯಲ್ಲಿದ್ದವರನ್ನು ಒಪ್ಪಿಸಿರುತ್ತಾನೆ. ಆ ಮನೆಯಲ್ಲಿ ವಾಸಿಸುವ ಮೂವರು ಹೆಣ್ಣು ಮಕ್ಕಳ ಮುಂದೆ ಹೇಳಿದ ಸಣ್ಣ ತಪ್ಪಿನಿಂದಾಗಿ ಅವನಿಗೆ ಸಂಪೂರ್ಣ ಸೋಲುಂಟಾಗುತ್ತದೆ. ಮೈಸೂರು ರಂಗಾಯಣದ ಕಲಾವಿದರಾದ (ಕೃಷ್ಣಕುಮಾರ ನಾರ್ಣ ಕಜೆ (ಬೋಗೀಸ್), ಮಹದೇವ್ (ಮನಸ್ಸು), ಪ್ರಮೀಳಾ ಬೆಂಗ್ರೆ, ಎಂ.ಎಸ್ ಗೀತಾ, ಬಿ.ಎಂ. ಶಶಿಕಲಾ ಮತ್ತು ಕೆ.ಆರ್.ನಂದಿನಿ ಸಮರ್ಥವಾಗಿ ಸಹಜವೆನಿಸುವಂತೆ ಅಭಿನಯಿಸಿದ್ದಾರೆ.

ಸೂರ್ಯನ ಬೆಳಕನ್ನು ರಂಗದ ಮೇಲೆ ತಂದ ಪುಟಾಣಿಗಳು



ಎಚ್.ಎಸ್. ನವೀನ ಕುಮಾರ್ ಹೊಸದುರ್ಗ

ಶಿವಮೊಗ್ಗ ರಂಗಾಯಣದಲ್ಲಿ ನಡೆದ 'ಚಿಣ್ಣರ ಸಿಹಿಮೊಗೆ' ಮಕ್ಕಳ ರಂಗ ಶಿಬಿರ, ಮಕ್ಕಳೇ ಪ್ರದರ್ಶಿಸಿದ 'ಸೂರ್ಯ ಬಂದ' ಎಂಬ ಸುಂದರ ನಾಟಕದಿಂದ ಕಳೆಗಟ್ಟಿತ್ತು. ವೈದೇಹಿ ಅವರು ರಚಿಸಿದ ಈ ನಾಟಕ ಮಕ್ಕಳಿಗೆ ಮುದ ನೀಡುವ ಒಂದು ಫ್ಯಾಂಟಸಿ ಕತೆ. ಆದರೆ ಅದರಲ್ಲಿ ಬದುಕು, ಪರಿಸರ ಕುರಿತಾಗಿ ವಿಶೇಷ ಸಂದೇಶಗಳಿದ್ದವು. ಮಕ್ಕಳು ಗುಡ್ಡ ಒಂದಕ್ಕೆ ಚಾರಣ ಹೋಗಿರುತ್ತಾರೆ. ಅಲ್ಲಿನ ಹಳ್ಳಿಯೊಂದರಲ್ಲಿ ಬೆಳಕೇ ಇರುವುದಿಲ್ಲ. ಆ ಊರಿನವರೆಲ್ಲರೂ ನಿದ್ರಾದೇವಿಯ ಪ್ರಭಾವಕ್ಕೊಳಗಾಗಿ ಸದಾ ನಿದ್ರಿಸುತ್ತಿರುತ್ತಾರೆ! ಏಕೆಂದರೆ ಆ ಊರಿನ ಸದಾ ನಿದ್ರಿಸುವ ರಾಕ್ಷಸನೊಬ್ಬ ತನ್ನ ನಿದ್ರೆಗೆ ಅಡ್ಡಿಯಾಗುತ್ತಿದೆ ಎಂದು ಸೂರ್ಯನನ್ನು ದೊಡ್ಡ ಗುಡ್ಡದ ಹಿಂದೆ ಬಚ್ಚಿಟ್ಟಿರುತ್ತಾನೆ. ಈ ಕಥೆಯನ್ನು ಆ ಊರಿನ ಅಜ್ಜ ಪುಟಾಣಿಗಳಿಗೆ ಹೇಳುತ್ತಾನೆ. ಮಕ್ಕಳು ಹೇಗಾದರೂ ಮಾಡಿ ಆ ರಾಕ್ಷಸನಿಂದ ಸೂರ್ಯನನ್ನು ರಕ್ಷಿಸಿ ಹೊರ ತರಬೇಕು ಎಂದು ಹೊರಡುತ್ತಾರೆ. ಬೆಟ್ಟ ಕಡಿಯಬೇಕು ಎಂದು ಯೋಚಿಸಿದಾಗ ಅದರಿಂದ ಆಗುವ ಪರಿಸರ ಹಾನಿಯ ಬಗ್ಗೆ ಚಿಂತನೆ ಮಾಡುವ ಮಕ್ಕಳು ಕೊನೆಗೆ ಸೂರ್ಯನ ಕುದುರೆಗಳ ಸಹಾಯದಿಂದ ಬೆಟ್ಟವನ್ನೇ ಸರಿಸಿ, ಬೆಟ್ಟದ ಮರೆಯಿಂದ ಸೂರ್ಯ ಹೊರಬರುವಂತೆ ಮಾಡುತ್ತಾರೆ ಹಾಗೂ ಊರಿನ ಜನರನ್ನು ನಿದ್ರೆಯಿಂದ ಮುಕ್ತಗೊಳಿಸುತ್ತಾರೆ. ಇವರಿಗೆ ತೊಂದರೆ ಕೊಡಲು ಬರುವ ನಿದ್ರಾ ರಾಕ್ಷಸನನ್ನು ಬೆಳಕು ತೋರಿಸಿ ಬೆದರಿಸುವ ಕತ್ತಲಿನಾಚೆಗೆ ಬೆಳಕಿದೆ ಎಂಬ ಸಂದೇಶವನ್ನು ಸಾರುತ್ತಾರೆ.

ಕತ್ತಲೆ ಕಳೆಯುವ ಬೆಳಕು ಮೂಡಿಸಲು ನಾವು ನಮ್ಮದೇ ಪ್ರಯತ್ನ ಮಾಡಬೇಕಷ್ಟೇ. ಮನಸ್ಸು ಮಾಡಿದರೆ ಮಕ್ಕಳು ಬೆಟ್ಟವನ್ನೂ ಸರಿಸಬಲ್ಲರು. ತಮಗೆ ತೊಂದರೆ ಕೊಟ್ಟ ರಾಕ್ಷಸನನ್ನೇ ಕೊನೆಗೆ ಕ್ಷಮಿಸುವ ಮಕ್ಕಳು, ತಪ್ಪು ಮಾಡಿದವರನ್ನೂ ಕ್ಷಮಿಸಿ ನಮ್ಮವರನ್ನಾಗಿಸಿಕೊಳ್ಳಬೇಕೆಂಬ ಸಹಿಷ್ಣುತೆಯ ಪಾಠ ಹೇಳುತ್ತಾರೆ. ಯಾವುದನ್ನೇ ಆಗಲಿ ಪರಿಸರಕ್ಕೆ ಹಾನಿಯಾಗದಂತೆ ಮಾಡಬೇಕು ಎನ್ನುವ ಇನ್ನೊಂದು ಮಹತ್ತರ ಸಂದೇಶವನ್ನು ಕಥೆಯ ಮೂಲಕ ಹೇಳುತ್ತದೆ, ಈ ನಾಟಕ.

ಕುಂದಾಪುರ ಸಮೀಪದ ತೆಕ್ಕಟ್ಟೆಯ ಧಮನಿ ಟ್ರಸ್ಟ್ ಪ್ರಸ್ತುತ ಪಡಿಸಿದ ಈ ನಾಟಕದ ನಿರ್ದೇಶಕರು ರಂಜಿತ್ ಶೆಟ್ಟಿ ಕುಕ್ಕೆಡೆ. ಹಾರುವ ಹಕ್ಕಿಗಳು, ಚಲಿಸುವ ಬೆಟ್ಟ, ಸೂರ್ಯನ ಕುದುರೆ ರಥ ಎಲ್ಲವನ್ನು ಅತ್ಯುತ್ತಮ ಬೆಳಕಿನ ಸಂಯೋಜನೆಯೊಂದಿಗೆ ರಂಗದ ಮೇಲೆ ತಂದವರು ಶ್ರೀಶ ತೆಕ್ಕಟ್ಟೆ. ತಕ್ಕ ಸಂಗೀತ ನೀಡಿದವರು ರೋಶನ್ ಎಸ್ ಬೈಕಾಡಿ.

ನಾಟಕದ ಬಹುಮುಖ್ಯ ಹೈಲೈಟ್ ಮಕ್ಕಳ ಅತ್ಯುತ್ತಮ ಅಭಿನಯ. ರಾಕ್ಷಸನ ಪಾತ್ರಧಾರಿ ಅಭಿನಯ ಚೇತೋಹಾರಿಯಾಗಿತ್ತು.



ಸೂರ್ಯ ಬಂದ ನಾಟಕದ ದೃಶ್ಯ

ಮುನ್ನೋಟ 04-05-2025 ರಿಂದ 10-05-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಹೆಚ್ಚು ಆತ್ಮವಿಶ್ವಾಸ ಹೊಂದಿರುವಿರಿ. ಆದಾಯವು ನಿಮ್ಮ ನಿರೀಕ್ಷಿತ ಮಟ್ಟದಲ್ಲಿರುತ್ತದೆ. ಬಂಧುಗಳೊಂದಿಗೆ ಮಾಡುವ ವ್ಯವಹಾರಗಳಲ್ಲಿ ನಷ್ಟವಿರುತ್ತದೆ. ವಿದ್ಯಾರ್ಥಿಗಳಿಗೆ ಈಗ ಉತ್ತಮ ಫಲಿತಾಂಶವಿರುತ್ತದೆ. ಮಕ್ಕಳಿಂದ ನಿಮಗೆ ಸಹಕಾರ ಸಿಗುತ್ತದೆ. ಧರ್ಮಕಾರ್ಯಗಳಿಗಾಗಿ ಮನೆಯಲ್ಲಿ ಹಣ ಖರ್ಚಾಗುತ್ತದೆ. ಸಂಗಾತಿಯ ಖರ್ಚು ನಿಮಗೆ ಗಾಬರಿ ಹುಟ್ಟಿಸುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಒಡಹುಟ್ಟಿದವರಿಂದ ಕಿರಿಕಿರಿಯನ್ನು ಎದುರಿಸಬೇಕಾಗುತ್ತದೆ. ಸರ್ಕಾರಿ ವ್ಯವಹಾರಗಳಲ್ಲಿ ಯಾವುದೇ ರೀತಿಯ ಲಾಭವಿರುವುದಿಲ್ಲ. ಸಂಗಾತಿಯ ವ್ಯವಹಾರಗಳಿಂದ ಹಣ ನಷ್ಟವಾಗಬಹುದು. ಅವಿವಾಹಿತರಿಗೆ ಹಿರಿಯರ ಮೂಲಕ ವಿವಾಹ ಸಂಬಂಧಗಳು ಒದಗುವ ಸಾಧ್ಯತೆಗಳಿವೆ. ಹಣಕಾಸಿನ ವ್ಯವಹಾರ ಮಾಡುವವರಿಗೆ ಪ್ರಗತಿ ಇರುವುದಿಲ್ಲ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ನಿಮ್ಮಲ್ಲಿ ವೃತ್ತಿಪರತೆ ಹೆಚ್ಚಿರುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಜನ ಸಮೂಹದ ನಡುವೆ ಮಾತನಾಡುವಾಗ ಎಚ್ಚರವಿರಲಿ. ನಿಮ್ಮ ಉದ್ಯೋಗದಲ್ಲಿ ಪ್ರಗತಿಯನ್ನು ಕಾಣಬಹುದು. ನಿಂತಿದ್ದ ವಿದ್ಯಾಭ್ಯಾಸವನ್ನು ಈಗ ಮುಂದುವರಿಸಬಹುದು. ಕೃಷಿಗಾಗಿ ಹೆಚ್ಚು ಬಂಡವಾಳ ಹೂಡುವುದು ಬೇಡ. ಬಂಧುಗಳ ನಡುವೆ ಹಣದ ವ್ಯವಹಾರ ಬೇಡ, ಇದು ನಷ್ಟಕ್ಕೆ ಕಾರಣವಾಗಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಮನಸ್ಸಿನಲ್ಲಿ ದೃಢ ನಿರ್ಧಾರಗಳಿರುವುದಿಲ್ಲ. ವೃತ್ತಿಯಲ್ಲಿ ಆದಾಯ ಹೆಚ್ಚುತ್ತದೆ. ಹಿರಿಯ ಮಹಿಳೆಯರಿಂದ ಆಸ್ತಿ ಖರೀದಿಗೆ ಸಹಾಯ ದೊರೆಯುತ್ತದೆ. ಕೃಷಿ ವಿದ್ಯಾರ್ಥಿಗಳಿಗೆ ಅಭಿವೃದ್ಧಿ ಇರುತ್ತದೆ. ಹಣಕಾಸು ಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಆದಾಯಕ್ಕಿಂತ ನಷ್ಟವೇ ಹೆಚ್ಚಾಗುತ್ತದೆ. ಸಂಗಾತಿಯಿಂದ ಹೆಚ್ಚು ಸಹಕಾರ ದೊರೆಯುತ್ತದೆ. ಹಿರಿಯರ ಜೊತೆಗೂಡಿ ಮಾಡುವ ವ್ಯವಹಾರಗಳಲ್ಲಿ ನಿಮಗೆ ಹೆಚ್ಚು ಲಾಭವಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಮಹಿಳೆಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಬರಬಹುದು. ಕೃಷಿಯಿಂದ ಲಾಭವಿರುವುದಿಲ್ಲ. ವೃತ್ತಿಪರ ಪರೀಕ್ಷೆಗಳನ್ನು ತೆಗೆದುಕೊಂಡು ಉನ್ನತ ಸ್ಥಾನ ಪಡೆಯಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಹಿರಿಯರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ಸಂಗಾತಿ ನಡೆಸುವ ವ್ಯವಹಾರಗಳಲ್ಲಿ ಅನಿರೀಕ್ಷಿತ ಲಾಭವಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಧರ್ಮಕಾರ್ಯಗಳಲ್ಲಿ ಆಸಕ್ತಿ ಹೆಚ್ಚುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಪಶು ಸಂಗೋಪನೆ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ಹಿರಿಯರಿಂದ ಹೆಚ್ಚಿನ ಧನಸಹಾಯವನ್ನು ನಿರೀಕ್ಷೆ ಮಾಡಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಮಾತ್ರ ಇರುತ್ತದೆ. ಹಳೆಯ ಕೀಲು ನೋವುಗಳು ಮತ್ತೆ ಕಾಣಿಸಬಹುದು. ಸಂಗಾತಿ ನಡೆಸುವ ವ್ಯವಹಾರಗಳಲ್ಲಿ ಸ್ವಲ್ಪ ಲಾಭವನ್ನು ಕಾಣಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಆತ್ಮವಿಶ್ವಾಸವು ಬಹಳ ಹೆಚ್ಚಾಗಿರುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಹಿರಿಯರಿಂದ ಅಡ್ಡಿ ಬರಬಹುದು. ಕೃಷಿಭೂಮಿ ಅಭಿವೃದ್ಧಿಪಡಿಸುವ ಯೋಗವಿದೆ. ವಿದೇಶಿ ವ್ಯವಹಾರ ಮಾಡುವವರು ಬಹಳ ಎಚ್ಚರದಿಂದ ಮಾಡಿರಿ, ಕಾನೂನಿನ ತೊಡಕುಗಳು ಎದುರಾಗುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಹಿರಿಯರ ನಡುವೆ ಸಂಘರ್ಷ ಬೇಡ. ನಿಮ್ಮ ವಿರುದ್ಧ ಇದ್ದವರೇ ಈಗ ನಿಮ್ಮ ಪರವಾಗಿ ಮಾತನಾಡುವರು. ನವೀನ ರೀತಿಯ ಕೃಷಿ ಉಪಕರಣಗಳನ್ನು ತಯಾರಿಸಿ ಮಾರುವವರಿಗೆ ಹೆಚ್ಚು ಲಾಭವಿರುತ್ತದೆ. ಸಂಗಾತಿಯಿಂದ ಸಾಕಷ್ಟು ಆರ್ಥಿಕ ಸಹಾಯವನ್ನು ನಿರೀಕ್ಷೆ ಮಾಡಬಹುದು. ಕಚ್ಚಾ ಅದಿರನ್ನು ತೆಗೆಯುವವರಿಗೆ ಬೇಡಿಕೆ ಬರುತ್ತದೆ. ತಾಯಿಯ ಜತೆ ಮುಸುಕಿನ ಗುದ್ದಾಟವಾಗಬಹುದು.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಸಮಾಜಕ್ಕಾಗಿ ಸಾಕಷ್ಟು ಗೌರವಯುತ ಕೆಲಸಗಳನ್ನು ಮಾಡುವಿರಿ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ನಿಮ್ಮ ಶತ್ರುಗಳೇ ನಿಮ್ಮ ಪರವಾಗಿ ನಿಲ್ಲುವರು. ಹಣಕಾಸಿನ ವ್ಯವಹಾರಗಳು ನಷ್ಟಕ್ಕೆ ಕಾರಣವಾಗಬಹುದು. ಉದರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಯ ಜೊತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಹೆಚ್ಚು ಲಾಭವನ್ನು ಕಾಣಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವೃತ್ತಿಯಲ್ಲಿ ಒತ್ತಡ ಹೆಚ್ಚಾದರೂ ನಿಭಾಯಿಸಿಕೊಂಡು ಕೆಲಸ ಮಾಡುವಿರಿ. ಆದಾಯವು ಕಡಿಮೆ ಇರುತ್ತದೆ. ಬದಲಿ ವ್ಯವಹಾರದ ಕಡೆಗೆ ಹೆಚ್ಚು ಗಮನ ಕೊಡುವಿರಿ. ಸರ್ಕಾರಿ ಸಂಘ-ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಉತ್ತಮ ಸ್ಥಾನ ದೊರೆಯುವ ಸಾಧ್ಯತೆಗಳಿವೆ. ಮಕ್ಕಳಿಂದ ನಿಮಗೆ ಗೌರವ ದೊರೆಯುತ್ತದೆ. ರಕ್ತ ಸಂಬಂಧಿ ದೋಷಗಳಿರುವವರು ಹೆಚ್ಚು ಎಚ್ಚರವಹಿಸಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿರಿಯರು ಸಾಕಷ್ಟು ಸಮಾಜಮುಖಿಯಾಗಿ ಕೆಲಸ ಮಾಡುವರು. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಸ್ವಂತ ಆಲೋಚನೆಯಿಂದ ಆದಾಯವನ್ನು ವೃದ್ಧಿಸಿಕೊಳ್ಳಬಹುದು. ವಿದೇಶಿ ವ್ಯವಹಾರಗಳಿಂದ ಹೆಚ್ಚು ಲಾಭವನ್ನು ಪಡೆಯಬಹುದು. ಆಸ್ತಿ ಖರೀದಿಗೆ ಹಣ ಹೊಂದಿಸಲು ದಾರಿ ಕಾಣುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ವಿದೇಶಿ ವ್ಯಾಮೋಹ ಬಹಳವಾಗಿರುತ್ತದೆ. ಆದಾಯವು ಉತ್ತಮವಾಗಿರುತ್ತದೆ. ನಿಮ್ಮ ಕೆಲವೊಂದು ಕೆಲಸಗಳಿಗೆ ಹಿರಿಯರ ಬೆಂಬಲ ದೊರೆಯುತ್ತದೆ. ವಿದೇಶದಲ್ಲಿ ಇರುವವರಿಗೆ ಸ್ಥಿರಾಸ್ತಿ ಮಾಡುವ ಯೋಗವಿದೆ. ವೃತ್ತಿಯಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ಮೌನವಾಗಿರುವುದು ಒಳ್ಳೆಯದು.

ಪದಬಂಧ 2890



ಮೇಲಿನಿಂದ ಕೆಳಕ್ಕೆ
1. ಸಂಸ್ಕೃತದಲ್ಲಿ ಇಪ್ಪತ್ತು ಕೂಡುವ ಸಂಖ್ಯಾಸೂಚಿ 3
2. ಉಪ್ಪಿನಂತೆ ಹೊಳೆವ ಆಕರ್ಷಕ ಹೆಣ್ಣು 3
3. ಕೊನೆಗೊಂದು ಪರ್ಯಾಯ 3
4. ಅತಿ ಶೋಕದ ದೃಶ್ಯ ಕಂಡಾಗ ಇದು ಕಿತ್ತುಬರುತ್ತದೆ 3
7. ಭೂಮಿಯಂತಹ ಬುದ್ಧಿಯುಳ್ಳವಳು 4
9. ಕೇಸರಿ ಹಲ್ವಕ್ಕೆ ಉತ್ತರ ಭಾರತದಲ್ಲಿ ಬಳಸುವ ತರಕಾರಿ 3
11. ಜನಪದ ಹಾಡಿನಲ್ಲಿ ಬರುವ ಸತೀಮಣಿ 3
12. ದೇವರಂಥ ಒಡೆಯ 3
13. ಹೃದಯವೇ ಮಿಡಿಯದ ಕ್ರೂರಿ 3
15. ಹಿಂದಿಯವರಿಗೆ ಹೊರಗಿನವ 3
16. ಬಯಸಿದ್ದನ್ನೆಲ್ಲಾ ಕೊಡುವ ಹಸು 4
17. ಪ್ರಪಂಚದಿಂದ ಇಳಿದು ಬಂದ ವ್ಯಾಜ್ಯ 3
19. ಮತ್ತೆ ಮತ್ತೆ ಪರಿಮಳ ಬೀರುವ ಪತ್ರೆ 3
20. ಪಡೆದಿದ್ದರ ಮೇಲೊಂದಿಷ್ಟು 3
21. ಸುವಾಸನೆಯ ಗ್ರಾಮ್ಯ ರೂಪ 3
22. ಕುಂಬಾರನಿಗೆ ವರ್ಷವಾದರೆ ಇದಕ್ಕೆ ನಿಮಿಷ ಮಾತ್ರ 3
23. ಮರಳಿ ಪ್ರಯತ್ನಮಾಡು 3

ಎಡದಿಂದ ಬಲಕ್ಕೆ
1. ಅಚಲವಾಗಿ ಶೋಭಿಸುವ ಭಾರತದ ಅಗ್ರ ಹಿಮರಹಿತ ಪರ್ವತ ಶ್ರೇಣಿ 4
3. ದ.ರಾ ಬೇಂದ್ರೆಯವರ ಮಾತೃ ಸ್ವರೂಪಿ 3
5. ಕಾಡಿನ ಸಸ್ಯಗಳಿಂದ ಬಂದ ತುಪ್ಪ 4
6. ಮಹಾಶಿವನ ಕಣ್ಣಿನಂತಿರುವ ಬೀಜ 3
8. ಸುತ್ತಿ ಬಂಧಿಸುವ ಸ್ಕ್ರೂವಿನ ಕನ್ನಡಾವತಾರ 4
10. ಮಗನಿಗಿಂತ ಒಂದು ಅಕ್ಷರ ಹೆಚ್ಚಾಗಿ ಪಡೆದವಳು 3
12. ಒಂದಲ್ಲ ಒಂದು ರೀತಿ ಕಾಡುವ ಮದನನ ತಂದೆ 5
14. ಏಳು ಬೆಟ್ಟದ ಮೇಲೆ ನಿಂತ ಶ್ರೇಷ್ಠ ಸ್ವಾಮಿ 4
16. ಕೇರಳದ ಚಿಕ್ಕಪ್ಪ ವಾಯಸ ದೊರೆಯಾಗಿ ಹೀಗೆ 4
18. ದಯೆಯೇ ತುಂಬಿರುವ ತಾಯಿ 5
20. ನೀರು ತುಂಬಿಸುವ ದೊಡ್ಡ ಪಾತ್ರೆ 3
22. ವ್ಯಂಗ್ಯಮಾತಿನಲ್ಲಿ ದೊರೆಯಾಗುವ ಪುತ್ರ 4
24. ವಾದ್ಯಗಳನ್ನು ಮಾತಾಡವಂತೆ ಮಾಡು 3
25. ವಿವೇಕವಿಲ್ಲದ ಮದ್ದು, ಬುದ್ಧಿ ಇಲ್ಲದವ 4
26. ಈ ಮಾಲನ್ನು ತಲೆಗೆ ಸುತ್ತಿಕೊಂಡರೆ ಶೋಭೆ 3
27. ಉದ್ರೇಕಗೊಳ್ಳುವಂತೆ ಮಾಡು 4

ಪದಬಂಧ ಉತ್ತರ -2889

ಮೇಲಿಂದ ಕೆಳಕ್ಕೆ
1. ಆಸನ 2.ಗಾಯಕ 3.ತೇಜಪುಂಜ 4.ಕುಲಿನ 7.ವಸಂತಿ 9.ವರ್ಧನ 10.ಅಂಬಾಭವಾನಿ 12. ರುದ್ರೇಶ 13.ಕಪರೂ 15. ನಾರದ 17.ಪದುಮ 18.ಮಾಸಪೂಜೆ 19.ಪಾಯಸ 20.ಸಮರ 21.ತನನ

ಎಡದಿಂದ ಬಲಕ್ಕೆ
1.ಆಕಾಶಗಂಗಾ 3.ತೇಪೆಹಾಕು 5.ಯತಿರಾಜ 6.ನವನಾಟಕ 8.ಪುಂಸವನ 10.ಅಂಬುಜ 11.ತಿರುಮಲಾಂಬಾ 13.ಕನಕ 14.ವಿನಾಶ 16.ವಾನರರೂಪ 18.ಮಾಸಿನಿ 19.ಪಾದರಸ 20.ಸಹಾಯಮತ 22.ಪೂರ್ವಾಶ್ರಮ 23.ಸವಿಸಂಜೆ 24.ರವಿದರ್ಶನ



ಬಂಗಾರದ ಹೊಸ್ತಿಲಲ್ಲಿ ಕಾಂತಾವರ ಕನ್ನಡ ಸಂಘ

ಕೋಡಿಬೆಟ್ಟು ರಾಜಲಕ್ಷ್ಮಿ

ಈ ವರ್ಷ ಸುವರ್ಣ ಮಹೋತ್ಸವದಲ್ಲಿರುವ ಕಾಂತಾವರ ಕನ್ನಡ ಸಂಘದ ಹೆಜ್ಜೆಗಳು ಪ್ರತಿಯೊಬ್ಬ ಕನ್ನಡಿಗನಿಗೂ ಸ್ಫೂರ್ತಿಯಾಗುವಂತಿದೆ. ವೈದ್ಯಕೀಯ ಪದವಿ ಪಡೆದರೆ ಸಾಲದು, ತಾನು ಗಳಿಸಿದ ಜ್ಞಾನದಿಂದ ಅಗತ್ಯ ಇರುವವರಿಗೆ ನೆರವು ದೊರೆಯಬೇಕು ಎಂಬ ಸದಾಶಯ ಹೊಂದಿದ್ದ ಯುವಕ, ಗ್ರಾಮೀಣ ಪ್ರದೇಶದ ಜನರ ಸೇವೆಯನ್ನೂ ಕನ್ನಡಮ್ಮನ ಸೇವೆಯನ್ನೂ ನಿಸ್ವಾರ್ಥವಾಗಿ ಮಾಡುತ್ತ ಸಾಗಿದ ಸುಂದರ ಹಾದಿಯಿದು.

ಕಾರ್ಕಳದ ಗ್ರಾಮೀಣ ಪ್ರದೇಶದಲ್ಲಿ ತಾಲ್ಲೂಕು ಬೋರ್ಡ್ ನಡೆಸುವ ಗ್ರಾಮೀಣ ಚಿಕಿತ್ಸಾಲಯಕ್ಕೆ ವೈದ್ಯಾಧಿಕಾರಿಯಾಗಿ 1965ರ ನವೆಂಬರ್ 1ರಂದು ಬಂದ ನಾರಾಯಣ ಮೊಗಸಾಲೆ ಅವರ ಕಾಯಕದ ಹಾದಿಯಿದು. ಅವರ ಹುಟ್ಟೂರು ಕಾಸರಗೋಡಿನ ಕೋಳ್ಯೂರು. ಸ್ವಭಾವತಃ ಓದು-ಬರಹ ಸಾಹಿತ್ಯ ಸಂವಾದಗಳ ಹವ್ಯಾಸ ಹೊಂದಿದ್ದ ಅವರಿಗೆ ಈ ಪ್ರದೇಶದಲ್ಲಿಯೇ ಕನ್ನಡದ ಸಂಘಟನೆಯೊಂದನ್ನು ಸ್ಥಾಪಿಸಿದರೆ ಹೇಗೆ ಎಂಬ ಆಲೋಚನೆ ಮೊಳಕೆಯೊಡೆಯಿತು. ತಮ್ಮಂತೆಯೇ ಆಲೋಚಿಸುವ ಸಹೃದಯರನ್ನು ಸೇರಿಸಿಕೊಂಡು ಅವರು ಕಾಂತಾವರ ಕನ್ನಡ ಸಂಘವನ್ನು ಔಪಚಾರಿಕವಾಗಿ 1976ರ ಮೇ 26ರಂದು ರೂಪಿಸಿದರು. ಹೀಗೆ ನಾ.ಮೊಗಸಾಲೆ ಅವರ ಅಧ್ಯಕ್ಷತೆಯಲ್ಲಿ ಕನ್ನಡ ಸಂಘದ ಪಯಣವು ಆರಂಭವಾಯಿತು. ಅದೇ ವರ್ಷದ ದಸರಾ ಸಾಹಿತ್ಯೋತ್ಸವದ ಸಮಯದಲ್ಲಿ ಸಂಘವನ್ನು ಅಧಿಕೃತವಾಗಿ ಉದ್ಘಾಟಿಸಿದವರು ಕವಿ ಎಸ್.ವಿ. ಪರಮೇಶ್ವರ ಭಟ್ಟರು.

ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ, ಬೆಳುವಾಯಿ, ಕಾಂತಾವರ, ಬೋಳ, ಕೆದಿಂಜೆ ಮತ್ತು ನಂದಳಿಕೆ ಎಂಬ ಐದು ಗ್ರಾಮಗಳನ್ನು ಗಮನದಲ್ಲಿಟ್ಟುಕೊಂಡು ಕಟ್ಟಿದ ಸಂಘವು ಕಳೆದ ಐವತ್ತು ವರ್ಷಗಳಲ್ಲಿ ಇಡೀ ರಾಜ್ಯದ ಗಮನ ಸೆಳೆಯುವಷ್ಟರ ಮಟ್ಟಿಗೆ ಬೆಳೆಯಿತು. ಕನ್ನಡ ಸಾಹಿತ್ಯ ಲೋಕವೇ ಗಮನಿಸುವಂತಹ ಕೆಲಸಗಳನ್ನು ಮಾಡಿತು. ಜನಪ್ರಿಯತೆಗೆ ಮಾರು ಹೋಗದ ಕನ್ನಡ ಸಂಘವು ಮೊತ್ತ ಮೊದಲು ಶ್ರೀಮಂತ ಕನ್ನಡ ಸಾಹಿತ್ಯ ಪರಂಪರೆಯನ್ನು ಜನಸಾಮಾನ್ಯರಿಗೆ ಪರಿಚಯಿಸುವ ಕೆಲಸ ಕೈಗೆತ್ತಿಕೊಂಡಿತು. ಏಕೀಕರಣದ ನೇತಾರ ಕಾಂತಾವರ ಬಾರಾಡಿ ಬೀಡಿನ ಜಿನರಾಜ ಹೆಗ್ಡೆ ಅವರ ನೆನಪಿನಲ್ಲಿ ಕನ್ನಡ ಭವನವೊಂದು ನಿರ್ಮಾಣವಾದಾಗ ಸಂಘದ ಇಂತಹ ಚಟುವಟಿಕೆಗಳಿಗೆ ಆಸರೆ ದೊರೆತಂತಾಯಿತು.


ಕನ್ನಡ ಸಂಘದ ಕಾರ್ಯವ್ಯಾಪ್ತಿಯು ಇರುವ ನಂದಳಿಕೆಯು ಕವಿ ಮುದ್ದಣನ ಹುಟ್ಟೂರು ತಾನೇ? ತಾನು ಬರೆದ ಪುಸ್ತಕಗಳನ್ನು ಪ್ರಕಟಿಸಲು ಸಾಧ್ಯವಾಗದೇ ಮುದ್ದಣ ಕಷ್ಟಪಡಬೇಕಾಗಿ ಬಂದ ಕಥೆ ಸಾಹಿತ್ಯಪ್ರಿಯರಿಗೆ ಗೊತ್ತೇ ಇದೆ. ಆದರೆ ಹೊಸ ಕವಿಗಳಿಗೆ ಇಂತಹ ಕಷ್ಟ ಆಗಬಾರದು ಎಂಬ ಉದ್ದೇಶದಿಂದ, ಜೊತೆಗೆ ಮುದ್ದಣನ ನೆನಪು ಸದಾಕಾಲ ಹಸಿರಾಗಿರುವಂತೆ, 1978ರಲ್ಲಿ ಸಂಘವು ಕಾವ್ಯದ ಹಸ್ತಪ್ರತಿಗಳನ್ನು ಆಹ್ವಾನಿಸಿ, 'ಮುದ್ದಣ ಕಾವ್ಯ ಪ್ರಶಸ್ತಿ'ಯನ್ನು ನೀಡಲಾರಂಭಿಸಿತು. ಅದಾದ ಬಳಿಕ ತಲಾ ಹತ್ತು ಸಾವಿರ ರೂಪಾಯಿ ನಗದಿನ ಹನ್ನೊಂದು ದತ್ತಿ ಪ್ರಶಸ್ತಿಗಳನ್ನು ಸ್ಥಾಪಿಸಿ ಕನ್ನಡದ ಕೈಂಕರ್ಯ ಮಾಡುತ್ತಿರುವವರನ್ನು ಗುರುತಿಸುವ ಕೆಲಸವನ್ನು ಸಂಘಟನೆ ಮಾಡುತ್ತಿದೆ. ಬೀದರ್‌ನಿಂದ ಹಿಡಿದು ಕಾಸರಗೋಡಿನವರೆಗೆ ಪ್ರತಿಭಾವಂತ ಕವಿಗಳನ್ನು ಗುರುತಿಸುವ ಕೆಲಸವನ್ನು ಕನ್ನಡ ಸಂಘ ಮಾಡುತ್ತಿದೆ.

ಸಹೃದಯರೊಡನೆ ಸಂವಾದ ಸಂಘದ ಮತ್ತೊಂದು ಆಶಯ. ಇದರ ಸಾಕಾರಕ್ಕಾಗಿ ಪ್ರತೀ ತಿಂಗಳು ಕನ್ನಡ ಭವನದಲ್ಲಿ 'ನುಡಿನಮನ' ಎಂಬ ಉಪನ್ಯಾಸ ಮಾಲಿಕೆಯನ್ನು 2008ರಲ್ಲಿ ಆರಂಭಿಸಲಾಯಿತು. ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಗಳು ಕಾಂತಾವರಕ್ಕೆ ಬಂದು ಸಾಹಿತ್ಯ ಕೃತಿಗಳ ಕುರಿತು, ಹೊಸ ಪರಿಕಲ್ಪನೆಗಳ ಕುರಿತು ಉಪನ್ಯಾಸ ನೀಡಿದರು. ಕೋವಿಡ್ ಸೋಂಕಿನ ಸಂದರ್ಭ ಹೇರಿದ ಲಾಕ್‌ಡೌನ್ ನಂತರ ಈಗ ಈ ಉಪನ್ಯಾಸವನ್ನು ಕಾರ್ಕಳದಲ್ಲಿ ಸಮಾನ ಮನಸ್ಕ ಸಂಘಟನೆಗಳ ಸಹಯೋಗದಲ್ಲಿ ನಿರಂತರವಾಗಿ ಆಯೋಜಿಸಲಾಗುತ್ತಿದೆ. ಇದುವರೆಗೆ 189ಕ್ಕೂ ಹೆಚ್ಚು ಉಪನ್ಯಾಸಗಳು ನಡೆದಿದ್ದು ಕನ್ನಡ ಸಂಘದ ಬದ್ಧತೆಗೆ ಸಾಕ್ಷಿಯಾಗಿದೆ.

ಮೈಸೂರು ರಾಜ್ಯವೆಂಬ ನಾಮಕರಣವಾದ ಸುವರ್ಣ ವರ್ಷಾಚರಣೆಯನ್ನು 2006ರಲ್ಲಿ ರಾಜ್ಯದಾದ್ಯಂತ ಸಂಭ್ರಮಿಸಲಾಯಿತು. ಇದೇ ಸಂದರ್ಭದಲ್ಲಿ ಸಂಘವು ಮೂವತ್ತನೇ ವರ್ಷದ ಸಂಭ್ರಮದಲ್ಲಿ ಹತ್ತಾರು ಯಶಸ್ವಿ ಕಾರ್ಯಕ್ರಮಗಳನ್ನು ಆಯೋಜಿಸಿತು. ಈ ಯುಗಳ ಸವಿನೆನಪಿಗಾಗಿ 'ನಾಡಿಗೆ ನಮಸ್ಕಾರ' ಎಂಬ ಪುಸ್ತಕ ಮಾಲೆಯ ಪ್ರಕಟಣೆಗೆ ಕಾಂತಾವರ ಕನ್ನಡ ಸಂಘವು ಶ್ರೀಕಾರ ಹಾಕಿತು. ಈ ಕೃತಿಹಾರಕ್ಕೆ ಈಗಾಗಲೇ 369 ಪುಸ್ತಕಗಳು ಸೇರಿದ್ದು ಪ್ರಕಟಣೆಯ ಕಾರ್ಯ ಮುಂದುವರೆದಿದೆ. ಆರಂಭಿಕ ವರ್ಷಗಳಲ್ಲಿ ಸಾಹಿತಿ ವಿ.ಗ.ನಾಯಕ್ ಅವರ ಸಂಪಾದಕತ್ವದಲ್ಲಿ ನಡೆದ ಈ ಗ್ರಂಥ ಸಂಪಾದನೆಯ ಕೆಲಸ ನಂತರ ಡಾ.ಬಿ. ಜನಾರ್ದನ ಭಟ್ ಅವರ ಸಂಪಾದಕತ್ವದಲ್ಲಿ ಮುಂದುವರೆಯುತ್ತಿದೆ. ಮೂವತ್ತು ಪುಸ್ತಕಗಳನ್ನು ಪ್ರಕಟಿಸುವ ಸೀಮಿತ ಉದ್ದೇಶದೊಂದಿಗೆ ಆರಂಭವಾದ ಈ ಪುಸ್ತಕ ಮಾಲೆಯು ಬಹಳಷ್ಟು ಜನಪ್ರಿಯವಾಯಿತು. ಎಲೆಮರೆಯ ಕಾಯಿಯಂತೆ ಇರುವ ಅನೇಕ ಸಾಧಕರ ಹೆಜ್ಜೆಗಳನ್ನು ದಾಖಲಿಸುವುದಕ್ಕೆ ಇದೊಂದು ಮಾಧ್ಯಮವಾಯಿತು. ಪ್ರಕಟಣೆಯ ಕಾರ್ಯ ಇಂದಿಗೂ ಮುಂದುವರೆದಿದೆ.

ಕಾಂತಾವರ ಕನ್ನಡ ಸಂಘವು ಸುವರ್ಣ ಮಹೋತ್ಸವ ಆಚರಿಸುವ ಹುಮ್ಮಸ್ಸಿನಲ್ಲಿದೆಯಾದರೂ ಪ್ರಸ್ತುತ ಹತ್ತಾರು ಸವಾಲುಗಳನ್ನು ಎದುರಿಸುತ್ತಿದೆ. ಸಾಮಾನ್ಯವಾಗಿ ಕನ್ನಡ ಸಂಸ್ಕೃತಿ ಇಲಾಖೆಯ ಅನುದಾನ ಸಾಂಸ್ಕೃತಿಕ ಉತ್ಸವಾದಿಗಳಿಗೆ ಸೀಮಿತವಾಗಿರುತ್ತದೆ. ಕನ್ನಡ ಸಂಘವು ವಿಚಾರ ಸಂಕಿರಣ, ಉಪನ್ಯಾಸ ಮಾಲಿಕೆ, ಪುಸ್ತಕ ಪ್ರಕಟಣೆ, ಕನ್ನಡದ ಸೇವೆ ಮಾಡುವವರನ್ನು ಗೌರವಿಸುವ ಕಾಯಕಗಳನ್ನೇ ಉದ್ದೇಶವಾಗಿರಿಸಿಕೊಂಡಿರುವುದರಿಂದ ಸರ್ಕಾರಿ ಅನುದಾನ ಪಡೆಯುವುದು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಕನ್ನಡ ಭವನದ ನಿರ್ವಹಣೆಯನ್ನು ಅನಿವಾರ್ಯವಾಗಿ ಕಾಂತಾವರ ಗ್ರಾಮ ಪಂಚಾಯಿತಿಗೆ ವಹಿಸಲಾಗಿದೆ. ಹಾಗೆಂದು ಸುವರ್ಣ ಸಂಭ್ರಮದ ಅಪರೂಪದ ಕ್ಷಣಗಳನ್ನು ಸಂಭ್ರಮಿಸದೇ ಇರಲಾದೀತೇ. ವರ್ಷಪೂರ್ತಿ ಕಾರ್ಯಕ್ರಮಗಳ ರೂಪರೇಶೆಯೊಂದಿಗೆ ಸಂಘವು ಕನ್ನಡದ ಧ್ವಜ ಹಿಡಿದು ಸಿದ್ಧವಾಗಿದೆ. ಪ್ರೋತ್ಸಾಹದ ನಿರೀಕ್ಷೆಯಲ್ಲಿದೆ.

ಉತ್ಸಾಹಿ ಯುವಕರ ಸಂಖ್ಯೆಯೇ ಕಡಿಮೆ



'ನಾನು ಸಂಘವನ್ನು ಆರಂಭಿಸಿದಾಗ ನನ್ನಂತೆಯೇ ಉತ್ಸಾಹಿಗಳಾದ ಸಮಾನ ಮನಸ್ಕ ಯುವಕರು ಸಾವಿರಾರು ಮಂದಿಯಿದ್ದರು. ಹಾಗಾಗಿ ಈ ಪಯಣ ಕಷ್ಟವೇನೂ ಆಗಲಿಲ್ಲ. ಆದರೆ ಈಗ ಕನ್ನಡದ ಕೆಲಸ ಮಾಡುವ ಉತ್ಸಾಹಿ ಯುವಕರ ಸಂಖ್ಯೆಯೇ ಕಡಿಮೆಯಾಗಿದೆ. ಅಂದು ದೇಣಿಗೆ ನೀಡುತ್ತಿದ್ದ ಸಾಹಿತ್ಯಪ್ರೀತಿಯ ಉದ್ಯಮಿಗಳು ಇಂದು ಒಬ್ಬೊಬ್ಬರಾಗಿಯೇ ಮರೆಯಾಗುತ್ತಿದ್ದಾರೆ. ಮಕ್ಕಳ ಸಂಖ್ಯೆ ಕೊರತೆಯಿಂದಾಗಿ ಸ್ಥಳೀಯ ಶಾಲೆಗಳು ಮುಚ್ಚುತ್ತಿವೆ. ಕನ್ನಡಮ್ಮನನ್ನು ಪ್ರೀತಿಸುವವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಅನಿಸತೊಡಗಿದೆ. ಮುಂದೇನು ಎಂಬ ಸ್ಪಷ್ಟತೆಯಿಲ್ಲ. ಆದಾಗ್ಯೂ ಸುವರ್ಣ ಸಂಭ್ರಮದ ರೂಪರೇಶೆಗಳು ಸಿದ್ಧವಾಗಿವೆ. ಕಷ್ಟಕರ ಪರಿಸ್ಥಿತಿ ಎದುರಾಗಿದೆ ಎಂದರೆ, ಇನ್ನಷ್ಟು ಹೆಚ್ಚು ಕೆಲಸ ಮಾಡಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಅಲ್ಲವೇ?

ಡಾ.ನಾ.ಮೊಗಸಾಲೆ, ಅಧ್ಯಕ್ಷರು, ಕಾಂತಾವರ ಕನ್ನಡ ಸಂಘ


ಒಂದು ಗುಬ್ಬಚ್ಚಿಗೆ ಮಿಡಿದ ಕೋಟಿ ಹೃದಯಗಳು...



8ನೇ ಪುಟದಿಂದ...


ಕೀಲಿ ಹಿಡಿದುಕೊಂಡು ತಯಾರಾಗಿದ್ದ ಗ್ರಾಮ ಪಂಚಾಯಿತಿ ಸಿಬ್ಬಂದಿ ನ್ಯಾಯಾಧೀಶರ ನಿರ್ದೇಶನಕ್ಕಾಗಿ ಕಾಯುತ್ತಿದ್ದರು. ಬಿಡುಗಡೆಯ ಸ್ವಾತಂತ್ರ್ಯಕ್ಕಾಗಿ ಎದುರು ನೋಡುತ್ತಿದ್ದ ಗುಬ್ಬಚ್ಚಿ, ಸೇರಿದ್ದ ಭಾರಿ ಜನರನ್ನು ನೋಡಿ ಗಾಬರಿಗೊಂಡಿತ್ತು. ಗಲಿಬಿಲಿಯಿಂದ ಕಂಗಾಲಾಗಿ ಮೂಲೆಯಲ್ಲಿ ಮುದುಡಿ ಕುಳಿತಿತ್ತು. ಕೀಲಿ ತೆರೆಯುವ ಕೆಲಸ ಆರಂಭವಾಗುತ್ತಿದ್ದಂತೆಯೇ ಚಪ್ಪಾಳೆ ಮೊಳಗಿತು. ಕೀಲಿ ಗೊಂಚಲಿನ ಒಂದೊಂದು ಕೀ ಹಾಕಿ ಸಿಬ್ಬಂದಿ ತಿರುಗಿಸುತ್ತಿದ್ದರೆ, ಜನರೆಲ್ಲಾ ಹೃದಯವನ್ನು ಅಂಗೈಲಿ ಇಟ್ಟುಕೊಂಡು ಕಾಯುತ್ತಿದ್ದರು. ಕೇರಳದ ಮಾಧ್ಯಮಗಳು ಈ ಪ್ರಕ್ರಿಯೆಯನ್ನು ನೇರಪ್ರಸಾರ ಮಾಡುತ್ತಿದ್ದವು. ಹಲವು ಮೊಬೈಲ್‌ಗಳಲ್ಲಿಯೂ ದೃಶ್ಯಗಳು ಸೆರೆಯಾಗುತ್ತಿದ್ದವು.

ಕೀಲಿ ಉಪಯೋಗಿಸಿ ಒಂದು ಬೀಗ ತೆಗೆದರೆ, ಇನ್ನೊಂದನ್ನು ಒಡೆದು ತೆಗೆಯಬೇಕಾಯಿತು. ಗಾಜಿನ ಕೋಣೆಯೊಳಗೆ ತೆರಳಿದ ಚಂದ್ರನ್, ಗುಬ್ಬಚ್ಚಿಯನ್ನು ಹಿಡಿದು ಹೊರತರುವಾಗ ಹರ್ಷೋದ್ಗಾರ ಮೊಳಗಿತು. ಅದನ್ನು ಗಾಳಿಯಲ್ಲಿ ಹಾರಿಬಿಟ್ಟಾಗ ಅಲ್ಲಿದ್ದವರ ಮುಖದ ಮೇಲೂ ಬಿಡುಗಡೆಯ ಭಾವವಿತ್ತು. ನಾಲ್ಕು ದಿನ ಬಂಧಿಯಾಗಿದ್ದ ಗುಬ್ಬಚ್ಚಿ ಗಾಳಿಯಲ್ಲಿ ರೆಕ್ಕೆ ಬಡಿದು ಮಾಯವಾಯಿತು.



ಗುಬ್ಬಚ್ಚಿಯನ್ನು ರಕ್ಷಿಸಿದ ಕ್ಷಣ

ನಿರಪರಾಧಿ ಸುರೇಶನ ದುಮ್ಮಾನ...



ತಮ್ಮ ಹೆಂಡತಿಯ ತಾಯಿ ಗೌರಿ ಅವರ ಆರೈಕೆಯಲ್ಲಿ ಸುರೇಶ್

8ನೇ ಪುಟದಿಂದ...

'ಜೈಲಿನಲ್ಲಿ ದೊಡ್ಡ ದೊಡ್ಡ ಪಾತ್ರೆಗಳನ್ನು ಒಬ್ಬನೇ ತೊಳೀತಿದ್ದೆ. ಸಕ್ಕತ್ ಕೆಲಸ ಮಾಡ್ತಿದ್ದೆ. ಮಾಡದ ತಪ್ಪಿಗೆ ಇಲ್ಲಿಗೆ ಬಂದು ಈ ಕೆಲಸ ಮಾಡಬೇಕಾಯಿತಲ್ಲ. ದೂರು ಕೊಟ್ಟವನನ್ನೇ ಜೈಲಿಗೆ ಹಾಕಿದ್ರಲ್ಲ ಎಂದು ಅಳುತ್ತಿದ್ದೆ' ಎನ್ನುವಾಗ ದುಗುಡವಿತ್ತು.

'ಆಗಾಗ ನನ್ನನ್ನು ನೋಡಲು ಜೈಲಿಗೆ ಬರುತ್ತಿದ್ದ ಅಪ್ಪ ಗಾಂಧಿ, ಮಗ ಕೃಷ್ಣ ಕೂಡ, 'ಹೆಂಗೆ ಕೊಲೆ ಮಾಡಿದೆ' ಎಂದು ಕೇಳುತ್ತಿದ್ದರು. ನಾನು ಕೊಲೆ ಮಾಡಿಲ್ಲ ಎಂದು ಹೇಳಿದರೆ ನಂಬಲಿಲ್ಲ. ಅವರೂ ಪೊಲೀಸರನ್ನೇ ನಂಬಿಬಿಟ್ಟಿದ್ದರು. ಒಂದಲ್ಲಾ ಒಂದು ದಿನ ನಿಮಗೇ ಗೊತ್ತಾಗುತ್ತೆ ಹೋಗಿ ಎಂದಿದ್ದೆ.'

'ಜಾಮೀನು ಪಡೆದು ಹೊರಗೆ ಬಂದಾಗ ಆರು ತಿಂಗಳು ಹಾಡಿಗೆ, ಮನೆಗೆ ಹೋಗಲಿಲ್ಲ. ಬೇಗೂರಿನಲ್ಲಿರುವ ಅಪ್ಪನ ಮನೇಲಿದ್ದೆ. 'ಹೆಂಡ್ತಿನ ಸಾಯಿಸಿ ಒಳಗೆ ಹೋಗಿ ಬಂದವನೆ' ಎಂದು ನೆರೆಹೊರೆಯವರು ಅವಮಾನ ಮಾಡುತ್ತಿದ್ದರು. ಎಲ್ಲರೂ ಪೊಲೀಸರ ಕಡೆಯೇ ಮಾತಾಡುತ್ತಿದ್ದರು.

'ಮನೆಯವರೇ ನೋಡಿ ಮಾಡಿದ್ದ ಮದುವೆ. ಎಲ್ಲರೂ ಕಾಫಿ ತೋಟಗಳಲ್ಲಿ ಕೂಲಿ ಮಾಡ್ತಿದ್ದೆವು. ಇರೋದರಲ್ಲೇ ಚೆನ್ನಾಗಿದ್ದೆವು. ಇಬ್ಬರು ಮಕ್ಕಳು, ತಂದೆ, ತಾಯಿ, ಅತ್ತೆ ಕೂಡ ನಮ್ಮೊಂದಿಗೇ ಇದ್ದರು. ಸಾಲ ಇತ್ತು. ಹೆಂಡತಿ ಜೊತೆಗೆ ಮನಸ್ತಾಪವಿತ್ತು. ಆದರೆ ಜೀವನ ಹಿಂಗಾಗುತ್ತೆ ಅಂತ ಅನ್ಕೊಂಡಿರಲಿಲ್ಲ' ಎಂದ ಸುರೇಶ್‌ಗೆ ಮತ್ತೊಂದು ಪ್ರಶ್ನೆ ಕೇಳಿದೆ; 'ಈಗ ಮಲ್ಲಿಗೆ ಬಗ್ಗೆ ಏನನಿಸುತ್ತದೆ?'. ಆಗ ಅವರ ಮೌನವೇ ಉತ್ತರವಾಯಿತು.

'ಕೊಲೆಯಾಗಿದ್ದ' ಪತ್ನಿ ಜೀವಂತ ಬಂದಾಗ..

'ಜಾಮೀನಿನ ಮೇಲೆ ಜೈಲಿಂದ ಹೊರಗೆ ಬಂದ ಮೇಲೆ ಹೆಂಡತಿಯನ್ನು ಹುಡುಕಾಡುತ್ತಿದ್ದೆ. ಎಲ್ಲಾದರೂ ಕಾಣಿಸಿದರೆ ತಕ್ಷಣ ತಿಳಿಸುವಂತೆ ಪರಿಚಯ ಇದ್ದೋರಿಗೆಲ್ಲ ಹೇಳಿದ್ದೆ. ಏಪ್ರಿಲ್ 1ನೇ ತಾರೀಖು ಸಂಜೆ ಫೋನ್ ಬಂತು. ಮಡಿಕೇರೀಲಿ ಗಣೇಶ್ ಜೊತೆ ಮಲ್ಲಿಗೆ ಇದ್ದಾಳೆ ಅಂತ. ತಕ್ಷಣ ಹೊರಟೆ. ಮಡಿಕೇರಿ ಪೊಲೀಸ್ ಸ್ಟೇಷನ್‌ಗೆ ಹೋದಾಗ ಅವಳು ಕಂಡಳು. 'ಪೊಲೀಸರು ಮತ್ತೆ ಅವಳನ್ನು ನಾಪತ್ತೆ ಮಾಡಿಬಿಟ್ಟಾರು' ಎಂಬ ಆತಂಕದಿಂದ ಇಡೀ ರಾತ್ರಿ ಸ್ಟೇಷನ್ ಮುಂದೆಯೇ ಇದ್ದೆವು' ಎಂದು ಆ ದಿನದ ದುಗುಡವನ್ನು ತೆರೆದಿಟ್ಟರು.

'ನೀನೇ ತಾನೇ ಆವತ್ತು ದೂರು ಕೊಟ್ಟಿದ್ದು, ದೇವರು ದೊಡ್ಡವನು, ಈಗ ನಿನ್ನ ಹೆಂಡತಿ ಸಿಕ್ಕಿದ್ದಾಳೆ' ಎಂದು ಮಡಿಕೇರಿ ಪೊಲೀಸರು ಹೇಳಿದರು. ಅವರಿಗೆ ದೇವರು ದೊಡ್ಡವನಾಗಿ ಕಂಡ. ನನ್ನನ್ನು ಪ್ರಕರಣದಲ್ಲಿ ಸಿಲುಕಿಸಿದ್ದ ಈ ಕಡೆಯ ಪೊಲೀಸರು, ಯಾವ ದೇವರು ಬಂದರೂ ನಿನ್ನನ್ನು ಬಿಡಿಸಲು ಆಗಲ್ಲ ಎನ್ನುತ್ತಿದ್ದರು' ಎಂದು ನಕ್ಕರು. ಈಗ ನಾನು ಆರೋಪದಿಂದ ಮುಕ್ತನಾಗಿದ್ದೇನೆ, ಹಾಗೆಯೇ ಬಂಧನದಿಂದಲೂ...ಎಂದು ನಿರಾಳಭಾವದಿಂದ ಹೇಳಿದರು.

ಹುಸಿ ಕೇಸು, ಕೋರ್ಟ್‌ಗೆ ಮನದಟ್ಟು



'ಪತ್ತೆಯಾದ ಅಪರಿಚಿತ ಶವದ ಮೂಳೆಗಳು ಮತ್ತು 'ಕೊಲೆಯಾಗಿದ್ದಾಳೆ' ಎಂದು ಪೊಲೀಸರು ಬಿಂಬಿಸಿದ್ದ ಮಲ್ಲಿಗೆಯ ತಾಯಿ ಗೌರಿಯ ರಕ್ತದ ಮಾದರಿಯ ಕುರಿತು ಡಿಎನ್‌ಎ ವರದಿ ಬರುವ ಮುಂಚೆಯೇ ಪೊಲೀಸರು ಆರೋಪಪಟ್ಟಿ ಸಲ್ಲಿಸಿದ್ದರು. ಅದನ್ನೇ ಲೋಪವೆಂದು ಪರಿಗಣಿಸಿದ ಹೈಕೋರ್ಟ್, ಸುರೇಶ್ ಅವರಿಗೆ ಜಾಮೀನು ನೀಡಿತು' ಎಂದು, ಪ್ರಕರಣಕ್ಕೆ ತಿರುವು ನೀಡಿದ ಮಹತ್ವದ ಸಂಗತಿಯನ್ನು ವಕೀಲರಾದ ಬಿ.ಎಸ್. ಪಾಂಡು ಪೂಜಾರಿ ವಿವರಿಸಿದರು. 'ಪೊಲೀಸರು ಸಲ್ಲಿಸಿದ್ದ 156 ಪುಟದ ಆರೋಪ ಪಟ್ಟಿ, 56 ಸಾಕ್ಷಿಗಳೆಲ್ಲವೂ, ಮಲ್ಲಿಗೆ ಜೀವಂತ ಬಂದ ಕೂಡಲೇ ಹುಸಿ ಎಂಬುದು ಸಾಬೀತಾಗಿಹೋಯಿತು. ಎಲ್ಲವೂ ನಕಲಿ, ಸೃಷ್ಟಿಸಿದ ಕಥೆ ಎಂಬುದೂ ಕೋರ್ಟ್‌ಗೆ ಮನದಟ್ಟಾಯಿತು' ಎಂದು ವಿಶ್ಲೇಷಿಸಿದರು.

ಕಥೆ

ಇಂಗ್ಲಿಷ್ ಮೂಲ: ಇಲಾನ್ ಒಸ್ಸೆಂಡ್ರಾವರ್, ಕನ್ನಡಕ್ಕೆ: ಬಿ.ಆರ್. ಸತ್ಯನಾರಾಯಣ ಅವರ **ವ್ಯಾಪಾರಕ್ಕಾಗಿ ಮುಚ್ಚಲಾಗಿದೆ**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಮರಾಠಿ ಮೂಲ: ವಿ.ವಾ.ಶಿರವಾಡಕರ ಕನ್ನಡಕ್ಕೆ: ಚಂದ್ರಕಾಂತ ಪೋಕಳೆ ಅವರ **ದೇವರನ್ನು ಒಪ್ಪಬೇಕೆ,ಬೇಡವೇ**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ bhanuvara@prajavani.co.in


ಮೊದಲ ಓದು

ಅಂತಃಸಾಕ್ಷಿ ಬಡಿದೆಬ್ಬಿಸುವ ಕೃತಿ

ಕಥೆಯೆಂದರೆ ಕಥೆಗಳೇ. ಇಲ್ಲಿ ಸರಳವಾಗಿ ಕಥೆ ಕಟ್ಟುತ್ತ ಹೋಗುವ ಕಥೆಗಾರರು ನಮ್ಮೊಳಗಿನ ಅಂತಃಕರಣವನ್ನು ತಟ್ಟುತ್ತಲೇ ಅಂತಃಸಾಕ್ಷಿಯನ್ನು ಬಡಿದೆಬ್ಬಿಸುತ್ತಾರೆ. ನಗರದ ಪಾತ್ರಗಳ ಟೊಳ್ಳುತನ ಮತ್ತು ಗ್ರಾಮೀಣ ಜನರೊಳಗಿನ ಗಟ್ಟಿತನ ಅಲ್ಲಲ್ಲೆ ಒರೆಗೆ ಹಚ್ಚುತ್ತಲೇ ನಾಗರಿಕರು ಎನಿಸಿಕೊಂಡವರು ಅದೆಷ್ಟು ಸ್ವಕೇಂದ್ರಿತ ವ್ಯವಸ್ಥೆಯಲ್ಲಿ ಬದುಕುತ್ತಿದ್ದಾರೆ ಎಂಬುದನ್ನು ಹೇಳುತ್ತ ಹೋಗುತ್ತಾರೆ.

ಅನ್ವಡ ಕಂಟೆವ್ವ (ಅನಕ್ಷರಸ್ಥ ಕಂಟೆವ್ವ) ಕಥೆಯ ಕಂಟೆವ್ವನ ಔದಾರ್ಯ, ಗ್ರೀನ್ ರೂಮ್ ಕಥೆಯ ಪಾತ್ರಗಳು, ಕಥೆಯೊಳಗೊಂದು ಕತೆಯಾಗಿ, ಆ ಹನ್ನೆರಡು ಗಂಟೆಗಳು ಕಥೆಯಲ್ಲಿ ಸಾಂಗತ್ಯ ಗಟ್ಟಿಗೊಳ್ಳುವ ಕಥನ ಇವೆಲ್ಲವೂ ಮನುಷ್ಯ ಸಹಜವಾಗಿ ಬದುಕುವ ಅಗತ್ಯವನ್ನು ಹೇಳುತ್ತಹೋಗುತ್ತವೆ. ಮಾನವೀಯ ಮೌಲ್ಯಗಳೊಂದಿಗೆ ಬದುಕುವುದು ಅದೆಷ್ಟು ಸುಲಭ. ಆದರೆ ಬದುಕನ್ನು ಅದೆಷ್ಟು ಕ್ಲಿಷ್ಟಕರವಾಗಿಸಿಕೊಂಡಿದ್ದೇವೆ ಎನ್ನುವುದನ್ನೂ ಸರಳವಾಗಿ ಕಥೆಗಾರರು ನಿರೂಪಿಸುತ್ತ ಹೋಗಿದ್ದಾರೆ. ತಾವು ಕಂಡ, ಕೆಲವು ಕಡೆ ಉಂಡ ದುಃಖವೂ ಸುತ್ತಲಿನ ಕಥೆಗಳನ್ನೇ ಕಥೆಗಳಾಗಿಸುತ್ತ ಓದುಗರನ್ನು ಸೆಳೆದಿಡುತ್ತದೆ ಹವೇಲಿ ದೊರೆಸಾನಿ ಕಥಾ ಸಂಕಲನ.

ಉತ್ತರ ಕರ್ನಾಟಕದ ಭಾಷೆಯು ಕಥಾ ಸೊಗಡನ್ನು ಹೆಚ್ಚಿಸಿ ಸಹಜಕ್ಕೆ ಹತ್ತಿರವಾಗಿಸಿದೆ. ಆದರೆ ರಾಜ್ಯದ ಎಲ್ಲ ಭಾಗದವರೂ ಓದುವಂಥ ಸರಳತನ ಈ ಭಾಷೆಯಲ್ಲಿದೆ. ಕಥೆ, ಸಂಗತಿಗಳನ್ನು ದಾಖಲಿಸುವುದಷ್ಟೇ ಅಲ್ಲ, ಭಾವೋತ್ಪತ್ತಿಯ ರಸಮಯ ಓದು ಈ ಪುಸ್ತಕದ್ದು.



ಪು: 144 ₹175

ಹವೇಲಿ ದೊರೆಸಾನಿ
ಲೇ: ಮಲ್ಲಿಕಾರ್ಜುನ ಶೆಲ್ಲಿಕೇರಿ
ಪ್ರ: ಅಮೂಲ್ಯ ಪ್ರಕಾಶನ
ಸಂ: 94486 76770

ನಿಗೂಢ ನೆಲೆಯ ಕಥೆಗಳು



ಪು: 142 ₹200

ಜಕ್ಕಿಣಿ
ಲೇ:ಗೌತಮ್ ಜ್ಯೋತ್ಸ್ನಾ
ಪ್ರ: ಮನೋಹರ ಗ್ರಂಥ ಮಾಲಾ
ಸಂ: 0836-2441823

ಕಥಾ ಪ್ರಪಂಚ ಸದಾ ವಾಸ್ತವಕ್ಕೆ ದನಿಯಾಗಿ, ಅದರಲ್ಲಿ ಬರುವ ರೂಪಕಗಳು ಹಲವು ಬಗೆಯ ಹೊಳಹುಗಳನ್ನು ಕೊಡುತ್ತಲೇ ಹೋಗುತ್ತವೆ. ಒಂದು ಕಥೆಯು ಓದುಗ ಆಡದೇ ಉಳಿದ ಮಾತುಗಳನ್ನು ಹೇಳುತ್ತಿದ್ದರೆ, ಅನುಭವಕ್ಕೆ ಬಂದು ಕೈಜಾರಿದಂತೆ ಕಾಣುವ ಹೊಸ ವಿಚಾರಗಳನ್ನು ಸ್ಫುರಿಸುತ್ತಿದ್ದರೆ ಅಂಥ ಕಥೆಯು ಮನಸ್ಸಿನಲ್ಲಿ ಸ್ಥಿರವಾಗಿ ಉಳಿಯುತ್ತದೆ. ಹೇಗೆ ಬದುಕಬೇಕು ಎನ್ನುವುದನ್ನು ಕಥಾ ಜಗತ್ತು ಕಟ್ಟಿಕೊಟ್ಟರೆ, ಅಥವಾ ಬದುಕಿನ ದಾರಿಯನ್ನು ಇನ್ನಷ್ಟು ಸ್ಪಷ್ಟಗೊಳಿಸಲು ಕಥೆಯೊಂದು ಪ್ರಯತ್ನಿಸಿದರೆ ಅದಕ್ಕಿಂತ ಸಾರ್ಥಕತೆ ಏನಿದೆ?

ಆದರೆ, ಮನುಷ್ಯನಾಳದಲ್ಲೊಂದು ಭ್ರಾಮಕ ಜಗತ್ತಿದೆ. ಆ ಜಗತ್ತು ಕಥಾ ಜಗತ್ತಿನೊಂದಿಗೆ ಬೆಸೆದುಕೊಂಡರೆ? ಇಂಥದ್ದೊಂದು ಪ್ರಶ್ನೆ ಗೌತಮ ಜ್ಯೋತ್ಸ್ನಾ ಅವರ 'ಜಕ್ಕಿಣಿ' ಕಥಾಸಂಕಲನ ಓದಿದಾಗ ಬಾರದೇ ಇರದು. ಇಲ್ಲಿ ಭ್ರಾಮಕ ಜಗತ್ತಿದೆ. ಹೆಣ್ಣೋ, ಹಾವೋ? ಯಾವುದು ಬೆನ್ನಟ್ಟಿ ಕಾಡುವುದು? ಎಂಬ ನಿಗೂಢ ಪ್ರಶ್ನೆಗಳಿವೆ. ಸಾಮಾನ್ಯವೆನಿಸುವ ಕಥೆಗಳಿಗೆಲ್ಲ ನಿಗೂಢತೆಯ ಚೌಕಟ್ಟು ಬಹಳ ಸಹಜವೆನ್ನುವಂತೆ ಒದಗಿದೆ. ನಿಗೂಢತೆಯ ಹೂರಣವನ್ನು ಬೇಕೆಂದೇ ತುರುಕಿಲ್ಲ. ಆದರೆ, ಕಥೆಗಳೆಲ್ಲ ಅಮಾನುಷ ಶಕ್ತಿಯೊಂದಿಗೆ, ನಿಗೂಢ ನೆಲೆಯಲ್ಲಿ ಬಿಚ್ಚಿಕೊಳ್ಳುತ್ತ ಸಾಗುವುದು ಈ ಸಂಕಲನದ ವಿಶೇಷ. ವಿಚಿತ್ರ ಹಾಗೂ ವಿಕಿಪ್ತತೆ ಈ ಸಂಕಲನದಲ್ಲಿ ಬರುವ ಹಲವು ಪಾತ್ರಗಳ ಸ್ಥಾಯಿಭಾವ.

ಹಲವು ಬಗೆಯ ವ್ಯಕ್ತಿತ್ವಗಳ ದರ್ಶನ

ದಾರ್ಶನಿಕ ವಿಚಾರಗಳನ್ನು ಸರಳವಾಗಿ ನಿರೂಪಿಸುವ ವೀಣಾ ಬನ್ನಂಜೆ, 'ಅವರು, ಇವರು, ಎವರು' ಕೃತಿಯ ಮೂಲಕ ಒಳಗಣ್ಣನ್ನು ತೆರೆಸುವ ಯತ್ನ ಮಾಡಿದ್ದಾರೆ. ಶೀರ್ಷಿಕೆಯೇ ಹೇಳುವಂತೆ ಕೃತಿಯಲ್ಲಿ ಮೂರು ವಿಭಾಗಗಳಿವೆ. ಮೊದಲನೆಯದು 'ಅವರು'. ಇಲ್ಲಿ ಹನ್ನೊಂದು ಲೇಖನಗಳಿದ್ದು, ಯಾವ ಹಂತದಲ್ಲಿಯೂ ತಮ್ಮನ್ನು ತಿದ್ದಿಕೊಳ್ಳದೇ, ನಾನು ಬದುಕುವುದೇ ಹೀಗೆ ಎಂಬ ವ್ಯಕ್ತಿಗಳ ಕುರಿತಾದ ಅವಲೋಕನಗಳಿವೆ. ಇಲ್ಲಿನ ಮೊದಲ ಲೇಖನವೇ 'ನಾನಿರುವುದೇ ಹೀಗೆ ಅನ್ನುವವರಿಗೆ'. ಅವರೇಕೆ ಹೀಗೆ, ಅದಕ್ಕೆ ಕಾರಣವೇನು ಎಂಬುದನ್ನು ವಿಶ್ಲೇಷಿಸುತ್ತ ಹೋಗುತ್ತಾರೆ. 'ಕುಟುಂಬ ಎಂಬ ಪರಮ ಬಂಧನ', 'ಮಕ್ಕಳು ಬೇಡಿದ್ದನ್ನು ಕೊಡಬಾರದು' ಮೊದಲಾದ ಚಿಂತನೆಗೆ ಹಚ್ಚುವ ಬರಹಗಳು ಈ ವಿಭಾಗದಲ್ಲಿವೆ.

'ಇವರು' ಕೃತಿಯ ಎರಡನೇ ಭಾಗ. ಇದರಲ್ಲಿ ಹನ್ನೆರಡು ಲೇಖನಗಳಿವೆ. ಜಗತ್ತಿನ ಸಾಧಕರು, ಬದುಕಿನ ಕತ್ತಲನ್ನು ಹೋಗಲಾಡಿಸುವ ಸಂತರು, ದಾರ್ಶನಿಕರ ಬಗೆಗಿನ ಬರಹಗಳಿವೆ. 'ಅನಂತಾನಂತ ಅಲ್ಲಮ', 'ಅಳಸಿಂಗರೆಂಬ ಮೆಟ್ಟಿಲು' ಮೊದಲಾದ ಲೇಖನಗಳು ಈ ಸಾಧಕರ ಬದುಕಿನ ಕಥನಗಳೊಂದಿಗೆ ನಾವು ಹೇಗೆ ಬದುಕಬೇಕು ಎಂಬುದನ್ನು ವಿವರಿಸುತ್ತ ಹೋಗುತ್ತವೆ.

ಮೂರನೆಯದ್ದು 'ಎವರು', ಎಂದರೆ 'ನಾನು' ಎನ್ನುವ ಲೇಖಕಿ, ತನ್ನೊಳಗಿನ ಅವಲೋಕನದ ಮೂಲಕ ನಮ್ಮೊಳಗಿನ ವ್ಯಕ್ತಿತ್ವದ ದರ್ಶನ ಮಾಡಿಸುತ್ತಾರೆ. 'ನಮ್ಮನ್ನು ನಾವು ಶೋಧಿಸದೇ ಇದ್ದರೆ ಸಾಯುವವರೆಗೂ ನಾವು ಕಚ್ಚಾ ಪದಾರ್ಥ. ಅದೇ ಒರಟು, ಬಿರುಸು, ಸುಳ್ಳು, ಕೆಟ್ಟ ನಡತೆ..ನಾನು ಇರುವುದೇ ಹೀಗೆ ಎಂಬ ಗುಮ್ಮ ನಮ್ಮ ವ್ಯಕ್ತಿತ್ವವನ್ನೇ ನುಂಗಿಬಿಡುತ್ತದೆ' ಎಂಬ ಒಟ್ಟಾರೆ ಅರ್ಥವನ್ನು ಧ್ವನಿಸುವ, ಬದುಕಿಗೆ ಬೇಕಾದ ಅರ್ಥಗರ್ಭಿತ ವಿಚಾರಗಳು ಇಲ್ಲಿವೆ. ಲೇಖಕಿ ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ ಬರೆದ ಬರಹಗಳಿವೆ. ಹೀಗಾಗಿ ಇಲ್ಲಿನ ಕೆಲವು ವಿಷಯಗಳು ಈಗ ಹಳತು ಅಥವಾ ಪುನರಾವರ್ತನೆ ಎನ್ನಿಸುತ್ತದೆ.



ಪು: 144 ₹200

ಅವರು, ಇವರು, ಎವರು
ಲೇ: ವೀಣಾ ಬನ್ನಂಜೆ
ಪ್ರ: ಸಾಹಿತ್ಯ ಪ್ರಕಾಶನ
ಸಂ: 7019222849

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಅನ್ನರಣ

ಈ ಪೃಥ್ವಿಯ ಮೇಲೆ ಪ್ರಾಣಿಗಳು ಪಕ್ಷಿಗಳು ಮಾನವರನ್ನೊಳಗೊಂಡ ಸಕಲ ಜೀವರಾಶಿಗಳು ಆಹಾರಕ್ಕಾಗಿ ಕಚ್ಚಾಡುತ್ತ ಹೋರಾಡಿ ಕಲಹದಿಂದ ರಣಕಣವಾಗಿಸಿರುವುದು ವಾಸ್ತವ ವಿಷಯ. (ರಣ = ಯುದ್ಧ, ಕಾಳಗ; ಕಲಹ). ಆದರೆ ಮನುಷ್ಯನಾದವನು ಸ್ವಾರ್ಥಪೂರಿತನಾಗಿ ಅಧಿಕಾರ ಬಂಡವಾಳಶಾಹಿ ಗುಣಗಳಿಂದ ವರ್ಣದ್ವೇಷಿಯಾಗಿ, ಜಾತಿ ಧರ್ಮ ದ್ವೇಷಿಯಾಗಿ, ಅಸಹಾಯಕ ದೀನ ದಲಿತರನ್ನು ಶೋಷಿಸುತ್ತಿರುವುದು ಕಠೋರ, ಕ್ರೂರ ಅಮಾನವೀಯ ನಡೆ. ಕುವೆಂಪು ಅವರು ಭಾರತದಲ್ಲಿ ಸದಾ ಅನ್ನಕ್ಕಾಗಿ, ನಡೆಯುತ್ತಿರುವ ಹಲವು ಬಗೆಯ ಕಲಹ ಹೋರಾಟಗಳನ್ನು 'ಅನ್ನರಣ' ಪದದಿಂದ ಚಿತ್ರಿಸಿದ್ದಾರೆ. ನಮ್ಮ ದೇಶ ಜನಸಂಖ್ಯಾಸ್ಫೋಟದಿಂದ 'ಅನ್ನರಣದ ಭಾರತ'ವಾಗಿದೆ ಎಂದಿದ್ದಾರೆ. ಆ ಅನ್ನ ಕುರುಕ್ಷೇತ್ರದ ಅಗ್ನಿಯಲ್ಲಿ ಯಶಸ್ವಿಯಾಗಿ ಹೋರಾಡುತ್ತಿರುವ ರೈತನನ್ನು 'ಹಲಾಯುಧದ ಭೀಷ್ಮಕಲಿ' ಎಂದು ಬಣ್ಣಿಸಿದ್ದಾರೆ. ಅದು ಆಹಾರಕ್ಕಾಗಿ ಬೇಸಾಯ ಕಂಡುಹಿಡಿದು, ನೇಗಿಲು ಎಂಬ ಆಯುಧದಿಂದ ಹೊಲ ಉತ್ತು ಬೆಳೆ ತೆಗೆಯುವ ಈ ಲೋಕದ ಶೂರ ವ್ಯಕ್ತಿ ಎಂಬ ಅರ್ಥವನ್ನು 'ಭೀಷ್ಮ' ಪದ ಧ್ವನಿಸುತ್ತದೆ.ಅವನು ಸದಾ ಜಗತ್ತಿನ ಕ್ಷೇಮ, ಸುಖ, ಸಂತೋಷಕ್ಕಾಗಿ ದುಡಿದು ಆಹುತಿಯಾಗುತ್ತಿದ್ದಾನೆ. ಆ ತ್ಯಾಗ ಜೀವಿಯಾದ ಧನ್ಯ ಬೇಸಾಯಗಾರ (ಹಲಿ)ನಿಗೆ ನಮಸ್ಕಾರ ಎಂದು ಕಾವ್ಯ ರಚಿಸಿದ್ದಾರೆ.

'ಅನ್ನರಣದ ಭಾರತದಲಿ
ಕುರುಕ್ಷೇತ್ರದಗ್ನಿಯಲಿ
ಹಲಾಯುಧದ ಭೀಷ್ಮಕಲಿ,
ಜಗದ ಸೊಗಕೆ ಬೇಳ್ದಬಲಿ,
ನಮೋ ನಿನಗೆ, ಧನ್ಯಹಲಿ!
(ಕುಳದ ಕಲಿಗೆ - ಪ್ರೇತ-ಕ್ಯೂ)

ರತಿಯೋಕುಳಿ

ಕುವೆಂಪು ಅವರು ಸೂರ್ಯೋದಯವನ್ನು ಬಣ್ಣಿಸುತ್ತ ಅದು ದ್ವಾರ ತೆರೆದು ಬರುತ್ತಿದೆ. ಸ್ವರ್ಗ ಸ್ವರ್ಣ ಕಿರಣಗಳಿಂದ ನದಿಯ ಜಲವು ಸ್ವರ್ಣ ದ್ರವದಂತೆ ಆನಂದ ವರ್ಣದಿಂದಿದೆ. ಅದು ರತಿಮನ್ಮಥರ ಪ್ರೀತಿಯ ಶೃಂಗಾರದಾಟದ ಓಕುಳಿ ಎರಚಾಡಿದಂತಿದೆ ಎಂದಿದ್ದಾರೆ. ಅವರು ಆ ಮನೋಹರ ಬೆಳಗಿನ ಜಲ ಪ್ರಕೃತಿಯನ್ನು 'ರತಿಯೋಕುಳಿ' ಪದದಿಂದ ವರ್ಣಿಸಿರುವುದು ಅವರು ನಿಸರ್ಗದಲ್ಲಿ ಕಂಡ ಪ್ರೀತಿಯ ವಿಶೇಷ ಅಭಿವ್ಯಕ್ತಿಯಾಗಿದೆ.

'ಕಾಣಿದೊ ಸರಸಿಯ ಜಲವಿಸ್ತೀರ್ಣಂ
ಸ್ವರ್ಣದ್ರವವೆನೆ ಸುಮನೋವರ್ಣಂ
ರತಿಯೋಕುಳಿಯಂತೆ!'
(ಇಂದ್ರ ದಿಗಂತದಿ - ಪಕ್ಷಿಕಾಶಿ)

ನೆಲವೆಣ್ಣಿನೊಳ್ನಗೆ

ನೆಲವೆಣ್ಣಿನೊಳ್ನಗೆ (ನಾ). ಭೂದೇವಿಯ ಚೆಲುವಾದ ನಗೆ

ಕುವೆಂಪು ಅವರು ಭೂಮಿಯ ಮೇಲೆ ಸ್ಫಟಿಕದಂತೆ ಹೊಳೆದು ಶೋಭಿಸುವ ಸರೋವರವನ್ನು 'ನೆಲವೆಣ್ಣಿನೊಳ್ನಗೆ' ಪದ ರೂಪಿಸಿ ಬಣ್ಣಿಸಿದ್ದಾರೆ. ಕವಿ ಸೃಷ್ಟಿಸಿರುವ ಆ ಪ್ರತಿಮೆಯಲ್ಲಿ ಭೂದೇವಿಯ ನಗುವೆ ನೀರಾಗಿ ಹರಿದು ಸರೋವರವಾಗಿದೆ!

ನೆಲವೆಣ್ಣಿನೊಳ್ನಗೆಯೆ ನೀರಾಯ್ತೋ?

ಮಾಚು ಪಿಚುವಿಗೆ ಮನಸೋತಾಗ...

ದಕ್ಷಿಣ ಅಮೆರಿಕದ ಪೆರುವಿನ ಆಂಡಿಸ್ ಪರ್ವತ ಶ್ರೇಣಿಯಲ್ಲಿರುವ ಇಂಕಾ ಸಾಮ್ರಾಜ್ಯದ ಅವಶೇಷ ನೋಡುಗರನ್ನು ಬೆರಗಾಗಿಸುತ್ತದೆ. ಕಡಿದಾದ ಬೆಟ್ಟದ ತುದಿಯಲ್ಲಿ ಬಂಡೆಕಲ್ಲುಗಳನ್ನು ಬಳಸಿ 14ನೇ ಶತಮಾನದಲ್ಲಿ ಇಂಕಾ ದೊರೆಗಳು ನಿರ್ಮಿಸಿದ ಈ ನಗರ ಅತ್ಯಂತ ರಮಣೀಯ ತಾಣ. ಇಲ್ಲಿ ಕಲ್ಲಿನಲ್ಲಿ ಅಚ್ಚುಕಟ್ಟಾದ ಕಟ್ಟಡಗಳನ್ನು ಕಟ್ಟಿದ ರೀತಿ ಮನಸ್ಸಿನಲ್ಲಿ ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ...

ವಿ. ಶ್ರೀನಿವಾಸ

ಪ್ರವಾಸ



ಆಂಡಿಸ್ ಪರ್ವತ ಶ್ರೇಣಿಯಲ್ಲಿರುವ ಇಂಕಾ ಸಾಮ್ರಾಜ್ಯದ ಕೋಟೆಯ ವಿಹಂಗಮ ನೋಟ...

ನಮ್ಮ ಮಕ್ಕಳು ರೆಕ್ಕೆ ಕಟ್ಟಿಕೊಂಡು ಅಮೆರಿಕಕ್ಕೆ ಹಾರಿಹೋದ ಮೇಲೆ ನಾವು ಅಲ್ಲಿಗೆ ಎರಡು ಬಾರಿ ಹೋಗಿ ಹಲವಾರು ಸ್ಥಳಗಳನ್ನು ನೋಡಿ ಬಂದಿದ್ದೆವು. ಮೂರನೇ ಬಾರಿ ಹೋಗುವ ಸಂದರ್ಭ ಬಂದಾಗ ಲೇಖಕಿ ನೇಮಿಚಂದ್ರ ಅವರ 'ಪೆರುವಿನ ಪವಿತ್ರ ಕಣಿವೆಯಲ್ಲಿ' ಪುಸ್ತಕದಿಂದ ಪ್ರೇರಿತರಾಗಿ ಅದನ್ನು ನೋಡುವ ಕನಸಿನ ಬೀಜ ಮೊಳಕೆಯೊಡೆಯಿತು.

ಉತ್ತರ ಅಮೆರಿಕದಿಂದ ದಕ್ಷಿಣ ಅಮೆರಿಕದ ಪೆರುವಿನ ರಾಜಧಾನಿ ಲೀಮಾಕ್ಕೆ ಪ್ರಯಾಣ ಬೆಳೆಸಿದೆವು. ಭೂಪಟದಲ್ಲಿ, ಗೋಳದಲ್ಲಿ ಮೇಲೆ ಕೆಳಗೆ ಇರುವ ಖಂಡಗಳನ್ನು ನೋಡಿ ಅಲ್ಲೇ ಆಚೆಈಚೆ ಇವೆ ಎಂಬ ಭಾವನೆ. ಆದರೆ ಅಗಾಧ ದೂರದ ಕಲ್ಪನೆಯೇ ಇರಲಿಲ್ಲ. ವಿಮಾನದಲ್ಲಿಯೇ ಸುಮಾರು ಹನ್ನೆರಡು ಗಂಟೆಗಳ ಪ್ರಯಾಣ. ಮರುದಿನ ಲೀಮಾದಿಂದ ಕುಸ್ಕೋ ನಗರಕ್ಕೆ ಮತ್ತೊಂದು ವಿಮಾನ ಪ್ರಯಾಣ. ಆಂಡಿಸ್ ಪರ್ವತದ ಮಡಿಲಿನಲ್ಲಿರುವ ಕುಸ್ಕೋ ನಗರ 11,600 ಅಡಿಗಳಷ್ಟು ಎತ್ತರದಲ್ಲಿದೆ. ಆದರೆ ಆ ನಗರ ಒಂದು ಬೋಗುಣಿಯಂತಿದ್ದು, ಸುತ್ತಲೂ ಪರ್ವತಗಳಿರುವುದರಿಂದ ನಾವು ಎತ್ತರದಲ್ಲಿದ್ದೇವೆ ಎಂದು ತಿಳಿಯುವುದೇ ಇಲ್ಲ. ಕುಸ್ಕೋ ತಲುಪಿದಾಗ ಆ ಇಡೀ ದಿನ ವಿಶ್ರಾಂತಿಗೆ ಮೀಸಲಾಗಿತ್ತು. ಏಕೆ ಹೀಗೆ ಎಂದುಕೊಂಡೆವು. ಊಟವಾಗಿ ಸ್ವಲ್ಪ ಹೊತ್ತಿನ ನಂತರ ಅರಿವಾಗತೊಡಗಿತು. ಆ ಎತ್ತರದಲ್ಲಿ ಕಡಿಮೆ ಆಮ್ಲಜನಕದ ಕಾರಣ ತಲೆನೋವು, ವಾಂತಿ ಮುಂತಾದ ಅಸ್ವಸ್ಥತೆ ಶುರುವಾಯಿತು.

ಕುಸ್ಕೋ ಇಂದಿಗೂ ಇಂಕಾ ಕಾಲದಂತೆಯೇ ಉಳಿದಿದೆ. ಶತಮಾನಗಳ ಆಳಕ್ಕೆ ಇಳಿದ ಅನುಭವ. ಪುರಾತನ ಇಂಕಾ ಸಾಮ್ರಾಜ್ಯದ ರಾಜಕೀಯ ಮತ್ತು ಧಾರ್ಮಿಕ ರಾಜಧಾನಿ. ಇಂದಿಗೂ ಅನೇಕ ಇಕ್ಕಟ್ಟಾದ ರಸ್ತೆಗಳಲ್ಲಿ ಇಂಕಾ ಕಾಲದ ಕಲ್ಲಿನ ನೆಲಹಾಸುಗಳಿವೆ. ಒಂದು ಸಣ್ಣ ಕಾರು ಹೋಗಬಹುದಾದ ಕಿರಿದಾದ ರಸ್ತೆಗಳಲ್ಲಿ ಎಲ್ಲೂ ಒನ್‌ವೇ ಎಂದು ಬೋರ್ಡ್ ಇರದಿದ್ದರೂ ಕಾರುಗಳು ಏಕಮುಖವಾಗಿ ಮಾತ್ರ ಸಲೀಸಾಗಿ ಓಡಾಡುತ್ತವೆ. 1983ರಲ್ಲಿ ಯುನೆಸ್ಕೋ ಈ ನಗರವನ್ನು ಐತಿಹಾಸಿಕ ತಾಣವೆಂದು ಗುರುತಿಸಿದೆ. ನಗರದ ಹೊರವಲಯದ ಒಂದು ಭಾಗದಲ್ಲಿ ಗುಡ್ಡದ ಮೇಲೆ ಕೋಟೆಯ ಅವಶೇಷಗಳಿವೆ. ಚಕ್ರದ ಬಳಕೆಯೂ ಅವರಿಗೆ ಗೊತ್ತಿಲ್ಲದ ಕಾಲದಲ್ಲಿ ದೊಡ್ಡ ದೊಡ್ಡ ಬಂಡೆಗಳನ್ನು ಜೋಡಿಸಿ ಭೂಕಂಪವನ್ನು ಸಹಿಸುವಂತೆ ಕೋಟೆ ಕಟ್ಟಿದ್ದಾರೆ!

ನಗರದ ಉತ್ತರ ಭಾಗದಲ್ಲಿ ಒಂದು ಗುಡ್ಡದ ಮೇಲೆ ತೆರೆದ ಬಾಹುಗಳ ಏಸುವಿನ ಶಾಂತಮೂರ್ತಿ ಇದೆ. ಆದರೆ ನಗರದಲ್ಲಿರುವ ವೈಭವೋಪೇತ ಚರ್ಚುಗಳು ಸ್ಪಾನಿಶರ ಲೂಟಿ, ಹಿಂಸಾಕಾಂಡ, ರಕ್ತಸಿಕ್ತ ಚರಿತ್ರೆಯ ಕುರುಹುಗಳಾಗಿ ಉಳಿದಿವೆ. ಕುಸ್ಕೋ ನಗರದ ಮಧ್ಯಭಾಗದಲ್ಲಿ ಪ್ಲಾಜಾ ಡಿರ್‍ಮ್ಯಾಸ್ ಎಂಬ ಆಕರ್ಷಣೀಯ ಸ್ಕ್ವೇರ್ ಇದೆ. ಸಣ್ಣ ಪಾರ್ಕ್ ಸುತ್ತಲೂ ಸ್ಪಾನಿಶ್ ಕಾಲದ ಕಟ್ಟಡಗಳು, ಸುತ್ತಲೂ ಬೆಟ್ಟಗುಡ್ಡಗಳ ಸಾಲು. ಆ ಬೆಟ್ಟದ ಮೇಲೆ ನಾಸ್ಕಾ ಗೆರೆಗಳನ್ನು ಅನುಸರಿಸಿ ಪೆರು ಎಂದು ಬೃಹದಾಕಾರವಾಗಿ ಬರೆದಿರುವುದು ಇಲ್ಲಿಂದ ಕಾಣುತ್ತದೆ. ಈ ಸ್ಕ್ವೇರ್ ಸದಾ ಸ್ಥಳೀಯರಿಂದ, ಪ್ರವಾಸಿಗಳಿಂದ ತುಂಬಿರುತ್ತದೆ. ಸಹಜವಾಗಿ ಬೀದಿಬದಿ ತಿನಿಸುಗಳು ಪ್ರವಾಸಿಗರ ಆಕರ್ಷಣೆ. ಇಲ್ಲಿ ನಮಗೆ ವಿಶೇಷವಾಗಿ ಕಂಡಿದ್ದು ಹಲವಾರು ಮಾರಾಟಗಾರರು ಚಿತ್ರಕಲಾಕೃತಿಗಳನ್ನು ಮಾರುತ್ತಿದ್ದರು. ಪಾಶ್ಚಾತ್ಯ ದೇಶಗಳಲ್ಲಿ ಚಿತ್ರಕಲಾಕೃತಿಗಳಿಗೆ ಭಾರೀ ಬೆಲೆ ಇದೆ. ಹರಾಜುಗಳಲ್ಲಿ ಕೋಟಿ ಕೋಟಿ ರೂಪಾಯಿಗಳಿಗೆ ಮಾರಾಟವಾಗುತ್ತವೆ.

ಮಾಚು ಪಿಚುವಿಗೆ ನಾವು ಹೋಗಿದ್ದು ಸುತ್ತಮುತ್ತಲ ಪ್ರಕೃತಿ ಸೌಂದರ್ಯದ ನೋಟಕ್ಕೆ ಅನುಕೂಲವಾಗುವಂತೆ ವಿಶಾಲ ಗಾಜುಗಳಿಂದ ನಿರ್ಮಿಸಲಾದ ವಿಸ್ಟಾಡೋಂ ರೈಲಿನಲ್ಲಿ. ವಿಮಾನದ ಗಗನಸಖಿಯರ ಹಾಗೆ ಗಾಡಿ ತಳ್ಳಿಕೊಂಡು ಬಂದು ಸಿರಿಧಾನ್ಯದ ಬಿಸ್ಕತ್ತು, ಚಾಕೋಲೇಟ್, ಕಾಫಿ, ಟೀ ಕೊಟ್ಟರು. ನಂತರ ಒಂದೊಂದೇ ಬೋಗಿಯ ಪ್ರಯಾಣಿಕರನ್ನು ರೈಲಿನ ಕಡೆಯ ಬೋಗಿಗೆ ಕರೆದೊಯ್ದರು. ಅಲ್ಲಿ ಈ ಪರಿಚಾರಕರೇ ಕಲಾವಿದರಾಗಿ ಹಾಡು ನೃತ್ಯಗಳಿಂದ ರಂಜಿಸಿದರು. ಪಾನಪ್ರಿಯರಿಗೆ ಅಲ್ಲಿ ಕೊಳ್ಳಲು ಪಾನೀಯವೂ ಇತ್ತು. ತೆರೆದ ಜಾಗದಲ್ಲಿ ಪ್ರಕೃತಿಯ ದೃಶ್ಯವನ್ನೂ ವೀಕ್ಷಿಸಬಹುದಿತ್ತು. ನಂತರ ಅದೇ ಪರಿಚಾರಕ, ಕಲಾವಿದರು ಮಾರಾಟಗಾರರಾಗಿ ಬದಲಾಗಿ ವಿವಿಧ ವಸ್ತುಗಳನ್ನು ಮಾರಲು ಬಂದರು! ಒಟ್ಟಿನಲ್ಲಿ ಮಾಚು ಪಿಚು ರೈಲಿನ ಪ್ರಯಾಣ ಮರೆಯಲಾಗದ ಅನುಭವ. ರೈಲಿನಲ್ಲಿ ಕನ್ನಡಿಗರೊಬ್ಬರು ಸಿಕ್ಕಿದ್ದರು. ನಾವು ಕನ್ನಡ ಮಾತನಾಡುತ್ತಿದ್ದುದನ್ನು ಕೇಳಿದ ಅವರ ಮರಾಠಿ ಹೆಂಡತಿ 'ಅದು ಕನ್ನಡವೋ ತೆಲುಗೋ' ಎಂದು ತನ್ನ ಕನ್ನಡಿಗ ಗಂಡನನ್ನು ಕೇಳಿದರಂತೆ. ಅವರು ಬಹಳ ಸಂತೋಷದಿಂದ ನಮ್ಮೊಡನೆ ಕನ್ನಡದಲ್ಲಿ ಮಾತನಾಡಿದರು.

ಮಾಚು ಪಿಚು ಬೆಟ್ಟಕ್ಕೆ ಖಾಸಗಿ ವಾಹನ ಹೋಗುವಂತಿಲ್ಲ. ಬಹಳ ವ್ಯವಸ್ಥಿತವಾದ ಬಸ್ ಸೌಲಭ್ಯ ಇದೆ. ಉತ್ತಮ ರಸ್ತೆಯಲ್ಲಿ ಸುಮಾರು ಒಂದು ಗಂಟೆಯ ಬಸ್ ಪ್ರಯಾಣದುದ್ದಕ್ಕೂ ದಟ್ಟವಾಗಿ ಸುತ್ತಲೂ ಸುತ್ತುವರಿದ ಆಂಡಿಸ್ ಪರ್ವತದ ಸಾಲುಗಳು, ಕಿರಿದಾದ ಕಣಿವೆಗಳು, ಕಣಿವೆಯಾಳದಲ್ಲಿ ಹರಿವ ನದಿಯ ಅದ್ಭುತ ನೋಟ ಬೆರಗಾಗಿಸುವಂಥದ್ದು. ನೋಡುವ ಗುರಿಯಷ್ಟೇ ಕ್ರಮಿಸುವ ಹಾದಿಯೂ ರಮ್ಯ ಮನೋಹರ. ಮಾಚುಪಿಚು ನಮ್ಮ ನಿರೀಕ್ಷೆಯನ್ನು ಹುಸಿಗೊಳಿಸಲಿಲ್ಲ. ಅಷ್ಟು ದೂರದ ಪ್ರಯಾಣ ಸಾರ್ಥಕವೆನಿಸಿತು. ಪೆರುವನ್ನು ನೂರಾರು ವರ್ಷ ಆಳಿದ ಸ್ಪ್ಯಾನಿಷರಿಗೆ ಮಾಚು ಪಿಚು ನಗರ ಸಿಕ್ಕಿರಲಿಲ್ಲ. 1911ರಲ್ಲಿ ಸ್ಥಳೀಯರ ಸಹಾಯದಿಂದ ಅಮೆರಿಕದ ಹಿರಮ್‌ಬಿಂಗಮ್ ಇದನ್ನು ಕಂಡುಹಿಡಿದಿದ್ದ. ಇಷ್ಟು ಕಡಿದಾದ ಬೆಟ್ಟದ ತುದಿಯಲ್ಲಿ ಇಂಕಾ ದೊರೆಗಳು ತಮ್ಮ ನಗರವನ್ನು ಬೃಹದಾಕಾರದ ಬಂಡೆಗಳಿಂದ ನಿರ್ಮಿಸಿದ್ದಾದರೂ ಯಾಕೆ ಎಂಬ ಪ್ರಶ್ನೆ ಇನ್ನೂ ಕಾಡುತ್ತಿದೆ. ಇದು ಕೋಟೆ, ಅರಮನೆ ನಗರ ಅಲ್ಲ. ಇದೊಂದು ತರಬೇತಿ, ಅಧ್ಯಯನ, ಉನ್ನತ ಶಿಕ್ಷಣ, ಅಧ್ಯಾತ್ಮ ತರಬೇತಿ ಕೇಂದ್ರ ಮುಂತಾಗಿ ಇತಿಹಾಸ ತಜ್ಞರು ಚರ್ಚೆ, ಅಧ್ಯಯನ ಮುಂದುವರೆಸಿದ್ದಾರೆ. ಮಾಚುಪಿಚು ರಹಸ್ಯ ರೋಮಾಂಚನದ ನಗರ. ಅತ್ಯಂತ ರಮಣೀಯ ತಾಣ. ಆಂಡಿಯನ್ ಸಂಸ್ಕೃತಿಯ ಉತ್ಕೃಷ್ಟತೆಯ ಸಂಕೇತ. ಇಲ್ಲಿ ಅಧ್ಯಾತ್ಮ ಶಕ್ತಿ ಇದೆ ಎಂದು ಇಂಕಾಗಳು ನಂಬಿದ್ದರು. ನಾವು ಹಿಮಾಲಯ ಪರ್ವತಗಳ ಬಗ್ಗೆ ನಂಬಿರುವ ಹಾಗೆ. ಈ ಪರಿಸರದಲ್ಲಿ ಆಧ್ಯಾತ್ಮಿಕ ಶಕ್ತಿ ಯಥೇಚ್ಛವಾಗಿ ಕಂಡಿದ್ದರೆ ಅಚ್ಚರಿಯೇನಿಲ್ಲ. ಕಟ್ಟಡಗಳೆಲ್ಲ ಬಂಡೆಕಲ್ಲಿನಿಂದ ಕಟ್ಟಿದವು. ಒಂದೊಂದು ಕಲ್ಲನ್ನೂ ಅದೆಷ್ಟು ಕೋನಗಳಿಂದ ಅದೆಷ್ಟು ಸೂಕ್ಷ್ಮವಾಗಿ ಕತ್ತರಿಸಿ ಜೋಡಿಸಿದ್ದಾರೆ. ಮೇಲೆ ಹುಲ್ಲುಹಾಸಿನ ಹೊದಿಕೆ ಸೂರು. ಈ ರೀತಿ ಕಟ್ಟಡ ಕಟ್ಟುವ ತಾಂತ್ರಿಕತೆ ಹೇಗೆ ಬಂತು? ಇಂದಿಗೂ ನಿಗೂಢವಾಗಿದೆ.

14ನೇ ಶತಮಾನದಲ್ಲಿ ಇಂಕಾಗಳು ಇದನ್ನು ಕಟ್ಟಿದರು. 16ನೇ ಶತಮಾನದವರೆಗೂ ಜೀವಂತವಿದ್ದ ನಗರ. 1912ರಲ್ಲಿ ಈ ಸ್ಥಳವನ್ನು ಉತ್ಖನನದ ಮೂಲಕ ಪುನರುಜ್ಜೀವನಗೊಳಿಸಲಾಯಿತು. 400 ವರ್ಷಗಳ ಯೂರೋಪಿಯನ್ನರ ಲೂಟಿಯಿಂದ ಪಾರಾಗಿದ್ದ ಈ ಸ್ಥಳ ಅಮೆರಿಕದಿಂದ ಲೂಟಿಯಾಯಿತೇ? ಉತ್ಖನನ ಮಾಡಿದಾಗ ಸಿಕ್ಕಿರಬಹುದಾದ ಚಿನ್ನ ಬೆಳ್ಳಿ ಏನಾಯಿತು? ಹಿರಮ್‌ಬಿಂಗಮ್ ಏನೂ ಹೇಳಿಲ್ಲ. ಅಂದು ಬೆಟ್ಟದಿಂದ ವಾಪಸ್ ಬಂದು ಮತ್ತೆ ಮರುದಿನ ಬಸ್ ಮೂಲಕ ಬೆಟ್ಟಕ್ಕೆ ಹೋದೆವು. ನಾವು ಹೋದಾಗ ತುಂತುರಿನ ಮಳೆ. ಹಾಗೇ ಮಾಚು ಪಿಚು ಬೆಟ್ಟದ ಚಾರಣ ಮಾಡಿ ಮತ್ತೊಮ್ಮೆ ಮಾಚು ಪಿಚು ನಗರವನ್ನು ವಿವಿಧ ಕೋನಗಳಲ್ಲಿ ವಿವಿಧ ಎತ್ತರದಿಂದ ಕಣ್ತುಂಬಿಕೊಂಡೆವು.



ಕಣಿವೆಯಾಳದಲ್ಲಿ ಹರಿಯುವ ನದಿಯ ಅದ್ಭುತ ನೋಟ...




ಮಾಚು ಪಿಚು ನಗರದ ಅವಶೇಷ



ಮಾಚು ಪಿಚುವಿಗೆ ವಿಸ್ಟಾಡೋಂ ರೈಲಿನಲ್ಲಿ ಸಾಗುವಾಗ...

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಣ್ಣ ಚಕ್ಕು ಕೇಶ್ರಣ್ಣು ಕಥೆಯ — ಸುಟ್ಟುಹೋದ ಕೊಡೆ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡ ಮಧ್ಯಾಹ್ನ ಪೇಟೆಗೆ ಹೊರಟಿದ್ದ. ಬಿಸಿಲು ನೆತ್ತಿಸುಡುತ್ತಿತ್ತು. ನಾಲ್ಕು ಹೆಜ್ಜೆ ಹಾಕುವಷ್ಟರಲ್ಲಿ ಗುಂಡ ಬೆವರತೊಡಗಿದ. ಇದನ್ನು ನೋಡಿ ಸೂರ್ಯ ನಗುತ್ತಿದ್ದ. ಬಿಸಿಲಿನ ಝಳದಿಂದ ತಪ್ಪಿಸಿಕೊಳ್ಳಲು ಜೊತೆಗೆ ಕೊಂಡೊಯ್ದಿದ್ದ ಕೊಡೆಯನ್ನು ತೆರೆದ. ಆಗ ಕೊಂಚ ತಂಪೆನಿಸಿತು. ಸೂರ್ಯನನ್ನು ನೋಡಿ ಆತ ನಕ್ಕ. ಕೆಲ ಕ್ಷಣದಲ್ಲೇ ಬಿಸಿಲಿನ ತಾಪಕ್ಕೆ ಕೊಡೆಗೆ ಬೆಂಕಿ ಹತ್ತಿಕೊಂಡಿತು. ಇದನ್ನು ಕಂಡ ಗುಂಡ ಹೆದರಿ ನೆರಳಿನತ್ತ ಓಡಿದ. ಆತ ಓಡುವ ವೇಗ ನೋಡಿ ಸೂರ್ಯನಿಗೆ ಮತ್ತೆ ಜೋರಾಗಿ ನಗು ಬಂದಿತು.

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ

1	ಕರಿ	+	ನಗಿ	+	ಕ	=	
2	ಜಮಾ	+	ವಾಸ	+	ದ	=	
3	ಮಗ	+	ಸಾರ	+	ಹಾ	=	
4	ದಾರ	+	ಹಣೆ	+	ಉ	=	
5	ಮಾಳ	+	ಕಡು	+	ಜ	=	

ಜಾಣಪದ ಆಟ

ಇಲ್ಲಿ ಕೊಟ್ಟಿರುವ 20 ಪದಗಳಲ್ಲಿ ಸೂಕ್ತವಾದ ಎರಡೆರಡು ಪದಗಳನ್ನು ಆಯ್ಕೆ ಮಾಡಿಕೊಂಡು ಕೂಡಿಸಿ ಬರೆದರೆ ನಾಲ್ಕು ಅಕ್ಷರದ ಒಂದು ಅರ್ಥಬದ್ಧ ಪದವಾಗುವುದು. ಇಂತಹ 10 ಪದಗಳನ್ನು ರಚಿಸಿಕೊಡಿ.

ಪದ ಪಟ್ಟಿ

ಗಿರಿ	ನಾಯಿ	ಗಡಿ	ಸ್ಥಾನ	ಮದ
ಕಾಡು	ಹರಿ	ಬಡಿ	ದ್ವಾರ	ಕೊಡೆ
ಬಳೆ	ಬಿಡಿ	ಉಡ	ದಾರ	ಪಾಪ
ರಾಜ	ನಾರಿ	ವಾರ	ರಾಜ	ಕೋಡು

1				
2				
3				
4				
5				
6				
7				
8				
9				
10				

ಗಣಿತದಲ್ಲಿ ಗರ್ದಿಗಮ್ಮತ್ತು ಅವಿಭಾಜ್ಯ ಸಂಖ್ಯಾ ಮಾಯಾಚೌಕ

ಇದೊಂದು ಸ್ವಾರಸ್ಯಕರ ಅವಿಭಾಜ್ಯ ಸಂಖ್ಯಾ ಮಾಯಾಚೌಕ. ಹೇಗೆ ಕೂಡಿದರೂ ಉತ್ತರ 102.



03	71	05	23
53	11	37	01
17	13	41	31
29	07	19	47

ಅದಲು ಬದಲು ಕಂಚಿ ಕದಲು

ಇಲ್ಲಿರುವ ಪದಗಳನ್ನು ಅದಲು ಬದಲು ಮಾಡಿದರೂ ಮತ್ತೊಂದು ಅರ್ಥಬದ್ಧ ಪದಗಳೇ ಆಗುತ್ತವೆ.

1	ಬಲರಾಜ	ರಾಜಬಲ
2	ಧನರಾಜ	ರಾಜಧನ
3	ಗುರುರಾಜ	ರಾಜಗುರು
4	ಯೋಗರಾಜ	ರಾಜಯೋಗ
5	ಹಂಸರಾಜ	ರಾಜಹಂಸ
6	ಗಿರಿರಾಜ	ರಾಜಗಿರಿ

ವರ್ಗ ಸಂಖ್ಯಾ ವಿನೋದ

ಇದೊಂದು ವಿಚಿತ್ರ ವರ್ಗಸಂಖ್ಯೆ. ಸಂಖ್ಯೆಯಲ್ಲಿನ ಅಂಕಿಗಳನ್ನು ಸ್ಥಾನಪಲ್ಲಟ ಮಾಡಿದರೂ ಗಿರಕಿ ಹೊಡೆದಂತೆ ಆ ಸಂಖ್ಯೆಗಳೂ ವರ್ಗ ಸಂಖ್ಯೆಗಳಾಗುತ್ತವೆ.

$$1296 = 36^2$$
$$9216 = 96^2$$
$$2916 = 54^2$$



ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಬಾಡದಹೂ 2.ಕಾರಣಕೊಡು 3.ಉಣಬಡಿಸು 4.ಹುರಿದಕಾಳು 5.ಕಲಬೆರಕೆ


ಜಾಣಪದ ಆಟ: 1.ಅಣ್ಣಿಗೇರಿ 2.ಆನೆಕಲ್ಲು 3.ಇಕ್ಕೇರಿ 4.ಈಚಲಕರಂಜಿ 5.ಉಡುಪಿ 6.ಊಟಿ 7.ಎಲ್ಲಮ್ಮನಗುಡ್ಡ 8.ಏಣಗಿ 9.ಐಹೊಳೆ 10.ಒಕ್ಕುಂದ 11.ಓಬಳಾಪುರ 12.ಔರಂಗಬಾದ್ 13.ಅಂಕೋಲ



ರಜಾ ಮಜಾ ಆಟ:

8	4	1	= 13
3		7	
2	6	5	= 13
= 13		= 13	

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಕನ್ನಿಕಾ ಪಟ್ಟಣಶೆಟ್ಟಿ
ಹಾವೇರಿ




ಶಾಶ್ವತಿ ಎಸ್.ಯು.
ತುಮಕೂರು



ಕಿಶನ್ ಎನ್.ಎನ್.
ರಾಣೇಬೆನ್ನೂರು



ಸಮನ್ವಿ
ಅರಸೀಕೆರೆ



ಎಚ್.ಎನ್. ನಲ್ಮೆ
ಹೊಸದುರ್ಗ



ಪ್ರಯಾಗ್ ಬಿ.
ಕೋಲಾರ



ದ್ರಾಕ್ಷಿ ಇಳುವರಿಗೆ ಪೆಟ್ಟು: ಬೆಳೆಗಾರರಿಗೆ ದಕ್ಕದ ದರ ಏರಿಕೆ ಲಾಭ

ಒಣದ್ರಾಕ್ಷಿ ಉತ್ಪಾದನೆ ಕುಸಿತ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಜಿಲ್ಲೆಯಲ್ಲಿ ಹವಾಮಾನ ವೈಪರೀತ್ಯದಿಂದಾಗಿ ಈ ಬಾರಿ ದ್ರಾಕ್ಷಿ ಇಳುವರಿ ಕುಸಿತ ಕಂಡಿದೆ. ಇದರಿಂದ ಒಣದ್ರಾಕ್ಷಿ ಉತ್ಪಾದನೆಯೂ ಕುಸಿದಿದೆ.

ಮಾರುಕಟ್ಟೆಯಲ್ಲಿ ಪೂರೈಕೆಯ ಕೊರತೆಯಿಂದಾಗಿ ಒಣದ್ರಾಕ್ಷಿ ದರ ಏರುಗತಿಯಲ್ಲಿದೆ. ಆದರೆ, ಇಳುವರಿ ಕೊರತೆಯಿಂದಾಗಿ ನಿರೀಕ್ಷಿತ ಪ್ರಮಾಣದಲ್ಲಿ ಒಣದ್ರಾಕ್ಷಿ ಉತ್ಪಾದನೆಯಾಗಿಲ್ಲ. ಹಾಗಾಗಿ, ಬೆಲೆ ಏರಿಕೆಯ ಲಾಭ ಬೆಳೆಗಾರರಿಗೆ ಸಿಗುತ್ತಿಲ್ಲ.

ಕಳೆದ ವರ್ಷ ಕೆ.ಜಿ ಒಣದ್ರಾಕ್ಷಿಗೆ ₹80ರಿಂದ ₹130 ದರವಿತ್ತು. ಈ ವರ್ಷ ಮಹಾರಾಷ್ಟ್ರದ ತಾಸಗಾಂವ್, ಸಾಂಗ್ಲಿ, ಪಂಢರಪುರ ಮಾರುಕಟ್ಟೆಯಲ್ಲಿ ಕೆ.ಜಿಗೆ ₹180ರಿಂದ ₹300 ಧಾರಣೆ ಇದೆ. ಸರಾಸರಿ ದರ ₹250ರ ವರೆಗೂ ಇದೆ.

'2023ರಲ್ಲಿ 5 ಎಕರೆಯಲ್ಲಿ ದ್ರಾಕ್ಷಿ ಬೆಳೆದಿದ್ದೆ. ಒಟ್ಟು 14.5 ಟನ್ ಒಣದ್ರಾಕ್ಷಿ ಉತ್ಪಾದನೆಯಾಗಿತ್ತು. ಈ ಬಾರಿ 8 ಟನ್ ಒಣದ್ರಾಕ್ಷಿ ಉತ್ಪಾದನೆಯಾಗಿದ್ದು, ಕೆ.ಜಿಗೆ ₹250 ದರದಲ್ಲಿ ಮಾರಾಟವಾಗಿದೆ. ಹೆಚ್ಚಿನ ದರ ಲಭಿಸಿದರೂ ನಿರೀಕ್ಷಿತ ಲಾಭ ಸಿಕ್ಕಿಲ್ಲ' ಎಂದು ಅಥಣಿ ಒಣದ್ರಾಕ್ಷಿ ಸಂಸ್ಕರಣಾ ಸಂಘದ ಅಧ್ಯಕ್ಷ ಶಹಾಜಹಾನ್ ಡೊಂಗರಗಾಂವ 'ಪ್ರಜಾವಾಣಿ'ಗೆ ತಿಳಿಸಿದರು.

'ಮೊದಲ ಹಂತದ ಚಾಟ್ನಿ ವೇಳೆ ಬೆಳೆಗೆ ನೀರಿನ ಕೊರತೆಯಾಯಿತು. ಮತ್ತೊಂದು ಹಂತದ ಚಾಟ್ನಿ ವೇಳೆ ಅಕಾಲಿಕ ಮಳೆಯಿಂದ ಬೆಳೆ ಹಾನಿಗೀಡಾಯಿತು. ಇದರಿಂದ ಇಳುವರಿ ಕುಸಿಯಿತು' ಎಂದರು.

40 ಸಾವಿರ ಹೆಕ್ಟೇರ್‌ನಲ್ಲಿ ಫಸಲು: ಈ ಬಾರಿ ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯ 40 ಸಾವಿರ ಹೆಕ್ಟೇರ್‌ನಲ್ಲಿ ದ್ರಾಕ್ಷಿ ಬೆಳೆಯಲಾಗಿದೆ. ಈ ಪೈಕಿ ಶೇ 75ರಷ್ಟು ಫಸಲು ಒಣದ್ರಾಕ್ಷಿ ಉತ್ಪಾದನೆಗೆ ಬಳಕೆಯಾಗುತ್ತದೆ. ಎಕರೆಗೆ 3ರಿಂದ 4 ಟನ್ ಒಣದ್ರಾಕ್ಷಿ ಉತ್ಪಾದನೆ ಆಗುತ್ತದೆ.

'ಹವಾಮಾನ ವೈಪರೀತ್ಯದಿಂದ ಈ ಬಾರಿ ಶೇ 65ರಷ್ಟು ರೈತರಿಗೆ ದ್ರಾಕ್ಷಿ ಇಳುವರಿ ನಷ್ಟವಾಗಿದೆ. ಶೇ 35ರಷ್ಟು ರೈತರು ಎಕರೆಗೆ 2 ಟನ್ ಒಣದ್ರಾಕ್ಷಿ ಉತ್ಪಾದಿಸಿದ್ದಾರೆ' ಎಂದು ಕರ್ನಾಟಕ ದ್ರಾಕ್ಷಿ ಬೆಳೆಗಾರರ ಸಂಘದ ಅಧ್ಯಕ್ಷ ಅಭಯಕುಮಾರ್ ನಾಂದ್ರೇಕರ ತಿಳಿಸಿದರು.

'ಒಣದ್ರಾಕ್ಷಿ ಮಾರಲು ಮಹಾರಾಷ್ಟ್ರಕ್ಕೆ ಒಯ್ದರೆ ಹೆಚ್ಚಿನ ಹಣ ವ್ಯಯಿಸಬೇಕು. ನಮಗೆ ಹೆಚ್ಚು ನಷ್ಟವಾಗುತ್ತದೆ ಹೊರತು ಲಾಭವಾಗುವುದಿಲ್ಲ' ಎಂದು ಅಥಣಿ ತಾಲ್ಲೂಕಿನ ಐಗಳಿಯ ರೈತ ಎಂ.ಜಿ. ಪಾಟೀಲ ಹೇಳಿದರು.

ಇಳುವರಿ ಕುಸಿತದಿಂದ ಸಂಕಷ್ಟಕ್ಕೆ ಸಿಲುಕಿರುವ ಬೆಳೆಗಾರರ ನೆರವಿಗೆ ರಾಜ್ಯ ಸರ್ಕಾರ ಧಾವಿಸಬೇಕು. ಫಸಲ್ ಬಿಮಾ ಯೋಜನೆಯಡಿ ಕಂತು ಪಾವತಿಸಿದವರಿಗೆ ಹೆಚ್ಚಿನ ವಿಮಾ ಮೊತ್ತ ನೀಡಬೇಕು

ಅಭಯಕುಮಾರ್ ನಾಂದ್ರೇಕರ, ಅಧ್ಯಕ್ಷ, ಕರ್ನಾಟಕ ದ್ರಾಕ್ಷಿ ಬೆಳೆಗಾರರ ಸಂಘ

ವರ್ಷಕ್ಕೆ ಕೋಟ್ಯಂತರ ರೂಪಾಯಿ ವಹಿವಾಟು ನಡೆಸಿದರೂ ಅಥಣಿಯಲ್ಲಿ ಒಣದ್ರಾಕ್ಷಿ ಮಾರಾಟಕ್ಕೆ ವ್ಯವಸ್ಥೆ ಇಲ್ಲ. ಸರ್ಕಾರ ಸ್ಥಳೀಯವಾಗಿ ಮಾರುಕಟ್ಟೆ ಸೌಲಭ್ಯ ಕಲ್ಪಿಸಬೇಕು

ಎಂ.ಜಿ. ಪಾಟೀಲ, ರೈತ

ಅಥಣಿ ತಾಲ್ಲೂಕಿನ ಸಂಸ್ಕರಣಾ ಘಟಕದಲ್ಲಿರುವ ಒಣದ್ರಾಕ್ಷಿ



ಶೈತ್ಯಾಗಾರ ಕೊರತೆ ರೈತರ ಪಡಿಪಾಟಲು

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಜಿಲ್ಲೆಯಲ್ಲಿ ನೀರಿನ ಅಭಾವ, ಹವಾಮಾನದ ಏರುಪೇರಿನಿಂದ ದ್ರಾಕ್ಷಿ ಇಳುವರಿಯಲ್ಲಿ ಕುಸಿತವಾಗಿದೆ. ಇದರ ಪರಿಣಾಮ ಒಣದ್ರಾಕ್ಷಿಗೆ ದಾಖಲೆ ಬೆಲೆ ದೊರೆಯುತ್ತಿದೆ. ಆದರೆ, ರೈತರ ಬಳಿ ಒಣದ್ರಾಕ್ಷಿಯಿಲ್ಲ.

ಜಿಲ್ಲೆಯ 3,809 ಹೆಕ್ಟೇರ್ ಪ್ರದೇಶದಲ್ಲಿ ದ್ರಾಕ್ಷಿ ಬೆಳೆಯಲಾಗುತ್ತದೆ. ಅದರಲ್ಲಿ ಶೇ 80ರಷ್ಟು ಒಣದ್ರಾಕ್ಷಿ ಮಾಡಲಾಗುತ್ತದೆ. ಶೇ 70ರಷ್ಟು ರೈತರ ಬೆಳೆ ಹಾಳಾಗಿದೆ. ಉಳಿದ ರೈತರ ಬೆಳೆಗಳಲ್ಲೂ ಶೇ 50ರಷ್ಟು ಮಾತ್ರ ಫಸಲು ಬಂದಿದೆ. ಮಾರುಕಟ್ಟೆಯಲ್ಲಿ ದ್ರಾಕ್ಷಿಗೆ ಸರಾಸರಿ (ಮೂರು ಗ್ರೇಡ್ ಮಾಡಲಾಗುತ್ತದೆ) ₹180 ರಿಂದ ₹300ರ ವರೆಗೆ ಬೆಲೆ ದೊರೆಯುತ್ತಿದೆ. ಗ್ರೇಡ್ ಒನ್ ಪ್ರತಿ ಕೆ.ಜಿ ದ್ರಾಕ್ಷಿಗೆ ಈ ಬಾರಿ ₹500ರ ವರೆಗೂ ಬೆಲೆ ದೊರೆತಿದೆ.

ಕೋವಿಡ್‌ಗಿಂತ ಮುಂಚೆ ರೈತರಿಗೆ ಪ್ರತಿ ಕೆ.ಜಿಗೆ ₹150ರಿಂದ ₹190ರ ವರೆಗೆ ಬೆಲೆ ದೊರೆಯುತ್ತಿತ್ತು. ಕೋವಿಡ್ ನಂತರದಲ್ಲಿ ಮಾರುಕಟ್ಟೆಯಲ್ಲಿ ದೊಡ್ಡ ಪ್ರಮಾಣದ ಏರುಪೇರಾಯಿತು. ಕೆ.ಜಿ ದ್ರಾಕ್ಷಿ ಬೆಲೆ ₹100 ರಿಂದ ₹120ಕ್ಕೆ ಕುಸಿಯಿತು.

ಸತತ ಬೆಲೆ ಇಳಿಕೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದರು. ಶೇ 10ರಷ್ಟು ರೈತರು ದ್ರಾಕ್ಷಿ ಬೆಳೆಯುವುದರಿಂದ ದೂರ ಸರಿದಿದ್ದಾರೆ.

ಸೌಲಭ್ಯದ ಕೊರತೆ: ರೈತರು ಆರ್ಥಿಕವಾಗಿ ಸಬಲರಲ್ಲದ ಕಾರಣ ಬೆಲೆ ಕುಸಿತವಾಗಿದ್ದರೂ ಮಾರುತ್ತಾರೆ. ಅನುಕೂಲವಿದ್ದರೂ ಸಂರಕ್ಷಿಸಿಡಬೇಕು ಎಂದರೆ ಶೈತ್ಯಾಗಾರಗಳಿಲ್ಲ. ಶೈತ್ಯಾಗಾರದಲ್ಲಿ ಇಡಲು ಮಹಾರಾಷ್ಟ್ರದ ಪಂಢರಪುರ, ತಾಸಗಾಂವ್‌ಗೆ ಒಯ್ಯಬೇಕು.

'ಒಂದು ಟನ್ ದ್ರಾಕ್ಷಿಗೆ ₹600 ಕೊಡಬೇಕು. ಸಾಗಣೆ ವೆಚ್ಚ, ಲೋಡಿಂಗ್ ಮತ್ತು ಅನ್‌ಲೋಡಿಂಗ್ ಖರ್ಚು ಸೇರಿ ಉತ್ಪಾದನೆ ವೆಚ್ಚ ಹೆಚ್ಚಾಗುತ್ತದೆ. ಇಲ್ಲಿಯೇ ಶೈತ್ಯಾಗಾರ ಸ್ಥಾಪಿಸಲು ಸರ್ಕಾರ ಮುಂದಾಗಬೇಕು' ಎಂದು ಕಾಜಿಬೀಳಗಿಯ ರೈತ ಚನ್ನಪ್ಪ ಚನ್ನವೀರ ಒತ್ತಾಯಿಸಿದರು.

'ಜಿಲ್ಲೆಯಲ್ಲಿ ಮಾರುಕಟ್ಟೆ ವ್ಯವಸ್ಥೆ ಕೂಡ ಇಲ್ಲ. ಮಹಾರಾಷ್ಟ್ರದ ತಾಸಗಾಂವ್‌ಗೆ ಒಯ್ದು ಮಾರಬೇಕು. ಇಲ್ಲಿಯೇ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಬೇಕಿದೆ' ಎಂಬುದು ಅವರ ಆಗ್ರಹ.



ದ್ರಾಕ್ಷಿ ಕೃಷಿಯಿಂದ ರೈತರು ವಿಮುಖ

• ಬಸವರಾಜ್ ಸಂಪಳ್ಳಿ

ವಿಜಯಪುರ: ಜಿಲ್ಲೆಯಲ್ಲಿ ಈ ವರ್ಷ 1.84 ಲಕ್ಷ ಟನ್ ಒಣದ್ರಾಕ್ಷಿ ಉತ್ಪಾದನೆಯಾಗಿದೆ.

'ಈ ವರ್ಷ ಇಳುವರಿ ಕಡಿಮೆ ಇರುವ ಕಾರಣಕ್ಕೆ ಮಾರುಕಟ್ಟೆಯಲ್ಲಿ ಉತ್ತಮ ದರ ಸಿಕ್ಕಿದೆ. ಒಣದ್ರಾಕ್ಷಿಯನ್ನು ಕೆ.ಜಿಗೆ ₹180ರಿಂದ ₹300ರ ವರೆಗೆ ರೈತರು ಮಾರಾಟ ಮಾಡಿದ್ದಾರೆ' ಎಂದು ಜಿಲ್ಲಾ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ರಾಹುಲ್ ಭಾವಿದೊಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

'ಉಕ್ರೇನ್-ರಷ್ಯಾ, ಇಸ್ರೇಲ್-ಪ್ಯಾಲೆಸ್ಟೀನ್ ಯುದ್ಧ, ಶ್ರೀಲಂಕಾ ಮತ್ತಿತರ ದೇಶಗಳಲ್ಲಿ ತಲೆದೋರಿದ ಆರ್ಥಿಕ ಸಂಕಷ್ಟದಿಂದಾಗಿ ಕಳೆದ ವರ್ಷ ಜಾಗತಿಕ ಮಟ್ಟದಲ್ಲಿ ಒಣದ್ರಾಕ್ಷಿಗೆ ದರ ಕುಸಿದಿತ್ತು' ಎಂದರು.

'ಕಳೆದ ಒಂದು ದಶಕದಿಂದ ಈಚೆಗೆ ದ್ರಾಕ್ಷಿಗೆ ಉತ್ತಮ ದರ ಸಿಗದ ಕಾರಣ ಶೇ 20ರಷ್ಟು ರೈತರು ದ್ರಾಕ್ಷಿ ಗಿಡಗಳನ್ನು ತೆರವುಗೊಳಿಸಿದ್ದಾರೆ. 2023-24ನೇ ಸಾಲಿನಲ್ಲಿ ತೀವ್ರ ಪ್ರಮಾಣದ ಬರದಿಂದಾಗಿ ನೀರಿಲ್ಲದೇ ದ್ರಾಕ್ಷಿ ಗಿಡಗಳು ಬಾಡಿವೆ. ಒಣದ್ರಾಕ್ಷಿ ಉತ್ಪಾದನೆ ಕಡಿಮೆ ಆದ ಕಾರಣ ಮಾರುಕಟ್ಟೆಯಲ್ಲಿ ಈ ವರ್ಷ ಗರಿಷ್ಠ ದರ ಸಿಕ್ಕಿದೆ' ಎಂದು ವಿಜಯಪುರ ಜಿಲ್ಲಾ ದ್ರಾಕ್ಷಿ ಬೆಳೆಗಾರರ ಸಂಘದ ಅಧ್ಯಕ್ಷ ಡಾ.ಕೆ.ಎಚ್. ಮುಂಬಾರೆಡ್ಡಿ ತಿಳಿಸಿದರು.



ಎಸ್‌ಬಿಐ ನಿವ್ವಳ ಲಾಭ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು (ಎಸ್‌ಬಿಐ) 2024-25ನೇ ಮಾರ್ಚ್ ತ್ರೈಮಾಸಿಕದಲ್ಲಿ ₹18,643 ಕೋಟಿ ನಿವ್ವಳ ಲಾಭ ಗಳಿಸಿದೆ.

2023-24ನೇ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹20,698 ಕೋಟಿ ಲಾಭ ಗಳಿಸಿತ್ತು. ಈ ಲಾಭದ ಪ್ರಮಾಣಕ್ಕೆ ಹೋಲಿಸಿದರೆ ಶೇ 10ರಷ್ಟು ಕಡಿಮೆಯಾಗಿದೆ.

ಈ ಮಾರ್ಚ್ ತ್ರೈಮಾಸಿಕದಲ್ಲಿ ₹1.43 ಲಕ್ಷ ಕೋಟಿ ವರಮಾನಗಳಿಸಲಾಗಿದೆ. ಬಡ್ಡಿ ವರಮಾನ ₹1.19 ಲಕ್ಷ ಕೋಟಿ ಆಗಿದೆ ಎಂದು ಬ್ಯಾಂಕ್, ಶನಿವಾರ ಷೇರುಪೇಟೆಗೆ ಮಾಹಿತಿ ನೀಡಿದೆ.

ಬ್ಯಾಂಕ್‌ನ ಸಾಲ ವಸೂಲಾತಿ ಪ್ರಮಾಣದಲ್ಲಿ ಸಾಕಷ್ಟು ಸುಧಾರಣೆ ಆಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 2.24ರಿಂದ ಶೇ 1.82ಕ್ಕೆ ತಗ್ಗಿದೆ. ನಿವ್ವಳ ಎನ್‌ಪಿಎ ಶೇ 0.57ರಿಂದ ಶೇ 0.47ಕ್ಕೆ ಇಳಿಕೆಯಾಗಿದೆ.

2024-25ನೇ ಪೂರ್ಣ ಆರ್ಥಿಕ ವರ್ಷದಲ್ಲಿ ಬ್ಯಾಂಕ್ ₹70,901 ಕೋಟಿ ನಿವ್ವಳ ಲಾಭ ಗಳಿಸಿದೆ. 2023-24ರಲ್ಲಿ ₹61,077 ಕೋಟಿ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಶೇ 16ರಷ್ಟು ಏರಿಕೆಯಾಗಿದೆ.

ಪ್ರಧಾನಿ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪ

'ರಾಜಧರ್ಮ ಪಾಲಿಸದ ಮೋದಿ'



ಮಲ್ಲಿಕಾರ್ಜುನ ಖರ್ಗೆ



ನರೇಂದ್ರ ಮೋದಿ

ನವದೆಹಲಿ (ಪಿಟಿಐ): ಕಳೆದ ಎರಡು ವರ್ಷಗಳಿಂದ ಒಮ್ಮೆಯೂ ಮಣಿಪುರಕ್ಕೆ ಭೇಟಿ ನೀಡದ ಪ್ರಧಾನಿ ನರೇಂದ್ರ ಮೋದಿ ಅವರು 'ರಾಜಧರ್ಮ'ವನ್ನು ಎತ್ತಿ ಹಿಡಿಯುವಲ್ಲಿ ವಿಫಲರಾಗಿದ್ದಾರೆ ಎಂದು ಕಾಂಗ್ರೆಸ್ ಶನಿವಾರ ಟೀಕಿಸಿದೆ.

'ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತದಿಂದ ಯಾವುದೇ ಪರಿಹಾರ ಸಿಗಲಿಲ್ಲ. ರಾಜ್ಯದಲ್ಲಿ ಹೊಸದಾಗಿ ಚುನಾವಣೆ ನಡೆಸಬೇಕು' ಎಂದು ಒತ್ತಾಯಿಸಿದೆ.

ಸಾಮಾಜಿಕ ಜಾಲತಾಣ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು '2023ರ ಮೇ 3ರಂದು ಮಣಿಪುರದಲ್ಲಿ ಹಿಂಸಾಚಾರ ಪ್ರಾರಂಭವಾಯಿತು. ಒಟ್ಟು 260 ಜನ ಮೃತಪಟ್ಟರು ಹಾಗೂ ಸುಮಾರು 68 ಸಾವಿರ ಜನರನ್ನು ಸ್ಥಳಾಂತರಿಸಲಾಯಿತು. ಸಾವಿರಾರು ಜನ ಇನ್ನೂ ಪರಿಹಾರ ಕೇಂದ್ರಗಳಲ್ಲಿ ವಾಸಿಸುತ್ತಿದ್ದಾರೆ. ಎರಡು ದಿನಗಳ ಹಿಂದಷ್ಟೇ ತಮೆಂಗ್ಲಾಂಗ್ ಜಿಲ್ಲೆಯಲ್ಲಿ ನಡೆದ ಸಂಘರ್ಷದಲ್ಲಿ 25 ಜನರು ಗಾಯಗೊಂಡರು' ಎಂದು ಬರೆದುಕೊಂಡಿದ್ದಾರೆ.

ನರೇಂದ್ರ ಮೋದಿಯವರೇ, ಮಣಿಪುರವು ನಿಮ್ಮ ಬರುವಿಕೆಗಾಗಿ ಹಾಗೂ ರಾಜ್ಯದಲ್ಲಿ ಮತ್ತೆ ಶಾಂತಿ ಮತ್ತು ಸಹಜ ಸ್ಥಿತಿ ನೆಲೆಸಲು ಕಾಯುತ್ತಿದೆ. ಈ ವೇಳೆ ನಾವು ನಿಮಗೆ ಮೂರು ಪ್ರಶ್ನೆಗಳನ್ನು ಕೇಳುತ್ತೇವೆ:

2022ರ ಜನವರಿಯಲ್ಲಿ ಮಣಿಪುರದಲ್ಲಿ ನಿಮ್ಮ ಕೊನೆಯ ಚುನಾವಣಾ ರ್‍ಯಾಲಿಯನ್ನು ನಡೆಸಿದ ಬಳಿಕ 44 ಬಾರಿ ವಿದೇಶಗಳಿಗೆ ಹಾಗೂ ದೇಶದ 250 ಕಡೆ ಭೇಟಿ ನೀಡಿದ್ದೀರಿ. ಆದರೆ ಮಣಿಪುರದಲ್ಲಿ ಮಾತ್ರ ಒಂದೂ ಕ್ಷಣವನ್ನೂ ನೀವು ಕಳೆದಿಲ್ಲ. ಆ ರಾಜ್ಯದ ಜನರ ಮೇಲೆ ಏಕಿಷ್ಟು ತಾತ್ಸಾರ ಮತ್ತು ನಿರಾಸಕ್ತಿ? ರಾಜಕೀಯ ಹೊಣೆಗಾರಿಕೆ ಎಲ್ಲಿದೆ?

ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರುವಂತೆ ಅಲ್ಲಿನ ಜನರು ಒತ್ತಾಯಿಸುತ್ತಿದ್ದರೂ ಕ್ರಮ ಕೈಗೊಂಡಿರಲಿಲ್ಲ. ಸುಮಾರು 20 ತಿಂಗಳ ಮನವಿಯ ಬಳಿಕ, ಬಿಜೆಪಿ ವಿರುದ್ಧ ಕಾಂಗ್ರೆಸ್ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ ಬಳಿಕ ರಾಷ್ಟ್ರಪತಿ ಆಳ್ವಿಕೆ ಹೇರಲಾಯಿತು.

ನಾಗರಿಕರಿಗೆ ಭದ್ರತೆ ಒದಗಿಸಬೇಕಾದ ಸಾಂವಿಧಾನಿಕ ಕರ್ತವ್ಯದಲ್ಲಿ ಡಬಲ್ ಎಂಜಿನ್ ಸರ್ಕಾರ ಏಕೆ ವಿಫಲವಾಯಿತು? ಮೊದಲೇ ಏಕೆ ಮುಖ್ಯಮಂತ್ರಿಯನ್ನು ಕೆಳಗಿಳಿಸಲಿಲ್ಲ?

ಗೃಹ ಸಚಿವರು ಘೋಷಿಸಿದ ಶಾಂತಿ ಸಮಿತಿ ಏನಾಯಿತು? ದೆಹಲಿಯಲ್ಲಾದರೂ ಏಕೆ ಮಣಿಪುರ ಸಂತ್ರಸ್ತರನ್ನು ಭೇಟಿಯಾಗಲಿಲ್ಲ ಹಾಗೂ ರಾಜ್ಯಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಿಲ್ಲ? ಮೋದಿಯವರೇ 'ರಾಜಧರ್ಮ'ವನ್ನು ಎತ್ತಿ ಹಿಡಿಯುವಲ್ಲಿ ನೀವು ವಿಫಲರಾಗಿದ್ದೀರಿ -ಎಂದು ಖರ್ಗೆ ಟೀಕಿಸಿದ್ದಾರೆ.

'ಮಣಿಪುರದಲ್ಲಿ ಚುನಾವಣೆ ನಡೆಸಿ'

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಣಿಪುರ ಕಾಂಗ್ರೆಸ್ ಘಟಕದ ಉಸ್ತುವಾರಿ, ಹಿರಿಯ ಸಂಸದ ಸಪ್ತಗಿರಿ ಉಲಾಕ, ಗಂಭೀರವಾದ ಬಿಕ್ಕಟ್ಟಿಗೆ ಮಣಿಪುರ ಸಾಕ್ಷಿಯಾಗಿದೆ. ರಾಷ್ಟ್ರಪತಿ ಆಳ್ವಿಕೆ ಹೇರಿದ್ದರೂ ಪರಿಸ್ಥಿತಿಯು ಸಹಜ ಸ್ಥಿತಿಗೆ ಮರಳಿಲ್ಲ. ಕೂಡಲೇ ಚುನಾವಣೆ ನಡೆಸಿ ಎಂದು ಆಗ್ರಹಿಸಿದರು.

ಫೆ.13ರಂದು ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲಾಯಿತು. ಎನ್. ಬಿರೇನ್ ಸಿಂಗ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಉತ್ತರಾಧಿಕಾರಿಯನ್ನು ಹುಡುಕುವಲ್ಲಿ ಬಿಜೆಪಿ ವಿಫಲವಾಗಿದೆ ಎಂದು ಟೀಕಿಸಿದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹505
12 ಕ್ಕೆ	₹66
ಮೈಸೂರು	
100ಕ್ಕೆ	₹525

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹259-642
ದ್ವಿತಳಿ (ಬಿ.ವಿ)	₹388-685

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹194
ಆರ್‌ಎಸ್‌ಎಸ್-5	₹189
ಗುಡ್ ಲಾಟ್	₹179

(ಪ್ರತಿ ಕೆ.ಜಿಗೆ)

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ	
ಅಪಿ	54619-55069
ಬೆಟ್ಟೆ	29400-29700
ಕೆಂಪುಗೋಟು	20700-21069
ರಾಶಿ	54200-54600

ಉಕ್ರೇನ್‌ನ 170 ಡ್ರೋನ್ ನಾಶ

ಮಾಸ್ಕೊ (ಪಿಟಿಐ): ಗಡಿ ಭಾಗದ ಕ್ರಿಮಿಯಾ ಹಾಗೂ ಇತರೆ ವಲಯವನ್ನು ಗುರಿಯಾಗಿಸಿ ಉಕ್ರೇನ್ ಪ್ರಯೋಗಿಸಿದ್ದ 170 ಡ್ರೋನ್ ಹಾಗೂ 10 ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ ಎಂದು ರಷ್ಯಾದ ಸೇನೆ ಶನಿವಾರ ಹೇಳಿದೆ.

ಗಡಿಗೆ ಹೊಂದಿಕೊಂಡಿರುವ ಕ್ರಿಮಿಯಾ ವಲಯದಲ್ಲಿ 96, ರಸ್‌ನೊಡಾರ್ ವ್ಯಾಪ್ತಿಯಲ್ಲಿ 47, ರೊಸ್ತೊವ್ ವ್ಯಾಪ್ತಿಯಲ್ಲಿ 9, ಬಯಾಂಸ್ಕ್, ಕುರ್ಸ್ಕ್ ವಲಯದಲ್ಲಿ 8 ಡ್ರೋನ್‌ಗಳನ್ನು ನಾಶಪಡಿಸಲಾಗಿದೆ ಎಂದು ತಿಳಿಸಿದೆ.

ಪಾಕ್‌ನ ಸರಕುಗಳ ಆಮದಿಗೆ ನಿರ್ಬಂಧ

ಒಂದನೇ ಪುಟದಿಂದ...

2019ರಲ್ಲಿ ಪುಲ್ವಾಮಾದಲ್ಲಿ ನಡೆದ ಉಗ್ರರ ದಾಳಿಯ ಬಳಿಕ ಪಾಕಿಸ್ತಾನದಿಂದ ಆಮದಾಗುವ ಸರಕುಗಳ ಮೇಲೆ ಶೇ 200ರಷ್ಟು ಸುಂಕ ಹೇರಲಾಗಿತ್ತು. ಹೊಸ ಆದೇಶದ ಅನ್ವಯ ಇತರೆ ದೇಶಗಳಿಂದ ಭಾರತಕ್ಕೆ ಪೂರೈಕೆಯಾಗುವ ಪಾಕಿಸ್ತಾನದ ಸರಕುಗಳಿಗೂ ನಿರ್ಬಂಧ ವಿಧಿಸಲಾಗಿದೆ.

2024-25ನೇ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಜನವರಿವರೆಗೆ ಭಾರತವು ಪಾಕಿಸ್ತಾನಕ್ಕೆ ₹3,786 ಕೋಟಿ ಮೌಲ್ಯದ ಸರಕುಗಳನ್ನು ರಫ್ತು ಮಾಡಿದೆ. ಇದೇ ಅವಧಿಯಲ್ಲಿ ಅಲ್ಲಿಂದ ₹3.55 ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಈ ಪೈಕಿ ಅಂಜೂರದ ಹಣ್ಣು, ತುಳಸಿ ಮತ್ತು ರೋಸ್‌ಮೆರಿ ಗಿಡಮೂಲಿಕೆಗಳು, ರಾಸಾಯನಿಕಗಳು, ಹಿಮಾಲಯನ್ ಪಿಂಕ್ ಸಾಲ್ಟ್ ಸೇರಿದೆ.

ವಿದೇಶಿ ವ್ಯಾಪಾರ ನೀತಿ 2023ರ ಅನ್ವಯ ಪಾಕಿಸ್ತಾನದಿಂದ ನೇರವಾಗಿ ಮತ್ತು ಪರೋಕ್ಷವಾಗಿ ಪೂರೈಕೆಯಾಗುವ ಎಲ್ಲಾ ಸರಕುಗಳಿಗೆ ಈ ಆದೇಶ ಅನ್ವಯಿಸಲಿದೆ ಎಂದು ಡಿಜಿಎಫ್‌ಟಿ ತಿಳಿಸಿದೆ.

ಪಹಲ್ಗಾಮ್ ಘಟನೆ ಬಳಿಕ ಕೇಂದ್ರ ಸರ್ಕಾರವು ಅಟ್ಟಾರಿ ಗಡಿ ಬಂದ್ ಸೇರಿ ಪಾಕಿಸ್ತಾನದ ಜೊತೆಗಿನ ಸಂಬಂಧವನ್ನು ಕಡಿತಗೊಳಿಸಿದೆ. ಇದಕ್ಕೆ ಪ್ರತಿಯಾಗಿ ಆ ದೇಶವೂ ಭಾರತದ ಜತೆಗಿನ ವ್ಯಾಪಾರ ಒಪ್ಪಂದಗಳನ್ನು ರದ್ದುಪಡಿಸಿದೆ.

ಪತ್ರ ವ್ಯವಹಾರ ಅಮಾನತು

ಒಂದನೇ ಪುಟದಿಂದ...

ಸಂವಹನ ಸಚಿವಾಲಯದ ಅಧೀನದಲ್ಲಿ ಕಾರ್ಯಾಚರಣೆ ನಡೆಸುವ ಅಂಚೆ ಇಲಾಖೆಯು, ಪತ್ರ ಮತ್ತು ಪಾರ್ಸೆಲ್ ವ್ಯವಹಾರಗಳ ಅಮಾನತು ಆದೇಶ ಹೊರಡಿಸಿದೆ.

ಪಾಕಿಸ್ತಾನದ ಹಡಗುಗಳು ಭಾರತದ ಬಂದರು ಪ್ರವೇಶಿಸುವಂತಿಲ್ಲ ಎಂಬ ಆದೇಶ ಹೊರಡಿಸಿರುವುದಷ್ಟೇ ಅಲ್ಲದೆ, ಭಾರತದ ಹಡಗುಗಳು ಕೂಡ ಪಾಕಿಸ್ತಾನದ ಬಂದರಿಗೆ ತೆರಳುವಂತಿಲ್ಲ ಎಂದು ಆದೇಶಿಸಲಾಗಿದೆ. ಈ ಆದೇಶವು ತಕ್ಷಣದಿಂದಲೇ ಜಾರಿಗೆ ಬಂದಿದೆ. 'ಭಾರತದ ಆಸ್ತಿಗಳು, ಸರಕುಗಳು ಮತ್ತು ಸಂಬಂಧಪಟ್ಟ ಮೂಲಸೌಕರ್ಯವನ್ನು ರಕ್ಷಿಸುವ ಉದ್ದೇಶದಿಂದ ಈ ತೀರ್ಮಾನ ಕೈಗೊಳ್ಳಲಾಗಿದೆ' ಎಂದು ಕೇಂದ್ರ ಹೇಳಿದೆ.

₹4,228 ಕೋಟಿ ಮೌಲ್ಯದ ಸರಕು ರವಾನೆ

ನವದೆಹಲಿ (ಪಿಟಿಐ): ಪಾಕಿಸ್ತಾನದಿಂದ ₹4,228 ಕೋಟಿ ಮೌಲ್ಯದ ಸರಕುಗಳು ಯುಎಇ, ಸಿಂಗಪುರ, ಇಂಡೊನೇಷ್ಯಾ ಮತ್ತು ಶ್ರೀಲಂಕಾದ ಬಂದರಿನ ಮೂಲಕ ಭಾರತಕ್ಕೆ ಪೂರೈಕೆಯಾಗುತ್ತವೆ ಎಂದು ಮೂಲಗಳು ತಿಳಿಸಿವೆ.

ಪಾಕಿಸ್ತಾನವು ಇಷ್ಟು ಮೌಲ್ಯದ ಸರಕುಗಳನ್ನು ನೇರವಾಗಿ ಭಾರತಕ್ಕೆ ರಫ್ತು ಮಾಡುವುದಿಲ್ಲ. ಆದರೆ, ಅಲ್ಲಿ ಉತ್ಪಾದಿಸುವ ಉತ್ಪನ್ನಗಳು ಈ ರಾಷ್ಟ್ರಗಳ ಮೂಲಕ ಪೂರೈಕೆಯಾಗುತ್ತವೆ ಎಂದು ಹೇಳಿವೆ.

ಯುಎಇ ಮೂಲಕ ಹಣ್ಣುಗಳು, ಖರ್ಜೂರ, ಚರ್ಮ, ಜವಳಿ ಉತ್ಪನ್ನ ರವಾನೆಯಾದರೆ, ಸಿಂಗಪುರ ಮಾರ್ಗವಾಗಿ ರಾಸಾಯನಿಕಗಳು ಪೂರೈಕೆಯಾಗುತ್ತವೆ. ಇಂಡೊನೇಷ್ಯಾ ಮಾರ್ಗವಾಗಿ ಸಿಮೆಂಟ್, ಜವಳಿ ಕಚ್ಚಾ ವಸ್ತುಗಳು ರವಾನೆಯಾಗುತ್ತವೆ. ಶ್ರೀಲಂಕಾ ಮಾರ್ಗವಾಗಿ ಒಣ ಹಣ್ಣುಗಳು, ಉಪ್ಪು, ಚರ್ಮದ ಉತ್ಪನ್ನಗಳು ಪೂರೈಕೆಯಾಗುತ್ತವೆ ಎಂದು ತಿಳಿಸಿವೆ.

ಅಂಗೋಲಾ ರಕ್ಷಣಾ ಪಡೆಗಳ ಆಧುನೀಕರಣಕ್ಕೆ ನೆರವು

ಭಾರತದಿಂದ ₹1,690 ಕೋಟಿ ಸಾಲ

ನವದೆಹಲಿ (ಪಿಟಿಐ): ಆಫ್ರಿಕಾ ಖಂಡದ ಅಂಗೋಲಾ ದೇಶದ ಸೇನೆಯ ಆಧುನೀಕರಣಕ್ಕೆ ಭಾರತವು 20 ಕೋಟಿ ಡಾಲರ್ (ಸುಮಾರು ₹1,690 ಕೋಟಿ) ಸಾಲ ನೀಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಪ್ರಕಟಿಸಿದ್ದಾರೆ.

ಅಂಗೋಲಾ ಅಧ್ಯಕ್ಷ ಜಾವೊ ಮ್ಯಾನುಯೆಲ್ ಗೊನ್ಸಾಲ್ವೆಸ್ ಲಾರೆನ್ಸೊ ಜತೆಗೆ ಇಲ್ಲಿ ನಡೆದ ಮಾತುಕತೆ ಬಳಿಕ ಅವರು ಈ ಘೋಷಣೆ ಮಾಡಿದ್ದಾರೆ. ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಕ್ಷೇತ್ರವೂ ಸೇರಿದಂತೆ ಒಟ್ಟಾರೆ ದ್ವಿಪಕ್ಷೀಯ ಸಂಬಂಧ ಬಲಪಡಿಸುವುದರ ಬಗ್ಗೆ ಉಭಯ ದೇಶಗಳ ನಾಯಕರು ಚರ್ಚಿಸಿದರು.

ಲಾರೆನ್ಸೊ ಅವರ ಭಾರತ ಭೇಟಿಯು ದ್ವಿಪಕ್ಷೀಯ ಸಂಬಂಧಗಳಿಗೆ ಹೊಸ ದಿಕ್ಕನ್ನು ನೀಡುವುದಲ್ಲದೆ ಭಾರತ-ಆಫ್ರಿಕಾ ಪಾಲುದಾರಿಕೆಯನ್ನು ಬಲಪಡಿಸಲಿದೆ ಎಂದು ಪ್ರಧಾನಿ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಅಂಗೋಲಾದ ರಕ್ಷಣಾ ಪಡೆಗಳ ಆಧುನೀಕರಣವನ್ನು ಬೆಂಬಲಿಸಲು 20 ಕೋಟಿ ಡಾಲರ್ ರಕ್ಷಣಾ ಸಾಲವನ್ನು ಘೋಷಿಸಲು ನನಗೆ ಸಂತಸವಾಗಿದೆ' ಎಂದು ಹೇಳಿದರು.

ರಕ್ಷಣಾ ಪರಿಕರಗಳ ದುರಸ್ತಿ, ಕೂಲಂಕಷ ಪರೀಕ್ಷೆ ಮತ್ತು ಪೂರೈಕೆ ಸಾಧ್ಯತೆಯ ಬಗ್ಗೆಯೂ ಚರ್ಚೆ ನಡೆದಿದೆ ಎಂದು ಪ್ರಧಾನಿ ಮಾಹಿತಿ ನೀಡಿದರು.

'ಡಿಜಿಟಲ್ ಸಾರ್ವಜನಿಕ ಮೂಲ ಸೌಕರ್ಯ, ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಕೌಶಲಾಭಿವೃದ್ಧಿ ಕ್ಷೇತ್ರಗಳಲ್ಲಿ ಭಾರತವು ತನ್ನ ಸಾಮರ್ಥ್ಯವನ್ನು ಅಂಗೋಲಾದೊಂದಿಗೆ ಹಂಚಿಕೊಳ್ಳಲಿದೆ. ಆರೋಗ್ಯ ರಕ್ಷಣೆ, ವಜ್ರ ಸಂಸ್ಕರಣೆ, ರಸಗೊಬ್ಬರ ಮತ್ತು ಖನಿಜ ಕ್ಷೇತ್ರಗಳಲ್ಲಿ ನಮ್ಮ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ನಿರ್ಧರಿಸಿದ್ದೇವೆ' ಎಂದರು.

'ಭಯೋತ್ಪಾದಕರು ಮತ್ತು ಅವರನ್ನು ಬೆಂಬಲಿಸುವವರ ವಿರುದ್ಧ ಕಠಿಣ ಮತ್ತು ನಿರ್ಣಾಯಕ ಕ್ರಮ ಕೈಗೊಳ್ಳಲು ನಾವು ಬದ್ಧರಾಗಿದ್ದೇವೆ' ಎಂದು ಹೇಳಿದರು. ಭಾರತ ಮತ್ತು ಆಫ್ರಿಕನ್ ಒಕ್ಕೂಟದ ನಡುವಿನ ಸಂಬಂಧದ ಮಹತ್ವವನ್ನು ಒತ್ತಿ ಹೇಳಿದ ಪ್ರಧಾನಿ, 'ನಾವು ಪ್ರಗತಿಯಲ್ಲಿ ಪಾಲುದಾರರು' ಎಂದರು.



ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಅಂಗೋಲಾ ಅಧ್ಯಕ್ಷ ಗೊನ್ಸಾಲ್ವೆಸ್ ಲಾರೆನ್ಸೊ ಅವರನ್ನು ಬರಮಾಡಿಕೊಂಡರು ಎಎಫ್‌ಪಿ ಚಿತ್ರ

ಪಾಕ್ ಮಹಿಳೆ ಜತೆ ವಿವಾಹ: ಮಾಹಿತಿ ನೀಡದ್ದಕ್ಕೆ ಕ್ರಮ

ಸಿಆರ್‌ಪಿಎಫ್ ಯೋಧನ ವಜಾ

ನವದೆಹಲಿ (ಪಿಟಿಐ): ಪಾಕಿಸ್ತಾನ ಮಹಿಳೆಯರೊಂದಿಗೆ ವಿವಾಹವಾಗಿರುವ ಬಗ್ಗೆ ಮಾಹಿತಿ ನೀಡದ ಜವಾನ ಮುನೀರ್ ಅಹಮದ್ ಅವರನ್ನು ಕೇಂದ್ರ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಸೇವೆಯಿಂದ ವಜಾಗೊಳಿಸಿದೆ ಎಂದು ಅಧಿಕೃತ ಮೂಲಗಳು ಶನಿವಾರ ತಿಳಿಸಿವೆ.

ಮುನೀರ್ ಅವರು ಸಿಆರ್‌ಪಿಎಫ್ ಪ್ಯಾರಾಮಿಲಿಟರಿಯ 41ನೇ ಬಟಾಲಿಯನ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

'ತನ್ನ ಪತ್ನಿಯ ಬಗ್ಗೆ ಮಾಹಿತಿ ನೀಡದ ಮತ್ತು ಪತ್ನಿಯ ವೀಸಾ ಅವಧಿ ಮುಗಿದಿದ್ದರೂ ಆಶ್ರಯ ನೀಡಿರುವ ಕಾರಣಕ್ಕೆ ಮುನೀರ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಜಾಗೊಳಿಸಲಾಗಿದೆ. ಅವರ ನಡವಳಿಕೆಯು ಸೇವಾ ನಿಯಮಗಳ ಉಲ್ಲಂಘನೆ ಮತ್ತು ರಾಷ್ಟ್ರೀಯ ಭದ್ರತೆಗೆ ಅಪಾಯ ಒಡ್ಡುವುದರಿಂದ ಕ್ರಮ ಕೈಗೊಳ್ಳಲಾಗಿದೆ' ಎಂದು ಸಿಆರ್‌ಪಿಎಫ್ ವಕ್ತಾರರು ತಿಳಿಸಿದ್ದಾರೆ.

ಮುನೀರ್ ಮತ್ತು ಮೆನಲ್ ಖಾನ್ ಅವರು 2024 ಮೇ 24ರಂದು ವಿಡಿಯೊ ಕರೆ ಮೂಲಕ ವಿವಾಹವಾಗಿದ್ದರು. ಪಹಲ್ಗಾಮ್ ದಾಳಿಗೆ ಪ್ರತಿಯಾಗಿ ಭಾರತವು ಪಾಕ್ ಪ್ರಜೆಗಳು ದೇಶ ತೊರೆಯುವಂತೆ ಹೇಳಿದ ಬಳಿಕ ಮುನೀರ್ -ಮೆನಲ್ ವಿವಾಹವಾಗಿರುವ ವಿಚಾರ ಬಹಿರಂಗವಾಗಿದೆ.

ಯುದ್ಧನೌಕೆ ಮಾಹಿತಿ ಸಂಗ್ರಹಕ್ಕೆ ಯತ್ನ?

ಕಾರವಾರ: ಯುದ್ಧನೌಕೆಯ ಚಲನವಲನಗಳ ಕುರಿತು ಮಾಹಿತಿ ಸಂಗ್ರಹಿಸಲು ಅಪರಿಚಿತ ವ್ಯಕ್ತಿಗಳು ಇಲ್ಲಿನ ಕದಂಬ ನೌಕಾನೆಲೆಯ ಕೆಲ ಸಿಬ್ಬಂದಿಗೆ ಕರೆ ಮಾಡಿದ್ದರು ಎಂಬ ವದಂತಿ ಹರಡಿದೆ.

'ಐಎನ್‌ಎಸ್ ವಿಕ್ರಮಾದಿತ್ಯ ಮತ್ತು ಐಎನ್‌ಎಸ್ ವಿಕ್ರಾಂತ್ ಯುದ್ಧನೌಕೆಯ ಚಲನವಲನದ ಕುರಿತು ಮಾಹಿತಿ ಕೇಳಿ ಅಪರಿಚಿತ ವ್ಯಕ್ತಿಗಳು ಕರೆ ಮಾಡಿದ್ದರ ಕುರಿತು ಸಿಬ್ಬಂದಿ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ನೌಕಾದಳದ ಅಧಿಕಾರಿಗಳು ಎಲ್ಲ ಸಿಬ್ಬಂದಿಗೆ ಅಪರಿಚಿತ ಕರೆಗೆ ಸ್ಪಂದಿಸದಂತೆ ಸೂಚಿಸಿದ್ದಾರೆ' ಎಂದು ಮೂಲ ಉಲ್ಲೇಖಿಸಿ ಸುದ್ದಿಸಂಸ್ಥೆಯೊಂದು ವರದಿ ಮಾಡಿದೆ.

ಕದಂಬ ನೌಕಾನೆಲೆಯಲ್ಲಿ ಯುದ್ಧನೌಕೆಯ ಚಲನವಲನದ ಮಾಹಿತಿಯನ್ನು ಪಾಕಿಸ್ತಾನಿ ಮೂಲದ ಗುಪ್ತಚರರಿಗೆ ಸೋರಿಕೆ ಮಾಡಿದ್ದ ಆರೋಪದಡಿ ಈಚೆಗಷ್ಟೆ ರಾಷ್ಟ್ರೀಯ ತನಿಖಾ ದಳ ಇಬ್ಬರನ್ನು ಬಂಧಿಸಿತ್ತು.

ತುರ್ತು ಪಂಚಾಯಿತಿಗೆ ಬಿಕೆಯು ಕರೆ

ಮುಜಾಫ್ಫರ್‌ನಗರ (ಪಿಟಿಐ): ಪಹಲ್ಗಾಮ್ ಭಯೋತ್ಪಾದಕ ದಾಳಿ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಭಾರತೀಯ ಕಿಸಾನ್ ಒಕ್ಕೂಟದ (ಬಿಕೆಯು) ಮಾಜಿ ನಾಯಕ ರಾಕೇಶ್ ಟಿಕಾಯತ್ ಅವರು ಪಾಲ್ಗೊಂಡಿದ್ದಕ್ಕೆ ಕೆಲವರು ವಿರೋಧ ವ್ಯಕ್ತಪಡಿಸಿದ ಬೆನ್ನಲ್ಲೇ, ಶನಿವಾರ ನಗರದಲ್ಲಿ 'ತುರ್ತು ಕಿಸಾನ್ ಪಂಚಾಯತಿ'ಗೆ ಬಿಕೆಯು ಕರೆ ನೀಡಿದೆ.

ಈ ಬಗ್ಗೆ ಠಾಣೆಯಲ್ಲಿ ದೂರು ದಾಖಲಾದ ನಂತರ ಪೊಲೀಸರು ಒಬ್ಬ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದರು. ಘಟನೆ ಬಗ್ಗೆ ಕ್ರಮ ಕೈಗೊಳ್ಳುವಂತೆ ಆರ್‌ಎಲ್‌ಡಿ ಶಾಸಕ ರಾಜ್ಪಾಲ್ ಬಲಿಯಾನ್ ಅವರು ಆಗ್ರಹಿಸಿದ್ದಾರೆ.

'ಮುಜಾಫ್ಫರ್ ನಗರದ ಜಿಐಸಿ ಮೈದಾನದಲ್ಲಿ ಪಂಚಾಯಿತಿ ನಡೆಯಲಿದೆ. 'ಆಕ್ರೋಶ ರ್‍ಯಾಲಿ'ಯಲ್ಲಿ ನಡೆದ ಘಟನೆಯು ರೈತರ ಚಳವಳಿಯನ್ನು ದುರ್ಬಲಗೊಳಿಸುವ ಉದ್ದೇಶದ ರಾಜಕೀಯ ಪಕ್ಷವೊಂದರ ಪಿತೂರಿಯ ಭಾಗ' ಎಂದು ಬಿಕೆಯು ರಾಷ್ಟ್ರೀಯ ಅಧ್ಯಕ್ಷ ನರೇಶ್ ಟಿಕಾಯತ್ ಹೇಳಿದರು.

> **ರೈತರ ಧ್ವನಿಯನ್ನು ದಮನಗೊಳಿಸಲು ರಾಜಕೀಯ ಪಕ್ಷವೊಂದು ಮಾಡಿರುವ ಪಿತೂರಿ ಇದು. ರ್‍ಯಾಲಿಯನ್ನು ಹಾಳು ಮಾಡಲೆಂದೇ ಕೆಲವು ಯುವಕರನ್ನು ಕಳುಹಿಸಲಾಗಿತ್ತು**
> **ರಾಕೇಶ್ ಟಿಕಾಯತ್,** ರೈತ ನಾಯಕ

ಘಟನೆ ಏನು?: ಬಲಪಂಥೀಯ ಸಂಘಟನೆಗಳು ಪಹಲ್ಗಾಮ್ ದಾಳಿ ವಿರುದ್ಧ ಶುಕ್ರವಾರ ಪ್ರತಿಭಟನೆ ಹಮ್ಮಿಕೊಂಡಿದ್ದವು. ಈ ರ್‍ಯಾಲಿಯಲ್ಲಿ ಟಿಕಾಯತ್ ಅವರು ಭಾಗಿಯಾಗಿದ್ದಕ್ಕೆ ವಿರೋಧ ವ್ಯಕ್ತಪಡಿಸಲಾಯಿತು ಮತ್ತು ಹೊರಹೋಗುವಂತೆ ಹೇಳಲಾಯಿತು. ಈ ಸಂದರ್ಭದಲ್ಲಿ ಗದ್ದಲದ ವಾತಾವರಣ ನಿರ್ಮಾಣವಾಗಿ ಟಿಕಾಯತ್ ಅವರು ಧರಿಸಿದ್ದ ಟರ್ಬನ್ ನೆಲಕ್ಕೆ ಬಿತ್ತು. ಈ ವಿಡಿಯೊ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಸಿಡಬ್ಲ್ಯುಸಿ ಅಲ್ಲ, ಪಾಕ್ ಕಾರ್ಯಕಾರಿ ಸಮಿತಿ: ಕಾಂಗ್ರೆಸ್ ವಿರುದ್ಧ ಬಿಜೆಪಿ ಟೀಕೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷವು ಪಾಕಿಸ್ತಾನಕ್ಕೆ ನಿರಂತರವಾಗಿ 'ಆಮ್ಲಜನಕ' ಒದಗಿಸುತ್ತಿದೆ ಎಂದು ಬಿಜೆಪಿ ಶನಿವಾರ ಆರೋಪಿಸಿದೆ.



2019ರ ಪುಲ್ವಾಮಾ ದಾಳಿ ನಂತರ ಬಾಲಾಕೋಟ್ ಮೇಲೆ ನಡೆಸಿದ ವೈಮಾನಿಕ ದಾಳಿಯ ಸತ್ಯಾಸತ್ಯತೆಯನ್ನು ಕಾಂಗ್ರೆಸ್ ನಾಯಕ ಚರಣ್‌ಜಿತ್ ಸಿಂಗ್ ಚನ್ನಿ ಅವರು ಪ್ರಶ್ನಿಸಿದ್ದನ್ನು ಉಲ್ಲೇಖಿಸಿ ವಾಗ್ದಾಳಿ ನಡೆಸಿದೆ.

ಬಿಜೆಪಿಯ ರಾಷ್ಟ್ರೀಯ ವಕ್ತಾರ ಸಂಬಿತ್‌ಪಾತ್ರಾ ಅವರು, 'ಮೇಲ್ನೋಟಕ್ಕೆ ಅದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ), ಆದರೆ ಅಂತರ್ಯದಲ್ಲಿ 'ಪಾಕಿಸ್ತಾನ ಕಾರ್ಯಕಾರಿ ಸಮಿತಿ'ಯಂತೆ ವರ್ತಿಸುತ್ತಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

ಕಾಂಗ್ರೆಸ್ ಪಕ್ಷದ ತುಂಬೆಲ್ಲಾ ಪಾಕ್ ಬೆಂಬಲಿಗರು ತುಂಬಿದ್ದಾರೆ. ಅವರು ಭಾರತದ ಹಿತಾಸಕ್ತಿಗೆ ವಿರುದ್ಧವಾದ ಹೇಳಿಕೆ ನೀಡುತ್ತಾರೆ ಮತ್ತು ಪಹಲ್ಗಾಮ್ ದಾಳಿ ವಿಚಾರದಲ್ಲಿ ಗೆರೆ ದಾಟದಂತೆ ತಿಳಿಸಿದ ಪಕ್ಷವನ್ನೂ ಲೇವಡಿ ಮಾಡುತ್ತಾರೆ ಎಂದು ಹರಿಹಾಯ್ದರು.

ಪಾಕಿಸ್ತಾನಕ್ಕೆ ಪಾಠ ಕಲಿಸಲು ಕೇಂದ್ರ ಸರ್ಕಾರವು ದಿಟ್ಟತನದಿಂದ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಶುಕ್ರವಾರ ನಿರ್ಣಯ ಕೈಗೊಂಡಿದೆ. ಈ ಬೆನ್ನಲ್ಲೇ ಚೆನ್ನಿ ಅವರು ಪತ್ರಿಕಾಗೋಷ್ಠಿಯಲ್ಲಿ ಬಾಲಾಕೋಟ್ ಮೇಲಿನ ದಾಳಿಯ ಸತ್ಯಾಸತ್ಯತೆಯನ್ನು ಪ್ರಶ್ನಿಸಿದ್ದಾರೆ ಎಂದು ಪಾತ್ರಾ ಹೇಳಿದರು.

ಚೆನ್ನಿ ಅವರು ಪುಲ್ವಾಮಾ ದಾಳಿಯನ್ನು ಉಲ್ಲೇಖಿಸಿ, ಚುನಾವಣೆ ಸಮೀಪದಲ್ಲಿದ್ದಾಗ 40 ಭಾರತೀಯ ಸೈನಿಕರನ್ನು ಹತ್ಯೆಗೈಯಲಾಯಿತು. ಸರ್ಕಾರ ಇದನ್ನು ಚುನಾವಣೆಗೆ ಬಳಸಿಕೊಂಡಿತು. ಪಾಕಿಸ್ತಾನದ ಮೇಲೆ ಸರ್ಜಿಕಲ್ ಸ್ಟ್ರೈಕ್ ನಡೆಸಿದ್ದಾಗಿ ಸರ್ಕಾರ ಹೇಳಿಕೊಂಡಿತು. ಆದರೆ ವಾಯುದಾಳಿ ನಡೆಸಿದ ಕುರುಹುಗಳೇ ಇಲ್ಲ ಎಂದು ಹೇಳಿದ್ದರು.

ಪಾಕ್ ಹೊಗಳಲು ಯತ್ನ: ಅಖಿಲೇಶ್ ಯಾದವ್ ಅವರಂಥ ವಿರೋಧ ಪಕ್ಷಗಳ ನಾಯಕರು ಪಾಕಿಸ್ತಾನದ ಸೆನೆಟರ್‌ಗಳಂತೆ ಕೇಂದ್ರ ಸರ್ಕಾರದ ನಿಲುವನ್ನು ಪ್ರಶ್ನಿಸುತ್ತಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಈ ತಂಡವನ್ನು ಸೇರಿಕೊಂಡು ನೆರೆಯ ದೇಶವನ್ನು ಹೊಗಳಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

ರಾಣಾನ ಧ್ವನಿ ಮಾದರಿ ಸಂಗ್ರಹ

ನವದೆಹಲಿ (ಪಿಟಿಐ): 26/11 ಮುಂಬೈ ಮೇಲಿನ ಭಯೋತ್ಪಾದಕ ದಾಳಿಯ ಆರೋಪಿ ತಹವ್ವುರ್ ರಾಣಾನ ಕೈಬರಹ ಹಾಗೂ ಆತನ ಧ್ವನಿಯ ಮಾದರಿಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಶನಿವಾರ ಸಂಗ್ರಹಿಸಿದೆ.



ದೆಹಲಿಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ (ಪ್ರಥಮ ದರ್ಜೆ) ವೈಭವ್ ಕುಮಾರ್ ಅವರ ಎದುರು ರಾಣಾನನ್ನು ವಿಚಾರಣೆಗೆ ಹಾಜರುಪಡಿಸಲಾಗಿತ್ತು. ಇದೇ ವೇಳೆ ಆತನ ಕೈಬರಹ ಹಾಗೂ ಧ್ವನಿ ಮಾದರಿಯನ್ನು ಎನ್‌ಐಎ ಅಧಿಕಾರಿಗಳು ಪಡೆದುಕೊಂಡಿದ್ದಾರೆ. ಕೆಲವು ವರ್ಣಮಾಲೆ ಹಾಗೂ ಸಂಖ್ಯೆಗಳನ್ನು ರಾಣಾ ಬರೆದಿದ್ದಾನೆಂದು ಮೂಲಗಳು ತಿಳಿಸಿವೆ.

ಎನ್‌ಐಎ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಚಂದ್ರಜೀತ್ ಸಿಂಗ್ ಅವರು ಏಪ್ರಿಲ್ 30ರಂದು ರಾಣಾನ ಕೈಬರಹ ಹಾಗೂ ಧ್ವನಿ ಮಾದರಿಯನ್ನು ಸಂಗ್ರಹಿಸಲು ಎನ್‌ಐಎಗೆ ಅನುಮತಿ ನೀಡಿ ಆದೇಶ ಹೊರಡಿಸಿದ್ದರು. ಅದರಂತೆ ಎನ್‌ಐಎ ಮಾದರಿ ಸಂಗ್ರಹಿಸಿದೆ.

ಎನ್‌ಕೌಂಟರ್‌ನಲ್ಲಿ ನಕ್ಸಲ್ ಹತ್ಯೆ

ಗರಿಯಾಬಂದ್ (ಛತ್ತೀಸಗಢ) (ಪಿಟಿಐ): ಗಡಿ ಭದ್ರತಾ ಪಡೆಗಳೊಂದಿಗೆ ನಡೆದ ಎನ್‌ಕೌಂಟರ್ ನಲ್ಲಿ ನಕ್ಸಲರೊಬ್ಬರು ಹತರಾಗಿದ್ದಾರೆ.

ವಿಭಾಗೀಯ ಸಮಿತಿ ಸದಸ್ಯ ಯೋಗೇಶ್ ಮೃತ ನಕ್ಸಲ್. ಗುಂಡಿನ ಚಕಮಕಿ ನಡೆದ ಸ್ಥಳದಿಂದ ಈತನ ಮೃತದೇಹ, ರೈಫಲ್, ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈತನ ಸುಳಿವು ನೀಡಿದವರಿಗೆ ₹8 ಲಕ್ಷ ಬಹುಮಾನ ಘೋಷಿಸಲಾಗಿತ್ತು.ಜುಗಡ್ ಪೊಲೀಸ್ ಠಾಣೆ ವ್ಯಾಪ್ತಿಯ ಮೋತಿಪಾನಿ ಗ್ರಾಮದ ಸಮೀಪ ಇರುವ ಕಾಡಿನಲ್ಲಿ ಶುಕ್ರವಾರ ತಡರಾತ್ರಿ ಗುಂಡಿನ ಚಕಮಕಿ ನಡೆದಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

'ಮೀಸಲಾತಿ ನೀತಿ ಮರುಪರಿಶೀಲಿಸಿ'

ಪಟ್ನಾ (ಪಿಟಿಐ): ಮುಂಬರುವ ಜನಗಣತಿಯೊಂದಿಗೆ ಜಾತಿ ಗಣತಿಯನ್ನೂ ಮಾಡುವ ಪ್ರಕ್ರಿಯೆ ಪೂರ್ಣಗೊಂಡ ಬಳಿಕ 'ಸಾಮಾಜಿಕ ರಕ್ಷಣೆ ಮತ್ತು ಮೀಸಲಾತಿ ನೀತಿಗಳ ಸಮಗ್ರ ಪರಿಶೀಲನೆ' ನಡೆಸಬೇಕು ಎಂದು ಆಗ್ರಹಿಸಿ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಪ್ರಧಾನಿಗೆ ಪತ್ರ ಬರೆದಿದ್ದಾರೆ.



'ಜಾತಿಗಣತಿ ನಡೆಸುವುದು ಸಾಮಾಜಿಕ ನ್ಯಾಯ ಒದಗಿಸುವ ಮೊದಲ ಹೆಜ್ಜೆಯಾಗಿದೆ. ಜಾತಿಗಣತಿಯ ದತ್ತಾಂಶವು ಸಾಮಾಜಿಕ ರಕ್ಷಣೆ ಮತ್ತು ಮೀಸಲಾತಿ ನೀತಿಗಳ ಸಮಗ್ರ ಪರಿಶೀಲನೆಗೆ ಕಾರಣವಾಗಬೇಕು. ಮೀಸಲಾತಿ ಮೇಲಿನ ಮಿತಿಯನ್ನು ಕೂಡ ಮರುಪರಿಶೀಲಿಸಬೇಕಾಗುತ್ತದೆ' ಎಂದು ಬರೆದ ಪತ್ರವನ್ನು 'ಎಕ್ಸ್'ನಲ್ಲಿ ಶನಿವಾರ ಹಂಚಿಕೊಂಡಿದ್ದಾರೆ.



ಯಶ್, ಲುಂಗಿ ಬೌಲಿಂಗ್ • ಶೆಫರ್ಡ್ ಅಬ್ಬರ • ಆಯುಷ್– ಜಡೇಜ ಜೊತೆಯಾಟ, ಪ್ಲೇ ಆಫ್ ಸನಿಹ ಆರ್‌ಸಿಬಿ

ಬೆಂಗಳೂರು ಬಳಗಕ್ಕೆ ರೋಚಕ ಜಯ

• ಗಿರೀಶ ದೊಡ್ಡಮನಿ

ಬೆಂಗಳೂರು: ನಗರದಲ್ಲಿ ಶನಿವಾರ ಮಳೆ ಬರಲಿಲ್ಲ. ಆದರೆ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಅಭಿಮಾನಿಗಳು ಸಂಭ್ರಮದ ಹೊಳೆಯಲ್ಲಿ ಮುಳುಗೆದ್ದರು.

ಕೊನೆಯ ಎಸೆತದವರೆಗೂ ರೋಚಕ ರಸದೌತಣ ನೀಡಿದ ಐಪಿಎಲ್ ಪಂದ್ಯದಲ್ಲಿ ಆರ್‌ಸಿಬಿಯು 2 ರನ್‌ಗಳಿಂದ ಚೆನ್ನೈ ಸೂಪರ್ ಕಿಂಗ್ಸ್ ಎದುರು ಜಯಿಸಿತು. ಇದರೊಂದಿಗೆ ಪ್ಲೇ ಆಫ್ ಹೊಸ್ತಿಲಿಗೆ ಬಂದು ನಿಂತಿತು. ವೇಗದ ಬೌಲರ್‌ಗಳಾದ ಲುಂಗಿ ಗಿಡಿ ಮತ್ತು ಯಶ್ ದಯಾಳ್ ಅವರು ಕೊನೆಯ ಹಂತದ ಓವರ್‌ಗಳಲ್ಲಿ ತೋರಿದ ಚಾಣಾಕ್ಷತನ ಆರ್‌ಸಿಬಿ ಜಯಕ್ಕೆ ಕಾರಣವಾಯಿತು. ಒಂದೇ ಐಪಿಎಲ್ ಆವೃತ್ತಿಯಲ್ಲಿ ಚೆನ್ನೈ ತಂಡವನ್ನು ಎರಡೂ ಪಂದ್ಯಗಳಲ್ಲಿ ಆರ್‌ಸಿಬಿಯು ಸೋಲಿಸಿದ್ದು ಇದೇ ಮೊದಲು.

214 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಮಹೇಂದ್ರಸಿಂಗ್ ಧೋನಿ ಬಳಗವು ‘ಹೊಸ ಚಿಗುರು’ ಆಯುಷ್ ಮ್ಹಾತ್ರೆ (94; 48ಎ, 4X9, 6X5) ಮತ್ತು ‘ಹಳೆ ಬೇರು’ ರವೀಂದ್ರ ಜಡೇಜ (ಅಜೇಯ 77; 45ಎ, 4X8, 6X1) ಅವರ ಅಮೋಘ ಬ್ಯಾಟಿಂಗ್ ಬಲದಿಂದ ಗೆಲುವಿನ ಸನಿಹ ಬಂದು ನಿಂತಿತ್ತು. ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 114 ರನ್ ಸೇರಿಸಿದರು. ಆದರೆ 17ನೇ ಓವರ್‌ನಲ್ಲಿ ವೇಗಿ ಲುಂಗಿ ಗಿಡಿ ಅವರು ಆಯುಷ್ ಮತ್ತು ಬ್ರೆವಿಸ್ ಡಿವಾಲ್ಡ್ ಅವರ ವಿಕೆಟ್ ಕಬಳಿಸಿ, ಆರ್‌ಸಿಬಿ ಗೆಲುವಿನಾಸೆಗೆ ಮರುಜೀವ ನೀಡಿದರು.

ಜಡೇಜ ಜೊತೆಗೂಡಿದ ಧೋನಿ ತಂಡದ ಜಯದ ಆಸೆಯನ್ನು ಜೀವಂತವಾಗಿಟ್ಟರು. ಇದರಿಂದಾಗಿ ಕೊನೆಯ ಓವರ್‌ನಲ್ಲಿ ತಂಡದ ಗೆಲುವಿಗೆ ಕೇವಲ 16 ರನ್‌ಗಳ ಅಗತ್ಯವಿತ್ತು. ಆದರೆ ಯಶ್ ದಯಾಳ್ ಹಾಕಿದ ಈ ಓವರ್ ನಾಟಕೀಯ ತಿರುವುಗಳಿಗೆ ಕಾರಣವಾಯಿತು.

ಮೊದಲ ಎಸೆತದಲ್ಲಿ ಧೋನಿ ಮತ್ತು ಎರಡನೇಯದ್ದರಲ್ಲಿ ಜಡೇಜ ತಲಾ ಒಂದು ರನ್ ಗಳಿಸಿದರು. ಆದರೆ ಮೂರನೇ ಎಸೆತದಲ್ಲಿ ಧೋನಿಯನ್ನು ಎಲ್‌ಬಿ ಬಲೆಗೆ ಬೀಳಿಸುವಲ್ಲಿ ದಯಾಳ್ ಯಶಸ್ವಿಯಾದರು. ಕ್ರೀಸ್‌ಗೆ ಬಂದ ಶಿವಂ ದುಬೆ ಸಿಕ್ಸರ್ ಹೊಡೆದರು. ಆ ಎಸೆತವು ದುಬೆಯವರ ನಡುಮಟ್ಟಕ್ಕಿಂತ ಮೇಲಿದ್ದ ಕಾರಣ ನೋಬಾಲ್ ಆಗಿ ಒಟ್ಟು ಏಳು ರನ್‌ಗಳು ಸಿಕ್ಕವು. ಆದರೆ ಯಶ್ ದಯಾಳ್ ಎದೆಗುಂದಲಿಲ್ಲ. ನಂತರದ ಮೂರು ಎಸೆತಗಳಲ್ಲಿ 3 ರನ್‌ಗಳನ್ನಷ್ಟೇ ಕೊಟ್ಟರು. ಅದರೊಂದಿಗೆ ಜೇಕಬ್ ಬೆಥಲ್, ವಿರಾಟ್ ಕೊಹ್ಲಿ ಮತ್ತು ರೊಮೆರಿಯೊ ಶೆಫರ್ಡ್ ಅವರ ಅಬ್ಬರದ ಬ್ಯಾಟಿಂಗ್ ವ್ಯರ್ಥವಾಗದಂತೆ ನೋಡಿಕೊಂಡರು. ಅಲ್ಲದೇ ಆರ್‌ಸಿಬಿಯು ನಾಲ್ಕು ಕ್ಯಾಚ್‌ಗಳನ್ನು ಕೈಚೆಲ್ಲಿದ್ದನ್ನೂ ಮರೆಸಿದರು.

ಗುಡುಗಿದ ಶೆಫರ್ಡ್: ಟಾಸ್ ಗೆದ್ದ ಚೆನ್ನೈ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರ್‌ಸಿಬಿ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 213 ರನ್ ಗಳಿಸಿತು.

ಅದಕ್ಕೆ ಕಾರಣವಾಗಿದ್ದು ರೊಮೆರಿಯೊ ಶೆಫರ್ಡ್ ಅವರ ಅಬ್ಬರದ ಆಟ. ಆರ್‌ಸಿಬಿ ಇನಿಂಗ್ಸ್‌ನ ಕೊನೆಯ ಎರಡು ಓವರ್‌ಗಳಲ್ಲಿ 54 ರನ್‌ಗಳ ಹೊಳೆ ಹರಿಯಲು ವೆಸ್ಟ್ ಇಂಡೀಸ್ ಆಟಗಾರ ಕಾರಣರಾದರು. ಇದರಲ್ಲಿ ಅವರ ಪಾಲು 53 ರನ್‌ಗಳು! ಶೆಫರ್ಡ್ 378.57ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು.

ದುಬಾರಿಯಾದ ಖಲೀಲ್: ಇಂಗ್ಲೆಂಡ್‌ನ ಜೇಕಬ್ ಬೆಥೆಲ್ ಮತ್ತು ಶೆಫರ್ಡ್ ಅವರನ್ನು ಚೆನ್ನೈ ತಂಡದ ಎಡಗೈ ವೇಗಿ ಖಲೀಲ್ ಅಹಮದ್ ಎಂದಿಗೂ ಮರೆಯುವುದಿಲ್ಲ. ಈ ಇಬ್ಬರೂ ಬ್ಯಾಟರ್‌ಗಳಿಂದಾಗಿ ಖಲೀಲ್ 3 ಓವರ್‌ಗಳಲ್ಲಿ 65 ರನ್ ಬಿಟ್ಟುಕೊಟ್ಟರು.

ಖಲೀಲ್ ಹಾಕಿದ ಮೊದಲ ಸ್ಪೆಲ್‌ನಲ್ಲಿ (2-0-32-0) ಜೇಕಬ್ ಮತ್ತು ಕೊಹ್ಲಿ ದಂಡಿಸಿದರು. ಅದರ ನಂತರ ಖಲೀಲ್‌ಗೆ 19ನೇ ಓವರ್‌ನವರೆಗೂ ಬೌಲಿಂಗ್ ಲಭಿಸಲಿಲ್ಲ. ಪಥಿರಾಣ ಮತ್ತು ಸ್ಪಿನ್ನರ್ ನೂರ್ ಅಹಮದ್ ಅವರು ಆರ್‌ಸಿಬಿ ರನ್ ಗಳಿಕೆಗೆ ಕಡಿವಾಣ ಹಾಕಿದ್ದರು. ಒಂದು ಹಂತದಲ್ಲಿ ಆತಿಥೇಯ ತಂಡವು 200ರ ಗಡಿ ಮುಟ್ಟುವುದು ಕೂಡ ಅನುಮಾನವಾಗಿತ್ತು. ಈ ನಡುವೆ 60 ರನ್‌ಗಳ ಅಂತರದಲ್ಲಿ 5 ವಿಕೆಟ್ ಕೂಡ ಕಳೆದುಕೊಂಡಿತ್ತು. 18 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 159 ರನ್ ಗಳಿಸಿತ್ತು. ಆದರ ನಂತರದ ಓವರ್‌ನಲ್ಲಿ ಬೌಲಿಂಗ್‌ಗೆ ಇಳಿದ ಖಲೀಲ್, ಬೆಚ್ಚಿ ಬೀಳುವಂತೆ ಶೆಫರ್ಡ್ ಆಡಿದರು. ಕೊನೆಯ ಓವರ್‌ನಲ್ಲಿ ಪಥಿರಾಣ ಅವರನ್ನೂ ಶೆಫರ್ಡ್ ಬಿಡಲಿಲ್ಲ.

ಕೊಹ್ಲಿ 7ನೇ ಅರ್ಧಶತಕ: 21 ವರ್ಷದ ಆಟಗಾರ ಜೇಕಬ್ ಜೊತೆಗೆ ಮೊದಲ ವಿಕೆಟ್‌ಗೆ 97 ರನ್ ಸೇರಿಸಿದ ವಿರಾಟ್ ಕೊಹ್ಲಿ ಆಟ ರಂಗೇರಿತು. ಅವರು ಈ ಟೂರ್ನಿಯಲ್ಲಿ ಸತತ 4ನೇ ಮತ್ತು ಒಟ್ಟಾರೆ 7ನೇ ಅರ್ಧಶತಕ ದಾಖಲಿಸಿದರು. 29 ಎಸೆತಗಳಲ್ಲಿ ಅವರು 50ರ ಗಡಿ ದಾಟಿದರು.

ಡೆವಾಲ್ಡ್‌ಗೆ ಸಿಗದ ಡಿಆರ್‌ಎಸ್: ಲುಂಗಿ ಗಿಡಿ ಎಸೆತದಲ್ಲಿ ಎಲ್‌ಬಿಡಬ್ಲ್ಯು ಆದ ಬ್ರೆವಿಸ್ ಡೆವಾಲ್ಡ್ ಅವರಿಗೆ ಡಿಆರ್‌ಎಸ್ ತೆಗೆದುಕೊಳ್ಳುವ ಅವಕಾಶ ಸಿಗಲಿಲ್ಲ. ಅದಕ್ಕೆ ಕಾರಣ ಅವರು ಡಿಆರ್‌ಎಸ್ ಕೇಳುವಾಗ ನಿಗದಿಯ ಸಮಯ ಮುಗಿದಿತ್ತು. ಲೋವರ್ ಫುಲ್‌ಟಾಸ್ ಎಸೆತವು ಅವರ ಪ್ಯಾಡ್‌ಗೆ ತಗುಲಿ ಹಿಂದೆ ಸಾಗಿತು. ಅಂಪೈರ್ ಎಲ್‌ಬಿ ನೀಡಿದರು. ಆಗಲೇ ಮನವಿ ಸಲ್ಲಿಸುವ ಬದಲು ಒಂದು ರನ್‌ಗಾಗಿ ಬ್ರೆವಿಸ್ ಮತ್ತು ಜಡೇಜ ಓಡಿದರು. ನಂತರ ಪರಸ್ಪರ ಮಾತನಾಡಿ ಡಿಆರ್‌ಎಸ್ ಮನವಿ ಸಲ್ಲಿಸಿದರು. ಆದರೆ ಅಂಪೈರ್ ಪುರಸ್ಕರಿಸಲಿಲ್ಲ. ಏಕೆಂದರೆ; ಒಮ್ಮೆ ಅಂಪೈರ್ ಔಟ್ ಎಂದು ತೀರ್ಪು ಕೊಟ್ಟಾಗ ಬಾಲ್ ಡೆಡ್ ಆಗುತ್ತದೆ. ಜೊತೆಗೆ ಡಿ ಆರ್‌ಎಸ್ ಪಡೆಯುವ ಕ್ಷಣಗಣನೆಯೂ ಆರಂಭವಾಗಿರುತ್ತದೆ. ಡೆವಾಲ್ಡ್ ಪೆವಿಲಿಯನ್‌ಗೆ ಮರಳಿದ ರು. ಅದರ ನಂತರ ಟಿ.ವಿ. ರಿಪ್ಲೆಯಲ್ಲಿ ಮೂಡಿದ ದೃಶ್ಯದಲ್ಲಿ ಡೆವಾಲ್ಡ್ ನಾಟ್‌ಔಟ್ ಆಗಿರುವುದು ಸ್ಪಷ್ಟವಾಗಿತ್ತು.



ಚೆಂಡನ್ನು ಸಿಕ್ಸರ್‌ಗಟ್ಟಿದ ರೊಮೆರಿಯೊ ಶೆಫರ್ಡ್ ಪ್ರಜಾವಾಣಿ ಚಿತ್ರಗಳು: ರಂಜು ಪಿ.

ತವರಿನಲ್ಲಿ ಟಾಸ್ ಸೋಲು

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈ ವರ್ಷ ಆಡಿದ ಇಂಡಿಯನ್ ಪ್ರೀಮಿಯರ್ ಲೀಗ್ ಮತ್ತು ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಗಳ 9 ಪಂದ್ಯಗಳಲ್ಲಿ ಟಾಸ್ ಸೋತಿದೆ. ಪುರುಷರ ತಂಡವು ಈ ವರ್ಷ ಇಲ್ಲಿ ಐದು ಪಂದ್ಯಗಳನ್ನು ಆಡಿದೆ. ಸ್ಮೃತಿ ಮಂದಾನ ನಾಯಕತ್ವದ ಆರ್‌ಸಿಬಿಯು 4 ಪಂದ್ಯಗಳನ್ನು ಈ ಕ್ರೀಡಾಂಗಣದಲ್ಲಿ ಆಡಿದೆ.

ಹೋದ ವರ್ಷದ ನೆನಪು

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹೋದ ವರ್ಷ ಚೆನ್ನೈ ಸೂಪರ್ ಕಿಂಗ್ಸ್ ಎದುರು ನಡೆದಿದ್ದ ಪಂದ್ಯದಲ್ಲಿ ಆರ್‌ಸಿಬಿ ಗೆಲುವಿನಲ್ಲಿ ಯಶ್ ದಯಾಳ್ ಪ್ರಮುಖ ಪಾತ್ರ ವಹಿಸಿದ್ದರು. ಆ ಪಂದ್ಯದಲ್ಲಿಯೂ ಯಶ್ ಕೊನೆಯ ಓವರ್ ಹಾಕಿದ್ದರು. ಚೆನ್ನೈಗೆ ಆಗ 17 ರನ್ ಅಗತ್ಯವಿತ್ತು. ಅದೇ ಓವರ್‌ನಲ್ಲಿ ಮಹೇಂದ್ರಸಿಂಗ್ ಧೋನಿಯ ವಿಕೆಟ್ ಯಶ್ ಪಾಲಾಗಿತ್ತು. ರೋಚಕತೆ ಕೆರಳಿಸಿದ್ದ ಆ ಓವರ್‌ನಲ್ಲಿ ಯಶ್ ಚಾಣಾಕ್ಷತನ ಮೆರೆದಿದ್ದರು. ಆರ್‌ಸಿಬಿ ಗೆದ್ದಿತ್ತು. ಈ ಬಾರಿಯೂ ಅದೇ ರೀತಿಯ ಕೊನೆಯ ಓವರ್ ಥ್ರಿಲ್ಲರ್ ಅಭಿಮಾನಿಗಳ ಮನಗೆದ್ದಿತು.



ಆಯುಷ್ ಮ್ಹಾತ್ರೆ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು
5ಕ್ಕೆ 213 (20 ಓವರ್‌ಗಳಲ್ಲಿ)
ಬೆಥೆಲ್ ಸಿ ಬ್ರೆವಿಸ್ ಬಿ ಪಥಿರಾಣ 55 (38ಎ, 4x8, 6x2)
ಕೊಹ್ಲಿ ಸಿ ಅಹಮ್ಮದ್ ಬಿ ಕರನ್ 62 (33ಎ, 4x5, 6x5)
ಪಡಿಕ್ಕಲ್ ಸಿ ಜಡೇಜ ಬಿ ಪಥಿರಾಣ 17 (15ಎ, 4x1, 6x1)
ಪಾಟೀದಾರ್ ಸಿ ಕರಣ್ ಬಿ ಪಥಿರಾಣ 11 (15ಎ, 4x1)
ಜಿತೇಶ್ ಸಿ ಬ್ರೆವಿಸ್ ಬಿ ನೂರ್ 7 (8ಎ, 4x1)
ಟಿಮ್ ಡೇವಿಡ್ ಔಟಾಗದೇ 2 (3ಎ)
ಶೆಫರ್ಡ್ ಔಟಾಗದೇ 53 (14ಎ, 4x4, 6x6)
ಇತರೆ: 6 (ಲೆಗ್‌ಬೈ 1, ನೋಬಾಲ್ 1, ವೈಡ್ 4)
ವಿಕೆಟ್ ಪತನ: 1-97 (ಜೇಕಬ್ ಬೆಥೆಲ್, 9.5), 2-121 (ವಿರಾಟ್ ಕೊಹ್ಲಿ, 11.5), 3-144 (ದೇವದತ್ತ ಪಡಿಕ್ಕಲ್, 15.1), 4-154 (ಜಿತೇಶ್ ಶರ್ಮಾ, 16.5), 5-157 (ರಜತ್ ಪಾಟೀದಾರ್, 17.4)
ಬೌಲಿಂಗ್: ಖಲೀಲ್ ಅಹಮ್ಮದ್ 3-0-65-0, ಅನ್ಶುಲ್ ಕಾಂಬೋಜ್ 3-0-25-0, ನೂರ್ ಅಹಮ್ಮದ್ 4-0-26-1, ರವೀಂದ್ರ ಜಡೇಜ 3-0-26-0, ಸ್ಯಾಮ್ ಕರಣ್ 3-0-34-1, ಮಥೀಷ ಪಥಿರಾಣ 4-0-36-3
ಚೆನ್ನೈ ಸೂಪರ್ ಕಿಂಗ್ಸ್
5ಕ್ಕೆ 211 (20 ಓವರ್‌ಗಳಲ್ಲಿ)
ಆಯುಷ್ ಸಿ ಕೃಣಾಲ್ ಬಿ ಎನ್‌ಗಿಡಿ 94 (48ಎ, 4X9, 6X5)
ರಶೀದ್ ಸಿ ಶೆಫರ್ಡ್ ಬಿ ಪಾಂಡ್ಯ 14 (11ಎ,4X1, 6X1)
ಸ್ಯಾಮ್ ಸಿ ಶರ್ಮಾ ಬಿ ಎನ್‌ಗಿಡಿ 5 (5 ಎ, 4X 1)
ರವೀಂದ್ರ ಔಟಾಗದೇ 77 (45ಎ, 4X8, 56X2)
ಬ್ರೆವಿಸ್ ಎಲ್‌ಬಿಡಬ್ಲ್ಯು ಬಿ ಎನ್‌ಗಿಡಿ 0 (1 ಎ)
ಧೋನಿ ಎಲ್‌ಬಿಡಬ್ಲ್ಯು ಬಿ ದಯಾಳ್ 12 (8 ಎ, 6X1)
ಶಿವಂ ದುಬೆ ಔಟಾಗದೇ 8 (3ಎ, 6X1)
ಇತರೆ: 1 (ನೋಬಾಲ್ 1)
ವಿಕೆಟ್ ಪತನ: 1-51 (ಶೇಖ್ ರಶೀದ್, 4.3), 2-58 (ಸ್ಯಾಮ್ ಕರನ್, 5.4), ಆಯುಷ್ ಮ್ಹಾತ್ರೆ, 16.2), 4-172 (ಡೆವಾಲ್ಡ್ ಬ್ರೆವಿಸ್, 16.3), 5-201(ಧೋನಿ, 19.3)
ಬೌಲಿಂಗ್: ಕೃಣಾಲ್ ಪಾಂಡ್ಯ 3-0-24-1, ಭುವನೇಶ್ವರ್ 4-0-55-0, ಯಶ್ ದಯಾಳ್ 4-0-41-1, ಲುಂಗಿ ಎನ್‌ಗಿಡಿ 4-0-30-3, ಸುಯಾಶ್ 4-0-43-0, ರೊಮೆರಿಯೊ ಶೆಫರ್ಡ್ 1-0-18-0
ಪಂದ್ಯದ ಆಟಗಾರ: ರೊಮೆರಿಯೊ ಶೆಫರ್ಡ್
ಫಲಿತಾಂಶ: ಆರ್‌ಸಿಬಿಗೆ 2 ರನ್ ಜಯ

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ರಾಯಲ್ ಚಾಲೆಂಜರ್ಸ್ ಬೆಂಗಳೂರು	11	8	3	16	0.482
ಮುಂಬೈ ಇಂಡಿಯನ್ಸ್	11	7	4	14	1.274
ಗುಜರಾತ್ ಟೈಟನ್ಸ್	10	7	3	14	0.867
ಪಂಜಾಬ್ ಕಿಂಗ್ಸ್	10	6	3	13	0.199
ಡೆಲ್ಲಿ ಕ್ಯಾಪಿಟಲ್ಸ್	10	6	4	12	0.362
ಲಖನೌ ಸೂಪರ್ ಜೈಂಟ್ಸ್	10	5	5	10	-0.325
ಕೋಲ್ಕತ್ತ ನೈಟ್ ರೈಡರ್ಸ್	10	4	5	9	0.271
ರಾಜಸ್ಥಾನ ರಾಯಲ್ಸ್	11	3	8	6	-0.780
ಸನ್‌ರೈಸರ್ಸ್ ಹೈದರಾಬಾದ್	10	3	7	6	-1.192
ಚೆನ್ನೈ ಸೂಪರ್ ಕಿಂಗ್ಸ್	11	2	9	4	-1.117

ಆರೇಂಜ್ ಕ್ಯಾಪ್
ವಿರಾಟ್ ಕೊಹ್ಲಿ
(ಆರ್‌ಸಿಬಿ) 505 ರನ್

ಪರ್ಪಲ್ ಕ್ಯಾಪ್
ಪ್ರಸಿದ್ಧ ಕೃಷ್ಣ
(ಜಿಟಿ) 19 ವಿಕೆಟ್

ಗೆಲುವಿನ ಒತ್ತಡದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್

ಕೋಲ್ಕತ್ತ (ಪಿಟಿಐ): ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಈ ಬಾರಿಯ ಐಪಿಎಲ್‌ನಲ್ಲಿ ಪ್ಲೇ ಆಫ್ ಪ್ರವೇಶಕ್ಕೆ ಇನ್ನೂ ಅವಕಾಶ ಇದೆ. ಆದರೆ ಈಗಾಗಲೇ ನಾಕೌಟ್ ಹಾದಿಯಿಂದ ಹೊರಬಿದ್ದಿರುವ ರಾಜಸ್ಥಾನ ರಾಯಲ್ಸ್ ತಂಡವು ಕೋಲ್ಕತ್ತದ ದಾರಿಗೆ ಅಡ್ಡಗಾಲು ಹಾಕಲು ಸಿದ್ಧವಾಗಿದೆ.

ಈಡನ್ ಗಾರ್ಡನ್‌ನಲ್ಲಿ ಭಾನುವಾರ ನಡೆಯಲಿರುವ ಪಂದ್ಯವು ಕೋಲ್ಕತ್ತಕ್ಕೆ ಬಹಳ ಮಹತ್ವದ್ದಾಗಿದೆ. ಅಜಿಂಕ್ಯ ರಹಾನೆ ಪಡೆಯು ತನ್ನ ಪಾಲಿಗೆ ಉಳಿದಿರುವ ಎಲ್ಲ ನಾಲ್ಕು ಪಂದ್ಯಗಳನ್ನು ಗೆದ್ದರೆ ಪ್ಲೇಆಫ್ ಪ್ರವೇಶಿಸಲು ಸಾಧ್ಯವಾಗಲಿದೆ. ಸದ್ಯ 9 ಅಂಕ ಗಳಿಸಿರುವ ಕೋಲ್ಕತ್ತ ತಂಡದ ಈ ಪರಿಸ್ಥಿತಿಗೆ ಪ್ರಮುಖ ಆಟಗಾರರ ಅಸ್ಥಿರ ಪ್ರದರ್ಶನವೇ ಕಾರಣವಾಗಿದೆ.

ಆಲ್‌ರೌಂಡರ್ ಸುನಿಲ್ ನಾರಾಯಣ್, ನಾಯಕ ಅಜಿಂಕ್ಯ ಮತ್ತು ಯುವ ಆಟಗಾರ ಅಂಗಕ್ರಿಷ್ ರಘುವಂಶಿ ಅವರನ್ನು ಬಿಟ್ಟರೆ ಉಳಿದವರು ವೈಫಲ್ಯ ಕಂಡಿದ್ದೇ ಹೆಚ್ಚು. ವೆಂಕಟೇಶ್ ಅಯ್ಯರ್ ಅವರು ಟೂರ್ನಿಯಲ್ಲಿ ಕೇವಲ 142 ರನ್‌ಗಳನ್ನು ಪೇರಿಸಿದ್ದಾರೆ. ಹೋದ ಸಲದ ಟೂರ್ನಿಯಲ್ಲಿ ಅವರು 370 ರನ್ ಗಳಿಸಿದ್ದರು.

ಆದರೆ ರಹಾನೆ ಅವರು ಕೈಗೆ ಆಗಿರುವ ಗಾಯಕ್ಕೆ ಚಿಕಿತ್ಸೆ ಪಡೆಯುತ್ತಿದ್ದು ಕಣಕ್ಕೆ ಮರಳುವುದು ಇನ್ನೂ ಖಚಿತವಾಗಿಲ್ಲ. ಅವರು ಈಚೆಗೆ ಫೀಲ್ಡಿಂಗ್ ಮಾಡುವಾಗ ಗಾಯಗೊಂಡಿದ್ದರು.

‘ನಾನು ಚೇತರಿಸಿಕೊಂಡಿರುವೆ. ಭಾನುವಾರದ ಪಂದ್ಯಕ್ಕೆ ಮರಳುವ ವಿಶ್ವಾಸವಿದೆ. ನನ್ನಿಂದ ಆದ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿರುವೆ’ ಎಂದು ಅಜಿಂಕ್ಯ ಹೇಳಿದ್ದಾರೆ.

ಈಚೆಗೆ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ಸುನಿಲ್ ನಾರಾಯಣ್ ಆಲ್‌ರೌಂಡ್ ಆಟದ ಮೂಲಕ ಕೆಕೆಆರ್ ಗೆಲುವಿನ ರೂವಾರಿಯಾಗಿದ್ದರು. ಸ್ಪಿನ್ನರ್ ವರುಣ್ ಚಕ್ರವರ್ತಿ, ಹರ್ಷಿತ್ ರಾಣಾ ಮತ್ತು ಚೇತನ್ ಸಕಾರಿಯಾ ಅವರು ಬೌಲಿಂಗ್ ವಿಭಾಗಕ್ಕೆ ಶಕ್ತಿ ತುಂಬಬೇಕಿದೆ.

ರಾಯಲ್ಸ್ ತಂಡಕ್ಕೆ ಹೆಚ್ಚು ಒತ್ತಡವಿಲ್ಲ. ಆದರೆ ಅಂಕಪಟ್ಟಿಯಲ್ಲಿ ಕೆಲವು ಸ್ಥಾನಗಳ ಬಡ್ತಿಗಾಗಿ ಪ್ರಯತ್ನಿಸಬಹುದು. ಅದಕ್ಕಾಗಿ ಜಯಗಳಿಸುವ ಹಂಬಲದಲ್ಲಿದೆ. ರಿಯಾನ್ ಪರಾಗ್ ನಾಯಕತ್ವದ ತಂಡದಲ್ಲಿ ಈಗ 14ರ ಪೋರ ವೈಭವ್ ಸೂರ್ಯವಂಶಿ ಪ್ರಮುಖ ಆಕರ್ಷಣೆಯಾಗಿದ್ದಾರೆ. ಈಚೆಗೆ ಶತಕ ಬಾರಿಸಿ ಮನೆಮಾತಾಗಿರುವ ವೈಭವ್ ಅವರ ಆಟದ ಮೇಲೆ ಈಗ ಎಲ್ಲರ ಚಿತ್ತ ನೆಟ್ಟಿದೆ.



ಸುನಿಲ್



ವೈಭವ್

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಲಖನೌ ತಂಡಕ್ಕೆ ‘ಮಾಡು ಇಲ್ಲವೇ ಮಡಿ’ ಪಂದ್ಯ

ಧರ್ಮಶಾಲಾ (ಪಿಟಿಐ): ಈ ಸಲದ ಐಪಿಎಲ್ ಮೆಗಾ ಹರಾಜಿನಲ್ಲಿ ಅತ್ಯಂತ ದುಬಾರಿ ಮೌಲ್ಯ ಪಡೆದ ಇಬ್ಬರು ಆಟಗಾರರಾದ ರಿಷಭ್ ಪಂತ್ ಮತ್ತು ಶ್ರೇಯಸ್ ಅಯ್ಯರ್ ಅವರ ನಾಯಕತ್ವದ ತಂಡಗಳು ಭಾನುವಾರ ಮುಖಾಮುಖಿಯಾಗಲಿವೆ.

ರಿಷಭ್ ಪಂತ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ‘ಮಾಡು ಇಲ್ಲವೇ ಮಡಿ’ ಪಂದ್ಯ ಇದಾಗಿದೆ. ಅದೇ ಶ್ರೇಯಸ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವು ಸದ್ಯ ನಾಲ್ಕನೇ ಸ್ಥಾನದಲ್ಲಿದ್ದು ತನ್ನ ಪಾಲಿಗೆ ಉಳಿದಿರುವ ನಾಲ್ಕು ಪಂದ್ಯಗಳ ಪೈಕಿ ಇನ್ನೆರಡರಲ್ಲಿ ಜಯಿಸಿದರೂ ಪ್ಲೇ ಆಫ್ ಹಾದಿ ಸುಗಮ.

ಹೋದ ವರ್ಷ ಕೋಲ್ಕತ್ತ ನೈಟ್‌ರೈಡರ್ಸ್ ತಂಡವು ಶ್ರೇಯಸ್ ನಾಯಕತ್ವದಲ್ಲಿ ಚಾಂಪಿಯನ್ ಆಗಿತ್ತು. ಅವರು ಈ ಬಾರಿ ₹26.75 ಕೋಟಿ ಮೌಲ್ಯದೊಂದಿಗೆ ಪಂಜಾಬ್ ತಂಡವನ್ನು ಮುನ್ನಡೆಸುತ್ತಿದ್ದಾರೆ. ಬ್ಯಾಟಿಂಗ್‌ನಲ್ಲಿಯೂ ಅಮೋಘ ಲಯದಲ್ಲಿದ್ದಾರೆ. ರನ್‌ಗಳನ್ನು ಹರಿಸಿ ತಮ್ಮ ತಂಡವನ್ನು ಗೆಲುವಿನತ್ತ ಮುನ್ನಡೆಸುತ್ತಿದ್ದಾರೆ. ಶಾರ್ಟ್ ಪಿಚ್ ಎಸೆತಗಳಿಗೆ ಔಟಾಗುವ ತಮ್ಮ ದೌರ್ಬಲ್ಯವನ್ನು ಸರಿಪಡಿಸಿಕೊಂಡಿರುವ ಶ್ರೇಯಸ್ ಆಟದಲ್ಲಿ ಆತ್ಮವಿಶ್ವಾಸ ಮರುಕಳಿಸಿದೆ. ಬೌಲರ್‌ಗಳಿಗೆ ನಡುಕ ಮೂಡಿಸುತ್ತಿದ್ದಾರೆ. ಇದೀಗ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಗಾಯಗೊಂಡು ಟೂರ್ನಿಯಿಂದ ಹೊರ ಬಿದ್ದಿರುವುದರಿಂದ ಶ್ರೇಯಸ್ ಅವರ ಮೇಲೆ ಹೊಣೆ ಹೆಚ್ಚಿದೆ.

ಹೊಸ ಪ್ರತಿಭೆಗಳಾದ ಆ್ಯರನ್ ಹಾರ್ಡಿ ಮತ್ತು ಝೇವಿಯರ್ ಬಾರ್ಟಲೆಟ್ ಅವರಲ್ಲಿ ಒಬ್ಬರಿಗೆ ಅವಕಾಶ ನೀಡುವ ಸಾಧ್ಯತೆ ಇದೆ.

ಉಳಿದಂತೆ ತಂಡದಲ್ಲಿ ಪ್ರಿಯಾಂಶ್ ಆರ್ಯ, ನೆಹಲ್ ವಧೇರಾ ಮತ್ತು ಶಶಾಂಕ್ ಸಿಂಗ್ ಅವರು ಉತ್ತಮ ಲಯದಲ್ಲಿದ್ದಾರೆ. ಯಜುವೇಂದ್ರ ಚಾಹಲ್ ಅಮೋಘ ಲಯದಲ್ಲಿರುವುದರಿಂದ ಪಂಜಾಬ್ ತಂಡದ ಬಲ ದುಪ್ಪಟ್ಟಾಗಿದೆ.

ಆದರೆ ₹ 27 ಕೋಟಿ ಮೌಲ್ಯ ಪಡೆದು ಲಖನೌ ತಂಡವನ್ನು ಸೇರಿರುವ ರಿಷಭ್ ಬ್ಯಾಟಿಂಗ್ ಮಾತ್ರ ರಂಗೇರಿಲ್ಲ. ಇಡೀ ಟೂರ್ನಿಯಲ್ಲಿ ಅವರು ಒಂದು ಅರ್ಧಶತಕ ಮಾತ್ರ ಹೊಡೆದಿದ್ದಾರೆ. ಅವರ ನಾಯಕತ್ವದ ತಂಡವು ಆಡಿರುವ ಹತ್ತು ಪಂದ್ಯಗಳಲ್ಲಿ ಸಿಹಿ–ಕಹಿಯನ್ನು ಸಮಪ್ರಮಾಣದಲ್ಲಿ ಉಂಡಿದೆ.

ಈಗ ಉಳಿದಿರುವ ನಾಲ್ಕು ಪಂದ್ಯಗಳಲ್ಲಿ ಸತತ ಜಯ ಸಾಧಿಸಿ ಪ್ಲೇ ಆಫ್ ಸ್ಥಾನ ಪಡೆಯಬೇಕು. ರಿಷಭ್ ಲಯಕ್ಕೂ ಮರಳಬೇಕು. ತಂಡದಲ್ಲಿರುವ ನಿಕೊಲಸ್ ಪೂರನ್ (377 ರನ್), ಮಿಚೆಲ್ ಮಾರ್ಷ್ (344) ಮತ್ತು ಏಡನ್ ಮರ್ಕರಂ (326) ಅವರು ತಮ್ಮ ಅಬ್ಬರ ಮುಂದುವರಿಸಿದರೆ ಮಾತ್ರ ದೊಡ್ಡ ಮೊತ್ತ ಸಾಧ್ಯವಾಗಲಿದೆ.

ವೇಗಿ ಆವೇಶ್ ಖಾನ್ ಅವರು ಸತತವಾಗಿ ತಂಡಕ್ಕೆ ನೆರವಾಗುತ್ತಿದ್ದಾರೆ. ಮಯಂಕ್ ಯಾದವ್ ಅವರ ಎಸೆತಗಳಲ್ಲಿ ಮೊದಲಿನ ವೇಗವಿಲ್ಲ. ಆದರೆ ಮುಂಬೈ ಎದುರಿನ ಪಂದ್ಯದಲ್ಲಿ 2 ವಿಕೆಟ್ ಗಳಿಸಿದ್ದು ಭರವಸೆ ಮೂಡಿಸಿದ್ದಾರೆ.



ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್–ಎಎಫ್‌ಪಿ ಚಿತ್ರ

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್



ಪಂಜಾಬ್ ತಂಡದ ನಾಯಕ ಶ್ರೇಯಸ್ ಅಯ್ಯರ್



ಗ್ಲೋಬಲ್ ಇ ಕ್ರಿಕೆಟ್ ಪ್ರೀಮಿಯರ್ ಲೀಗ್ 2ನೇ ಆವೃತ್ತಿಯಲ್ಲಿ ಪ್ರಶಸ್ತಿ ಗೆದ್ದ ಚೆನ್ನೈ ಫಾಲ್ಕನ್ಸ್ ತಂಡದ ಆಟಗಾರರ ಸಂಭ್ರಮ. ಪುಣೆ ಸ್ಟಾಲಿಯನ್ಸ್ ಮಾಲೀಕ ನಟ ಸುನಿಲ್ ಶೆಟ್ಟಿ, ಮುಂಬೈ ಗ್ರಿಜ್ಲೀಸ್ ತಂಡದ ಮಾಲೀಕರು ಸಾರಾ ತೆಂಡೂಲ್ಕರ್ ಚಿತ್ರದಲ್ಲಿದ್ದಾರೆ

ಇ ಕ್ರಿಕೆಟ್: ಚೆನ್ನೈ ಫಾಲ್ಕನ್ಸ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಗ್ಲೋಬಲ್ ಇ ಕ್ರಿಕೆಟ್ ಪ್ರೀಮಿಯರ್ ಲೀಗ್ ಎರಡನೇ ಆವೃತ್ತಿಯಲ್ಲಿ ಚೆನ್ನೈ ಫಾಲ್ಕನ್ಸ್ ಚಾಂಪಿಯನ್ ಆಗಿ ಹೊರಹೊಮ್ಮಿತು.

ಟಿವಿಎಸ್ ಕ್ಯಾಪಿಟಲ್ ಫಂಡ್ಸ್ ಅಧ್ಯಕ್ಷ ಗೋಪಾಲ್ ಶ್ರೀನಿವಾಸನ್, ಯಾಪ್ ಸಂಸ್ಥಾಪಕ ಮಧುಸೂದನ್ ಆರ್ ಮತ್ತು ಉದ್ಯಮಿ ಅರ್ಜುನ್ ಸಂತಾನಕೃಷ್ಣನ್ ಅವರ ಸಹ ಮಾಲೀಕತ್ವದ ಚೆನ್ನೈ ಫಾಲ್ಕನ್ಸ್ ತಂಡವು ಫೈನಲ್ ಹಣಾಹಣಿಯಲ್ಲಿ ಸಾರಾ ತೆಂಡೂಲ್ಕರ್ ಮಾಲೀಕತ್ವದ ಮುಂಬೈ ಗ್ರಿಜ್ಲೀಸ್ ತಂಡವನ್ನು ಮಣಿಸಿತು.

ಮುಂಬೈ ಗ್ರಿಜ್ಲೀಸ್ ರನ್ನರ್ಸ್ ಅಪ್ ಆದರೆ, ಲೆನ್ಸ್‌ಕಾರ್ಟ್ ಸಂಸ್ಥಾಪಕ ಪಿಯೂಷ್ ಬನ್ಸಲ್ ಮಾಲೀಕರಾಗಿರುವ ದೆಹಲಿ ಶಾರ್ಕ್ಸ್ ತಂಡ ಮೂರನೇ ಸ್ಥಾನ ಪಡೆಯಿತು.

ಟೂರ್ನಿಯಲ್ಲಿ ಒಟ್ಟು ಆರು ತಂಡಗಳು ಪೈಪೋಟಿ ನಡೆಸಿದ್ದವು. ಎಲ್‌ಎನ್‌ಬಿ ಗ್ರೂಪ್ ನಿರ್ದೇಶಕ ಅಮಿತ್ ಮೆಹತಾ ಅವರ ಮಾಲೀಕತ್ವದ ಹೈದರಾಬಾದ್ ರೈನೋಸ್ ನಾಲ್ಕನೇ ಸ್ಥಾನ ಗಳಿಸಿತು. ಬಾಲಿವುಡ್ ತಾರೆ ಸುನಿಲ್ ಶೆಟ್ಟಿ ಮಾಲೀಕರಾಗಿರುವ ಪುಣೆ ಸ್ಟಾಲಿಯನ್ಸ್ ಐದನೇ ಪಡೆದರೆ, ಜೀರೋಧಾ–ಟ್ರೂಬೀಕನ್ ಸಹಸಂಸ್ಥಾಪಕ ನಿಖಿಲ್ ಕಾಮತ್, ಕ್ಯೂರ್‌ಫುಡ್ಸ್ ಸಂಸ್ಥಾಪಕ ಅಂಕಿತ್ ನಾಗೋರಿ ಮತ್ತು ಆಕ್ಸೆಲ್ ಇಂಡಿಯಾ ಸಂಸ್ಥಾಪಕ ಪ್ರಶಾಂತ್ ಪ್ರಕಾಶ್ ಅವರ ಸಹ ಮಾಲೀಕತ್ವದ ಬೆಂಗಳೂರು ಬ್ಯಾಜರ್ಸ್ ತಂಡವು ಆರನೇ ಸ್ಥಾನ ಗಳಿಸಿತು.

ಅಂಗವಿಕಲರ ಕ್ರಿಕೆಟ್: ಭಾರತಕ್ಕೆ ಮಣಿದ ಲಂಕ

ಬೆಂಗಳೂರು: ನಾಯಕ ರವೀಂದ್ರ ಸಾಂಟೆ (16ಕ್ಕೆ 5) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಭಾರತ ಅಂಗವಿಕಲರ (ಕಾಲಿನ ನ್ಯೂನತೆಯುಳ್ಳ) ತಂಡವು ಶನಿವಾರ ಆರು ವಿಕೆಟ್‌ಗಳಿಂದ ಶ್ರೀಲಂಕಾ ತಂಡವನ್ನು ಮಣಿಸಿತು.

ಪಿ.ಡಿ. ದೀಪಕ್ ಲೋಹಿಯಾ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ಐದು ಪಂದ್ಯಗಳ ಟಿ20 ಕ್ರಿಕೆಟ್ ಸರಣಿಯಲ್ಲಿ ಭಾರತ 4–0 ಮುನ್ನಡೆ ಸಾಧಿಸಿದೆ. ಮೊದಲ ಮೂರು ಪಂದ್ಯಗಳಲ್ಲೂ ಭಾರತ ತಂಡ ಜಯ ಸಾಧಿಸಿತು. ಕೊನೆಯ ಪಂದ್ಯವು ಸೋಮವಾರ ನಡೆಯಲಿದೆ.

ಕುಂಬಳಗೋಡಿನ ಕಿಣಿ ಸ್ಪೋರ್ಟ್ಸ್ ಅರೇನಾದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಂಕಾ 18.4 ಓವರ್‌ಗಳಲ್ಲಿ 104 ರನ್ ಗಳಿಸಿತು. ಗುರಿಯನ್ನು ಬೆನ್ನಟ್ಟಿದ ಭಾರತ 18.1 ಓವರ್‌ಗಳಲ್ಲಿ 4 ವಿಕೆಟ್‌ಗೆ 105 ರನ್ ಹೊಡೆದು ಸಂಭ್ರಮಿಸಿತು. ರವೀಂದ್ರ ಸಾಂಟೆ ಪಂದ್ಯದ ಆಟಗಾರ ಗೌರವಕ್ಕೆ ಪಾತ್ರವಾದರು.

ಪಹಲ್ಗಾಮ್ ಭಯೋತ್ಪಾದಕ ದಾಳಿ: ತನಿಖೆ ವ್ಯಾಪ್ತಿ ವಿಸ್ತರಿಸಿದ ಎನ್‌ಐಎ

ಜೈಲಿನಲ್ಲಿರುವ ಉಗ್ರರ ವಿಚಾರಣೆ

• ಝುಲ್ಫಿಕರ್ ಮಜಿದ್

ಶ್ರೀನಗರ: ಪಹಲ್ಗಾಮ್ ದಾಳಿಯ ತನಿಖೆಯ ವ್ಯಾಪ್ತಿಯನ್ನು ವಿಸ್ತರಿಸಿರುವ ರಾಷ್ಟ್ರೀಯ ತನಿಖಾ ಏಜೆನ್ಸಿಯು (ಎನ್‌ಐಎ), ಜಮ್ಮು ಜೈಲಿನಲ್ಲಿ ಇರುವ ಇಬ್ಬರು ಉಗ್ರರ ವಿಚಾರಣೆ ನಡೆಸಿದೆ. ಮುಷ್ತಾಕ್ ಮತ್ತು ನಿಸಾರ್ ಎಂಬ ಇಬ್ಬರು ಉಗ್ರರನ್ನು 2023ರಲ್ಲಿ ರಜೌರಿಯಲ್ಲಿ ನಡೆದ ದಾಳಿಯ ಸಂಬಂಧ ಬಂಧಿಸಲಾಗಿದೆ.

ಇಬ್ಬರು ಉಗ್ರರು 2023ರ ಏಪ್ರಿಲ್‌ನಿಂದ ಜೈಲಿನಲ್ಲಿ ಇದ್ದಾರೆ. ರಜೌರಿ ಜಿಲ್ಲೆಯಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಏಳು ಮಂದಿ ನಾಗರಿಕರು ಮೃತಪಟ್ಟಿದ್ದರು. ಮೃತಪಟ್ಟವರಲ್ಲಿ ಇಬ್ಬರು ಮಕ್ಕಳು. ದಾಳಿಯ ಮಾರನೆಯ ದಿನ ಕಚ್ಚಾ ಬಾಂಬ್ ಸ್ಫೋಟ ಸಂಭವಿಸಿತ್ತು.

26 ಜನರ ಸಾವಿಗೆ ಕಾರಣವಾದ ಪಹಲ್ಗಾಮ್ ಭಯೋತ್ಪಾದಕ ದಾಳಿಯ ತನಿಖೆಯನ್ನು ಎನ್‌ಐಎ ನಡೆಸುತ್ತಿದೆ. ಪಹಲ್ಗಾಮ್ ದಾಳಿಯ ಬಗ್ಗೆ ಮುಷ್ತಾಕ್ ಮತ್ತು ನಿಸಾರ್‌ಗೆ ಮೊದಲೇ ಗೊತ್ತಿತ್ತು ಅಥವಾ ಆ ದಾಳಿಯ ಯೋಜನೆ ರೂಪಿಸಲು ಅವರಿಬ್ಬರು ನೆರವು ಒದಗಿಸಿದ್ದಾರೆ ಎಂದು ತನಿಖಾಧಿಕಾರಿಗಳು ನಂಬಿದ್ದಾರೆ. ದಾಳಿಯ ಹಿಂದಿನ ಭಯೋತ್ಪಾದಕರ ಜಾಲವನ್ನು ಪತ್ತೆಮಾಡುವ ಪ್ರಯತ್ನದ ಭಾಗವಾಗಿ ಇಬ್ಬರನ್ನೂ ವಿಚಾರಣೆಗೆ ಗುರಿಪಡಿಸಲಾಗಿದೆ ಎಂದು ಗೊತ್ತಾಗಿದೆ.

ತನಿಖೆಯ ಭಾಗವಾಗಿ ಎನ್‌ಐಎ ಅಧಿಕಾರಿಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ಸೂಕ್ಷ್ಮ ವಲಯ ಎಂದು ಗುರುತಿಸಲಾಗಿರುವ ಕೆಲವು ಗಡಿ ಪ್ರದೇಶಗಳ ಮೇಲೆಯೂ ಕಣ್ಣಿರಿಸಿದ್ದಾರೆ. ಆ ಪ್ರದೇಶಗಳ ಮೂಲಕ ಭಯೋತ್ಪಾದಕರು ಒಳನುಸುಳುತ್ತಿರಬಹುದು, ಅಲ್ಲಿ ಶಂಕಿತ ಭಯೋತ್ಪಾದಕರ ಅಡಗುದಾಣಗಳು ಇವೆ ಎನ್ನಲಾಗಿದೆ.

ಪಹಲ್ಗಾಮ್ ದಾಳಿಕೋರರಿಗೆ ನೆರವು ಒದಗಿಸಿದ ಆರೋಪದ ಅಡಿಯಲ್ಲಿ ಅಂದಾಜು 20 ಮಂದಿಯನ್ನು ವಿಚಾರಣೆಗೆ ಗುರಿಪಡಿಸಲಾಗಿದೆ.

ಕಠಿಣ ಕಾನೂನಾಗಿರುವ ‘ಸಾರ್ವಜನಿಕ ಸುರಕ್ಷತಾ ಕಾಯ್ದೆ’ಯ ಅಡಿಯಲ್ಲಿ 100ಕ್ಕೂ ಹೆಚ್ಚು ಮಂದಿ ಶಂಕಿತರನ್ನು ಈಗಾಗಲೇ ವಶಕ್ಕೆ ಪಡೆಯಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ಕಾಯ್ದೆಯ ಅಡಿಯಲ್ಲಿ ಶಂಕಿತರನ್ನು ವಿಚಾರಣೆ ಇಲ್ಲದೆ ಗರಿಷ್ಠ ಎರಡು ವರ್ಷಗಳವರೆಗೆ ವಶದಲ್ಲಿ ಇರಿಸಿಕೊಳ್ಳಲು ಅವಕಾಶ ಇದೆ.

ದಾಳಿಗೆ ಮೊದಲೇ ಎಚ್ಚರಿಕೆ ನೀಡಿದ್ದ ಗುಪ್ತಚರ ಸಂಸ್ಥೆ

ನವದೆಹಲಿ/ಶ್ರೀನಗರ (ಪಿಟಿಐ): ಪಹಲ್ಗಾಮ್‌ನಲ್ಲಿ ಭಯೋತ್ಪಾದಕರ ದಾಳಿ ನಡೆಯುವ ಕೆಲವೇ ದಿನಗಳ ಮೊದಲು ಗುಪ್ತಚರ ಸಂಸ್ಥೆಗಳು, ಪ್ರವಾಸಿಗರನ್ನು ಗುರಿಯಾಗಿಸಿಕೊಂಡು ಉಗ್ರರಿಂದ ದಾಳಿ ನಡೆಯಬಹುದು ಎಂಬ ಎಚ್ಚರಿಕೆ ನೀಡಿದ್ದವು.

ಅದರಲ್ಲೂ ಮುಖ್ಯವಾಗಿ, ಶ್ರೀನಗರದ ಹೊರವಲಯದಲ್ಲಿರುವ ಝಬರ್ವಾನ್ ವಲಯದ ಹೋಟೆಲ್‌ಗಳಲ್ಲಿ ವಾಸ್ತವ್ಯ ಹೂಡುವ ಪ್ರವಾಸಿಗರನ್ನು ಉಗ್ರರು ಗುರಿ ಮಾಡಿಕೊಳ್ಳಬಹುದು ಎಂದು ಅವು ಎಚ್ಚರಿಸಿದ್ದವು. ಈ ಕಾರಣದಿಂದಾಗಿ ಈ ಪ್ರದೇಶಗಳಲ್ಲಿ ಭದ್ರತೆಯನ್ನು ಹೆಚ್ಚು ಮಾಡಲಾಗಿತ್ತು. ಅಲ್ಲದೆ, ಹಿರಿಯ ಪೊಲೀಸ್ ಅಧಿಕಾರಿಗಳು ಶ್ರೀನಗರದಲ್ಲೇ ಇದ್ದು, ದಾಚೀಗಾಮ್, ನಿಶಾತ್ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಉಗ್ರರ ಪತ್ತೆ ಕಾರ್ಯಾಚರಣೆಯ ಉಸ್ತುವಾರಿ ವಹಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಗುಪ್ತಚರ ಮಾಹಿತಿ ಆಧರಿಸಿ ಭದ್ರತಾ ಪಡೆಗಳು ಶ್ರೀನಗರದ ಹೊರ ವಲಯಗಳಲ್ಲಿ ವ್ಯಾಪಕ ಶೋಧ ಕಾರ್ಯ ನಡೆಸಿದ್ದವು. ಆದರೆ ಈ ಕಾರ್ಯಾಚರಣೆಗಳಿಂದ ಹೆಚ್ಚಿನ ಪ್ರಯೋಜನ ಆಗಲಿಲ್ಲ. ಹೀಗಾಗಿ ಏಪ್ರಿಲ್ 22ರಂದು ಶೋಧ ಕಾರ್ಯಾಚರಣೆ ನಿಲ್ಲಿಸಲಾಯಿತು. ಅದೇ ದಿನ ಉಗ್ರರು ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಗುರಿಯಾಗಿಸಿ ದಾಳಿ ನಡೆಸಿದರು.


ಕಾತ್ರಾದಿಂದ ಶ್ರೀನಗರವನ್ನು ಸಂಪರ್ಕಿಸುವ ಮೊದಲ ರೈಲಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ತಿಂಗಳು ಹಸಿರು ನಿಶಾನೆ ತೋರಬೇಕಿದ್ದ ಸಂದರ್ಭದಲ್ಲಿಯೇ ದುಷ್ಕೃತ್ಯ ನಡೆಸಲು ಉಗ್ರರು ಬಯಸಿದ್ದರು ಎನ್ನುವ ಸೂಚನೆಗಳೂ ಇದ್ದವು ಎಂದು ಮೂಲಗಳು ವಿವರಿಸಿವೆ.

ಆದರೆ, ಏಪ್ರಿಲ್ 19ಕ್ಕೆ ನಿಗದಿಯಾಗಿದ್ದ ಪ್ರಧಾನಿ ಭೇಟಿಯನ್ನು ಕೆಟ್ಟ ಹವಾಮಾನದ ಮುನ್ಸೂಚನೆಯ ಕಾರಣದಿಂದಾಗಿ ಮುಂದೂಡಲಾಯಿತು.

ಸ್ಥಳೀಯ ಇಬ್ಬರು ಭಯೋತ್ಪಾದಕರು ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಜೊತೆಯಲ್ಲೇ ಇದ್ದರು. ಮೊದಲು ಗುಂಡು ಹಾರಿದ ತಕ್ಷಣ ಅವರು ಪ್ರವಾಸಿಗರನ್ನು ಅಲ್ಲಿನ ತಿಂಡಿ ತಿನಿಸುಗಳ ಮಳಿಗೆಗಳ ಕಡೆ ಕರೆದೊಯ್ದರು. ಅಲ್ಲಿದ್ದ ಇನ್ನಿಬ್ಬರು ಭಯೋತ್ಪಾದಕರು (ಇವರು ಪಾಕಿಸ್ತಾನ ಮೂಲದವರು ಎನ್ನಲಾಗಿದೆ) ಗುಂಡು ಹಾರಿಸಲಾರಂಭಿಸಿದರು, 26 ಜನರ ಸಾವಿಗೆ ಕಾರಣರಾದರು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರರ ಚಟುವಟಿಕೆಗಳಲ್ಲಿ ಕಳವಳಕಾರಿ ಬೆಳವಣಿಗೆಯೊಂದರ ಬಗ್ಗೆ ಅಧಿಕಾರಿಗಳು ಗಮನ ಸೆಳೆದಿದ್ದಾರೆ. ಆಧುನಿಕ ಶಸ್ತ್ರಾಸ್ತ್ರಗಳಾದ ಎಂ–ಸರಣಿಯ ರೈಫಲ್‌ಗಳು, ಸ್ನೈಪರ್ ರೈಫಲ್‌ಗಳು ಮತ್ತು ಗುಂಡು ನಿರೋಧಕಗಳನ್ನು ಸೀಳಿಕೊಂಡು ಹೋಗುವ ಗುಂಡುಗಳನ್ನು ಎನ್‌ಕೌಂಟರ್ ನಡೆದ ಸ್ಥಳಗಳಿಂದ ವಶಪಡಿಸಿಕೊಳ್ಳಲಾಗಿದೆ. ನೇಟೊ ಪಡೆಗಳು ಅಫ್ಗಾನಿಸ್ತಾನದಲ್ಲಿ ಬಿಟ್ಟುಹೋದ ಈ ಶಸ್ತ್ರಾಸ್ತ್ರಗಳು ಉಗ್ರರ ಕೈಗೆ ಸಿಕ್ಕಿವೆ ಎನ್ನಲಾಗಿದೆ.

ಭಯೋತ್ಪಾದಕರ ವಿರುದ್ಧದ ಕಾರ್ಯಾಚರಣೆಯ ಭಾಗವಾಗಿ ಮನೆಗಳನ್ನು ಸ್ಫೋಟಿಸುವುದನ್ನು ಈಗ ಜಮ್ಮು ಮತ್ತು ಕಾಶ್ಮೀರ ಸರ್ಕಾರದ ಮನವಿ ಆಧರಿಸಿ ನಿಲ್ಲಿಸಲಾಗಿದೆ ಎಂದು ಅಧಿಕಾರಿ ಮಾಹಿತಿ ನೀಡಿದರು.



ಪಾಕ್ ಕ್ಷಿಪಣಿ ಪರೀಕ್ಷೆ ಯಶಸ್ವಿ

ಇಸ್ಲಾಮಾಬಾದ್ (ಪಿಟಿಐ/ಎಎಫ್‌ಪಿ): ನಿರ್ದಿಷ್ಟ ಗುರಿ ಕೇಂದ್ರೀಕರಿಸಿ ದಾಳಿ ನಡೆಸುವ ಸಾಮರ್ಥ್ಯವುಳ್ಳ ‘ಅಬ್ದಾಲಿ’ ಬ್ಯಾಲಿಸ್ಟಿಕ್ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಪಾಕಿಸ್ತಾನವು ಶನಿವಾರ ಯಶಸ್ವಿಯಾಗಿ ನಡೆಸಿದೆ.

ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತದೊಂದಿಗೆ ಉದ್ವಿಗ್ನತೆ ಹೆಚ್ಚಿರುವ ಸಮಯದಲ್ಲೇ ಈ ಬೆಳವಣಿಗೆ ನಡೆದಿದೆ. 450 ಕಿ.ಮೀ ದೂರ ಸಾಗಬಲ್ಲ ಸಾಮರ್ಥ್ಯವನ್ನು ಈ ಕ್ಷಿಪಣಿ ಹೊಂದಿದೆ.

‘ಸಶಸ್ತ್ರ ಪಡೆಗಳ ಕಾರ್ಯಾಚರಣೆಯ ಸಿದ್ಧತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಕ್ಷಿಪಣಿಯ ಸುಧಾರಿತ ಸಂಚಾರ ವ್ಯವಸ್ಥೆ ಮತ್ತು ತಾಂತ್ರಿಕ ಗುಣ ಲಕ್ಷಣಗಳನ್ನು ಪರೀಕ್ಷೆಗೆ ಒಳಪಡಿಸುವುದು ಇದರ ಉದ್ದೇಶವಾಗಿತ್ತು’ ಎಂದು ಸೇನೆಯ ಪ್ರಕಟಣೆ ತಿಳಿಸಿದೆ. ‘ಆಪರೇಷನ್ ಇಂಡಸ್’ ಸಮರಾಭ್ಯಾಸದ ಭಾಗವಾಗಿ ಈ ಪರೀಕ್ಷೆ ನಡೆದಿದೆ ಎಂದು ಹೇಳಿದೆ. ಆದರೆ ಈ ಸಮರಾಭ್ಯಾಸದ ಬಗ್ಗೆ ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಿಲ್ಲ.

ಸೇನೆಯ ಯುದ್ಧ ತಂತ್ರ ಪಡೆ ಮತ್ತು ಯುದ್ಧ ತಂತ್ರ ವಿಭಾಗದ ಹಿರಿಯ ಅಧಿಕಾರಿಗಳು ಅಲ್ಲದೆ, ಪಾಕಿಸ್ತಾನದ ವಿವಿಧ ಯುದ್ಧ ತಂತ್ರ ಸಂಸ್ಥೆಗಳ ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳು ಪರೀಕ್ಷಾರ್ಥ ಪ್ರಯೋಗಕ್ಕೆ ಸಾಕ್ಷಿಯಾದರು.

‘ಎಚ್ಚರಿಕೆಯ ಸಂದೇಶ’: ‘ಅಬ್ದಾಲಿ’ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವು ‘ಭಾರತಕ್ಕೆ ನೀಡಿದ ಎಚ್ಚರಿಕೆಯ ಸಂದೇಶ’ ಎಂದು ಪಾಕಿಸ್ತಾನದ ಮಿಲಿಟರಿ ವಿಶ್ಲೇಷಕ ಹಸನ್ ಅಸ್ಕರಿ ರಿಜ್ವಿ ಹೇಳಿದ್ದಾರೆ.

‘ಪ್ರಚೋದನೆಯ ಕೃತ್ಯ’

ನವದೆಹಲಿ: ಪಾಕಿಸ್ತಾನವು ಕ್ಷಿಪಣಿ ಪರೀಕ್ಷೆ ನಡೆಸಿರುವುದನ್ನು ಭಾರತವು ‘ಪ್ರಚೋದನೆಯ ಕೃತ್ಯ’ ಎಂದು ಪರಿಗಣಿಸಿರುವುದಾಗಿ ಮೂಲಗಳು ತಿಳಿಸಿವೆ. ‘ಪಾಕಿಸ್ತಾನವು ಖಂಡಾಂತರ ಕ್ಷಿಪಣಿ ಪರೀಕ್ಷೆ ನಡೆಸಿರುವುದು ತಿಳಿದು ಬಂದಿದೆ. ಇದು ‘ಇನ್ನಷ್ಟು ಪ್ರಚೋದಿಸುವ’ ಮತ್ತು ‘ಉದ್ವಿಗ್ನತೆಯನ್ನು ಹೆಚ್ಚಿಸುವ ಹತಾಶ ಪ್ರಯತ್ನ’ವಲ್ಲದೆ ಬೇರೇನೂ ಅಲ್ಲ’ ಎಂದು ಭಾರತದ ಅಧಿಕಾರಿಯೊಬ್ಬರು ಪ್ರತಿಕ್ರಿಯೆ ನೀಡಿದ್ದಾರೆ. ಆದರೆ, ಪಾಕ್‌ನ ಕ್ಷಿಪಣಿ ಪರೀಕ್ಷೆಯ ಬಗ್ಗೆ ಭಾರತ ಸರ್ಕಾರ ಅಥವಾ ಸೇನೆ ಯಾವುದೇ ಅಧಿಕೃತ ಪ್ರತಿಕ್ರಿಯೆ ನೀಡಿಲ್ಲ.

ಶಂಕಿತನಿಗಾಗಿ ಕೊಲಂಬೊ ವಿಮಾನ ನಿಲ್ದಾಣದಲ್ಲಿ ಶೋಧ

ಕೊಲಂಬೊ (ಪಿಟಿಐ): ಪಹಲ್ಗಾಮ್ ದಾಳಿಯ ಜೊತೆ ನಂಟು ಹೊಂದಿರುವ ಶಂಕಿತನೊಬ್ಬ ಇದ್ದಿರಬಹುದು ಎಂಬ ಸುಳಿವು ಪಡೆದ ಶ್ರೀಲಂಕಾ ಪೊಲೀಸರು, ಚೆನ್ನೈನಿಂದ ಇಲ್ಲಿಗೆ ಶನಿವಾರ ಬಂದ ವಿಮಾನವೊಂದನ್ನು ತಪಾಸಣೆಗೆ ಒಳಪಡಿಸಿದರು.

ಭಂಡಾರನಾಯಕೆ ವಿಮಾನ ನಿಲ್ದಾಣಕ್ಕೆ ಮಧ್ಯಾಹ್ನ 11.59ಕ್ಕೆ ಚೆನ್ನೈನಿಂದ ಬಂದ ವಿಮಾನವನ್ನು ಸಮಗ್ರ ತಪಾಸಣೆಗೆ ಒಳಪಡಿಸಲಾಯಿತು ಎಂದು ಶ್ರೀಲಂಕನ್ ಏರ್‌ಲೈನ್ಸ್‌ನ ಪ್ರಕಟಣೆ ತಿಳಿಸಿದೆ.

ಭಾರತಕ್ಕೆ ಬೇಕಾಗಿರುವ ಶಂಕಿತ ವ್ಯಕ್ತಿಯೊಬ್ಬ ಈ ವಿಮಾನದಲ್ಲಿ ಇದ್ದಾನೆ ಎಂದು ಭಾವಿಸಿ ಚೆನ್ನೈ ಪ್ರದೇಶ ನಿಯಂತ್ರಣ ಕೇಂದ್ರದಿಂದ ಎಚ್ಚರಿಕೆಯ ಸಂದೇಶ ಬಂದಿತ್ತು. ಇದನ್ನು ಆಧರಿಸಿ ಶೋಧ ಕಾರ್ಯ ನಡೆಸಲಾಯಿತು.

ಮತ್ತೆ ಮುಗ್ಗರಿಸಿದ ಭಾರತದ ವನಿತೆಯರು

ಆಸ್ಟ್ರೇಲಿಯಾಕ್ಕೆ ಹಾಕಿ ಸರಣಿ

ಪರ್ತ್ (ಪಿಟಿಐ): ಭಾರತ ಮಹಿಳಾ ಹಾಕಿ ತಂಡವು ಶನಿವಾರ ನಡೆದ ದ್ವಿಪಕ್ಷೀಯ ಸರಣಿಯ ಎರಡನೇ ಪಂದ್ಯದಲ್ಲಿ ಶನಿವಾರ ಉತ್ತಮ ಹೋರಾಟ ತೋರಿದರೂ 2–3 ಗೋಲುಗಳಿಂದ ಆಸ್ಟ್ರೇಲಿಯಾ ವಿರುದ್ಧ ಸೋಲು ಕಂಡಿತು.

ಮೂರು ಪಂದ್ಯಗಳ ಸರಣಿಯನ್ನು ಆತಿಥೇಯ ತಂಡವು ಒಂದು ಪಂದ್ಯ ಬಾಕಿ ಇರುವಂತೆ 2–0 ಯಿಂದ ವಶಮಾಡಿಕೊಂಡಿತು. ಮೊದಲ ಪಂದ್ಯದಲ್ಲಿ ಭಾರತ 0–2 ಗೋಲುಗಳಿಂದ ಪರಾಭವಗೊಂಡಿತ್ತು. ಅಂತಿಮ ಪಂದ್ಯ ಭಾನುವಾರ ನಡೆಯಲಿದೆ.

ಪರ್ತ್ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಗ್ರೇಸ್ ಸ್ಟೀವರ್ಟ್ ಅವರು ಎರಡನೇ ನಿಮಿಷದಲ್ಲೇ ಗೋಲು ಹೊಡೆದು, ಆಸ್ಟ್ರೇಲಿಯಾ ತಂಡಕ್ಕೆ ಮುನ್ನಡೆ ದೊರಕಿಸಿಕೊಟ್ಟರು. 35ನೇ ನಿಮಿಷ ಭಾರತದ ನವನೀತ್ ಕೌರ್ ಅಮೋಘ ರೀತಿಯಲ್ಲಿ ಗೋಲು ದಾಖಲಿಸಿದ್ದು, ಉಭಯ ತಂಡಗಳ ಸ್ಕೋರ್ ಸಮಬಲಗೊಂಡಿತು.


ನವನೀತ್ ಕೌರ್

ಅದರ ಬೆನ್ನಲ್ಲೇ ಜೇಡ್ ಸ್ಮಿತ್ (36ನೇ) ಮತ್ತು ಗ್ರೇಟಾ ಹೇಯ್ಸ್ (43ನೇ) ಚೆಂಡನ್ನು ಗುರಿ ಸೇರಿಸಿ, ಆಸ್ಟ್ರೇಲಿಯಾ ತಂಡಕ್ಕೆ ಮಹತ್ವದ ಮುನ್ನಡೆ ಒದಗಿಸಿದರು. ಕೊನೆಯ ಕ್ಷಣದಲ್ಲಿ ಲಾಲ್ರೆಮ್ಸಿಯಾಮಿ (59ನೇ) ಗೋಲು ಹೊಡೆದು, ಭಾರತದ ಸೋಲಿನ ಅಂತರವನ್ನು ಕಡಿಮೆ ಮಾಡಿದರು.

ಆಸ್ಟ್ರೇಲಿಯಾ ಪ್ರವಾಸದಲ್ಲಿರುವ ಭಾರತ ತಂಡಕ್ಕೆ ಇದು ಸತತ ನಾಲ್ಕನೇ ಸೋಲಾಗಿದೆ. ಸರಣಿಗೂ ಮುನ್ನ ನಡೆದ ಅಭ್ಯಾಸ ಪಂದ್ಯಗಳಲ್ಲಿ ಸಲೀಮಾ ಟೆಟೆ ಬಳಗವು 3–5 ಮತ್ತು 2–3ರಿಂದ ಆಸ್ಟ್ರೇಲಿಯಾ 'ಎ' ವಿರುದ್ಧದ ಪಂದ್ಯಗಳಲ್ಲಿ ಸೋಲನುಭವಿಸಿತ್ತು.

ಚೆಸ್ ಟೂರ್ನಿ: ಅಗ್ರಸ್ಥಾನದಲ್ಲಿ ಶ್ಯಾಮ್

ಮಂಗಳೂರು: ಅಗ್ರ ಶ್ರೇಯಾಂಕ ಪಡೆದಿರುವ ತಮಿಳುನಾಡಿನ ಆಟಗಾರ ಶ್ಯಾಮ್ ಆರ್. ಅವರು ದಕ್ಷಿಣ ಕನ್ನಡ ಜಿಲ್ಲಾ ಚೆಸ್ ಸಂಸ್ಥೆ ಆಶ್ರಯದ ಕ್ಲಾಸಿಕಲ್ ರೇಟೆಡ್ ರಾಷ್ಟ್ರೀಯ ಮುಕ್ತ ಚೆಸ್ ಟೂರ್ನಿಯ ಅಗ್ರಸ್ಥಾನ ಹಂಚಿಕೊಂಡರು. ಶ್ರೇಯಾಂಕ ಪಟ್ಟಿಯಲ್ಲಿ 162ನೇ ಸ್ಥಾನದಲ್ಲಿರುವ ಕೇರಳದ ನಜಾ ಫಾತಿಮಾ ಕೂಡ ಮಿಂಚಿದರು.

